# ಪ್ರಸಾದ

**ಸಂಪುಟ 28 ಸಂಚಿಕೆ 6** **ನವೆಂಬರ್-ಡಿಸೆಂಬರ್ 2013**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004



**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**
ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಮ.ಗು. ಸದಾನಂದಯ್ಯ
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಪದ್ಮಾ ಶೇಖರ್
ಡಾ. ಎನ್. ಎಸ್. ತಾರಾನಾಥ
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

# ಪರಿವಿಡಿ

ಸಂಪಾದಕೀಯ 5

ಗುರುವಾಣಿ 9

ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಪ್ರಸ್ತುತತೆ 11
**ಕೊತ್ತಲವಾಡಿ ಶಿವಕುಮಾರ್**

ಬಸವಣ್ಣ ಮತ್ತು ಗುರುನಾನಕ್: ಒಂದು ತೌಲನಿಕ ನೋಟ 22
**ಡಾ. ತಿಪ್ಪೇಸ್ವಾಮಿ**

ವಚನ-ವೈಭವ 41
**ವಿದ್ವಾನ್ ವಿ. ನಂಜುಂಡಸ್ವಾಮಿ**

ವಾರ್ತಾವಿಹಾರ 52

**ಮುಖಪುಟ ಚಿತ್ರ**

ಆರ್ಟ್ ಆಫ್ ಲಿವಿಂಗ್ ಮತ್ತು ಭಾರತೀಯ ಸಾಂಸ್ಕೃತಿಕ ಪರಿಷತ್ ವತಿಯಿಂದ ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್‌ನಲ್ಲಿ ನಡೆದ ಯುವ ಸನ್ಯಾಸಿಗಳ ಸಂಸ್ಕೃತಿ ಚಿಂತನ ಶಿಬಿರದ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಹಾಗೂ ಶ್ರೀ ರವಿಶಂಕರ್ ಗುರೂಜಿ

## ಲೇಖಕರ ವಿಳಾಸ


**ಕೊತ್ತಲವಾಡಿ ಶಿವಕುಮಾರ್**
ಉಪನ್ಯಾಸಕರು
ನಂ. 2600, 2ನೇ ಅಡ್ಡ ರಸ್ತೆ
ಗಾಂಧಿ ನಗರ, ಮಂಡ್ಯ 571 401

**ಡಾ. ತಿಪ್ಪೇಸ್ವಾಮಿ**
ನಂ. 369, 'ಎ' ಮತ್ತು 'ಬಿ' ಬ್ಲಾಕ್
ಕುವೆಂಪುನಗರ
ಮೈಸೂರು 570 023

**ವಿದ್ವಾನ್ ವಿ. ನಂಜುಂಡಸ್ವಾಮಿ**
ನಂ. 1704, "ಶಿವಶಕ್ತಿ"
'ಪಿ' ಮತ್ತು 'ಟಿ' ಬ್ಲಾಕ್, 3ನೇ ಕ್ರಾಸ್
ಉತ್ತರ ಅನಿಕೇತನ ರಸ್ತೆ
ಕುವೆಂಪುನಗರ
ಮೈಸೂರು 570 023


# ಸಂಪಾದಕೀಯ

ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿನ ಗಡಿಗ್ರಾಮ-ಕರ್ತಾಳು. ಕಾವೇರಿ ನದಿಯ ದಡದಲ್ಲಿರುವ ಈ ಗ್ರಾಮ ಅಚ್ಚಹಸಿರಿನಿಂದ ಕಂಗೊಳಿಸುವ ಪರಿಸರದಲ್ಲಿದ್ದು ಸಾಕಷ್ಟು ಸಮೃದ್ಧಿಯಿಂದಲೂ ಕೂಡಿದೆ. ಕಾಲ ಧರ್ಮಕ್ಕೆ ಅನುಗುಣವಾಗಿ ಇಲ್ಲಿನ ಯುವಕ ಯುವತಿಯರು ಉನ್ನತ ವಿದ್ಯಾಭ್ಯಾಸವನ್ನು ಪಡೆದುಕೊಂಡು, ದೂರದ ನಗರಪ್ರದೇಶಗಳಲ್ಲಿ, ಹೊರದೇಶಗಳಲ್ಲಿ ವಾಸಿಸತೊಡಗಿದ್ದಾರೆ. ಹಿರಿಯರು ಎಂದಿನಂತೆ ಪಿತ್ರಾರ್ಜಿತವಾಗಿ ಬಂದ ಹೊಲ ಗದ್ದೆಗಳಲ್ಲಿ ಉಳುಮೆ ಮಾಡುತ್ತಾ, ತಮ್ಮ ಮಕ್ಕಳು, ಮೊಮ್ಮಕ್ಕಳು ನಗರ ಪ್ರದೇಶಗಳಲ್ಲಿ ವಾಸ್ತವ್ಯ ಹೂಡಿ ಅಲ್ಲಿ ಮನೆ ಕಟ್ಟಿದ್ದು, ನಿವೇಶನ ಕೊಂಡಿದ್ದು, ಆಧುನಿಕ ವಾಹನಗಳಲ್ಲಿ ಓಡಾಡುವುದನ್ನು ಸಂತಸದಿಂದ ಲೋಕಾರೂಢಿಯಂತೆ ಮಾತನಾಡಿಕೊಳ್ಳುತ್ತಾ ದಿನಗಳನ್ನು ನೂಕುತ್ತಿದ್ದಾರೆ. ತಮಗಿಂತ ತಮ್ಮ ಮಕ್ಕಳ ಬದುಕು ಸುಖಮಯ (?) ವಾಗಿರುವುದರ ಬಗ್ಗೆ ಅವರಲ್ಲಿ ಸಂತೋಷ ಕಂಡುಬಂದರೂ, ತಮ್ಮ ಕರುಳ ಕುಡಿಗಳು ತಮ್ಮ ಕಣ್ಣಾರೆಯಲ್ಲಿ, ಕೈ ಸೋಂಕಿ ನಂತರದಲ್ಲಿ ಇಲ್ಲದ್ದು, ಊರ ದೇವರ ಉತ್ಸವಗಳಲ್ಲಿ ಕಂಡುಬರುವ ಅವರ ಗೈರು ಹಾಜರಿ, ಹಬ್ಬ ಹರಿದಿನಗಳ ವಿಶೇಷ ಭೋಜನ ಸಂದರ್ಭಗಳಲ್ಲಿ ಮಕ್ಕಳಿಲ್ಲದ ಮನೆಯಲ್ಲಿ ತಾವು ತಾವೇ ಊಟ ಮಾಡಬೇಕಾಗಿ ಬಂದ ಪರಿಸ್ಥಿತಿಗಳ ಬಗ್ಗೆ ಅವರ ಎದೆಯಾಳದಲ್ಲಿ ಎಲ್ಲೋ ಒಂದು ಕಡೆ 'ಸಂಕಟ'ದ ಅನುಭವವೂ ಉಂಟಾಗುತ್ತದೆ. ಇದು ಪ್ರಾಯಃ ಈ ಗ್ರಾಮದ ಸ್ಥಿತಿ ಮಾತ್ರವಲ್ಲ; ಎಲ್ಲ ಗ್ರಾಮಗಳ ಸ್ಥಿತಿಯೂ ಹೆಚ್ಚು ಕಡಿಮೆ ಈ ತೆರನದ್ದೇ ಆಗಿದೆ. ಅವರವರ ಬದುಕು ಅವರವರಿಗೆ ಎನ್ನುವ ಅನಿವಾರ್ಯತೆ ಎಲ್ಲ ಕಡೆ ಕಂಡುಬರುತ್ತಿದೆ. ತಂದೆತಾಯಿಗಳ ಸಾಂಪ್ರದಾಯಿಕ ಬದುಕಿನ ಕ್ರಮ, ಆಧುನಿಕರಿಗೆ 'ಜಡ'ವಾಗಿ ಕಂಡರೆ, ಯುವಜನಾಂಗದ ಬದುಕಿನ ರೀತಿ ನೀತಿಗಳು ಹಿರಿಯರಿಗೆ 'ದಿಗ್‌ಭ್ರಮೆ'ಯನ್ನು ಉಂಟುಮಾಡುತ್ತಿದೆ. ಬೆರಳೆಣಿಕೆಯ ಚಿಂತನಶೀಲರು ಮಧ್ಯಮ ಮಾರ್ಗದ ರೀತಿ ರಿವಾಜುಗಳ ಅನ್ವೇಷಣೆಯಲ್ಲಿ ತಲೆ ಕೆಡಿಸಿಕೊಳ್ಳತೊಡಗಿದ್ದಾರೆ.

ನಮ್ಮ ಯುವ ಜನಾಂಗವು ಒಂದು ರೀತಿಯ ಜಾಹಿರಾತಿನ, ಪ್ರಚಾರ ಬದುಕಿನ ಬೆನ್ನುಹತ್ತಿ, ಮಾರುಕಟ್ಟೆ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಲು ಧಾವಂತದಿಂದ ಮುನ್ನುಗ್ಗುತ್ತಿದ್ದರೆ, ಕುಟುಂಬದ ಹಿರಿಯರು ಅತಂತ್ರಗೊಂಡಿರುವ ಮನುಷ್ಯ ಸಂಬಂಧಗಳ ಬೇರುಗಳನ್ನು ಹುಡುಕುತ್ತಾ, ವಯೋಮಾನಸಹಜವಾದ ಶಿಥಿಲತೆಯಿಂದ

ಕಂಗೆಟ್ಟು ಕರುಳ ಕುಡಿಗಳ ಸಾನ್ನಿಧ್ಯಕ್ಕಾಗಿ ಹಾತೊರೆಯುತ್ತಾ ಕಾಲ ನೂಕುತ್ತಿದ್ದಾರೆ. ಹೊಟ್ಟೆಯ ಸಮಸ್ಯೆ ಇಂದು ನಮ್ಮನ್ನು ಎಂದಿನಂತೆ ಕಾಡುತ್ತಿಲ್ಲ. ಸರ್ಕಾರದ ಅನೇಕ ರೀತಿಯ ಸವಲತ್ತುಗಳು ಹೆಚ್ಚಿನ ಜನರ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸಿವೆ. ಆದರೆ ಕುಟುಂಬ ಸಂಬಂಧಗಳ ಕೊಂಡಿಯೇ ಕಳಚುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಆಪ್ತ ವಾತಾವರಣ ರಹಿತರಾದ ಹಿರಿಯರನ್ನು ಸಾಂತ್ವನಗೊಳಿಸುವ ಜವಾಬ್ದಾರಿ ಯಾರದು? ಅದು ಕಾನೂನಿಂದ, ಸರ್ಕಾರದ ಯೋಜನೆಗಳಿಂದ ಸಾಧ್ಯವಾಗದ ಕೆಲಸ. ತಮ್ಮನ್ನು ಹೆತ್ತು ಹೊತ್ತವರು ಪರಕೀಯ ಪ್ರಜ್ಞೆಯಿಂದ ಬಳಲಬಾರದು; ಅವರ ಬದುಕಿನ ಕೊನೆಯ ದಿನಗಳು ನೆಮ್ಮದಿಯಿಂದ ಇರಬೇಕು ಎನ್ನುವ ಪ್ರಜ್ಞೆ ಅವರವರ ಕರುಳ ಕುಡಿಗಳಲ್ಲಿ ಮೊಳೆಯ ಬೇಕು. ಅನೇಕ ನಗರಗಳಲ್ಲಿ ಐಶಾರಾಮಿ ವೃದ್ಧಾಶ್ರಮಗಳು ಕಂಡುಬರುತ್ತವೆ. ಆದರೆ ಅಲ್ಲಿನ ಹಿರಿಯರು ಎಲ್ಲ ಇದ್ದೂ ಏನೂ ಇಲ್ಲದಂತೆ ಬಳಲುತ್ತಿದ್ದಾರೆ. ಆ ಬಳಲುವಿಕೆಗೆ ಇರುವ ಏಕೈಕ ಕಾರಣವೆಂದರೆ ತಾವು ತಮ್ಮ ಮಕ್ಕಳುಮರಿಗಳಿಂದ ಪರಿತ್ಯಕ್ತರಾಗಿ, ಅವರಿಗೆ ಬೇಡವಾಗಿದ್ದೇವೆ ಎನ್ನುವ ಅನಾಥ ಭಾವ.

ದಿನಾಂಕ 10.11.2013 ರಂದು ಕರ್ತಾಳು ಗ್ರಾಮದಲ್ಲಿ ನಡೆದ ಅಪರೂಪದ ಸಮಾರಂಭದ ಹಿನ್ನೆಲೆಯಲ್ಲಿ ಈ ಮಾತುಗಳನ್ನು ಬರೆಯಬೇಕಾಯಿತು. ಕರ್ತಾಳು ಗ್ರಾಮದ ಪ್ರಸಿದ್ಧ ಮನೆತನ ಪಟೇಲ್ ಪುಟ್ಟಪ್ಪನವರದು. ಅವರ ಪತ್ನಿ ಧರ್ಮಭೀರುವಾದ ಶ್ರೀಮತಿ ಮಲ್ಲಮ್ಮ. ಅವರಿಗೆ ಈಗ 93 ವರ್ಷ ವಯಸ್ಸು. ಇವರಿಗೆ ಐದು ಜನ ಪುತ್ರರು, ಓರ್ವ ಪುತ್ರಿ. ಎಲ್ಲರೂ ಬೇರೆ ಬೇರೆ ವೃತ್ತಿಯನ್ನು ಕೈಗೊಂಡು ನೆಮ್ಮದಿಯಿಂದ ಇದ್ದಾರೆ. ಇವರು ತಮ್ಮ ತಾಯಿಯವರಾದ ಶ್ರೀಮತಿ ಮಲ್ಲಮ್ಮ ಅವರಿಗೆ ಮಾಡಿದ 'ಮಾತೃನಮನ' ಕಾರ್ಯಕ್ರಮ ಈ ಊರಿನ, ಅಷ್ಟೇ ಅಲ್ಲ ಅಕ್ಕಪಕ್ಕದ ಅನೇಕ ಗ್ರಾಮಗಳ ಗಮನ ಸೆಳೆದಿತ್ತು. ಈ ಕಾರಣಕ್ಕಾಗಿಯೇ ನಿರೀಕ್ಷೆಗೂ ಮೀರಿದ ಬಂಧುಬಾಂಧವರು, ಅಭಿಮಾನಿಗಳು, ಕುತೂಹಲಿಗಳು ಅಂದು ಅಲ್ಲಿ ಸೇರಿದ್ದರು. ಶ್ರೀಮತಿ ಮಲ್ಲಮ್ಮನವರ ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳು ಎಲ್ಲರೂ ತುಂಬಾ ಉತ್ಸಾಹದಿಂದ ಸಮಾರಂಭವನ್ನು ವ್ಯವಸ್ಥೆ ಮಾಡಿದ್ದರು. ಇಂತಹ ಸಮಾರಂಭವನ್ನೇ ಕಂಡಿರದ ಅನೇಕರಿಗೆ ಇದು ಅಚ್ಚರಿ ಮೂಡಿಸಿತ್ತು. ಈ ಕಾರ್ಯಕ್ರಮದ ಉದ್ದೇಶವನ್ನು ಕುರಿತು ಅವರ ಪುತ್ರ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಕೆ.ಪಿ. ಮಹದೇವಪ್ಪನವರು ಆಹ್ವಾನ ಪತ್ರಿಕೆಯ ಒಂದು ಪುಟದಲ್ಲಿ ಹೀಗೆ ಅಚ್ಚು ಹಾಕಿಸಿದ್ದರು.

"ಆಧುನಿಕ ಬದುಕಿನಲ್ಲಿ ಮನುಷ್ಯ ಸಂಬಂಧಗಳ ಕೊಂಡಿಗಳು ಕಳಚಿಕೊಳ್ಳುತ್ತಿವೆ. ಇದಕ್ಕೆ ನಾವು ಸಮರ್ಥಿಸುವ ಕೃತಕ ಕಾರಣಗಳು ಏನೇ ಇರಲಿ, ಇದರಿಂದ ಕಿರಿಯರು ಎಲ್ಲಾ ಇದ್ದು ಇಲ್ಲದವರಂತೆ ಒಂಟಿಯಾಗುತ್ತಿದ್ದಾರೆ. ಹಿರಿಯ ಚೇತನಗಳು ಅಸಹಾಯಕತೆಯಿಂದ ಇಹಲೋಕದ ಅನಂತ ದುಃಖಗಳನ್ನು ಮೌನವಾಗಿ ಸಹಿಸಿಕೊಳ್ಳುತ್ತಿದ್ದಾರೆ. ನಾಗರಿಕ ಬದುಕು ಸೃಷ್ಟಿಸಿರುವ ದುರಂತವಿದು.



ಮಾತೃದೇವೋಭವ, ಪಿತೃದೇವೋಭವ ಎಂದು ಸದಾ ಅವರನ್ನು ಮನಸಾ ಪೂಜಿಸುತ್ತಿದ್ದ ಕಾಲ ಸದ್ದಿಲ್ಲದೆ ಸರಿಯುತ್ತಿದೆ. ಕಳೆದುಹೋದ ಎಂತಹ ವಸ್ತುವನ್ನೂ ಹಿಂದಕ್ಕೆ ಪಡೆಯಬಹುದು. ಆದರೆ ಮನುಷ್ಯ ಸಂಬಂಧಗಳ ಆಪ್ತತೆ, ಹೃದಯಸಂವಾದದ ಆನಂದಾನುಭವ ಯಾವ ಮಾರುಕಟ್ಟೆಯಲ್ಲೂ ಸಿಕ್ಕುವುದಿಲ್ಲ ಎನ್ನುವ ಪ್ರಜ್ಞೆ ನಮ್ಮಿಂದ ದೂರವಾಗುತ್ತಿರುವುದು ವಿಷಾದದ ಸಂಗತಿ. ದೇವಾಲಯಗಳಲ್ಲಿರುವ ಸ್ಥಾವರ ದೇವರುಗಳಿಗಿಂತ, ನಮಗೆ ಜನ್ಮಕೊಟ್ಟು ಜೋಪಾನಿಸಿ ಸತ್ಪ್ರಜೆಗಳನ್ನಾಗಿ ರೂಪಿಸಿದ ತಂದೆ ತಾಯಿಗಳು ನಿಜವಾದ ಜಂಗಮ ದೇವರುಗಳೆಂದು ನಾವು ಪೂಜೆಗೈಯ್ಯಬೇಕಾಗಿದೆ. ಆ ಮೂಲಕ ಅವರ ಏಕಾಂಗಿತನವನ್ನು ದೂರ ಮಾಡುತ್ತಲೇ ನಾವೂ ಸಹ ಅವರ ಪ್ರೀತಿಯ ಮಹಾಪೂರದಲ್ಲಿ ಮೈಮನಗಳನ್ನು ಶುದ್ಧಗೊಳಿಸಿಕೊಳ್ಳಬೇಕಿದೆ. ಈ ಎಲ್ಲ ಹಿನ್ನೆಲೆಯಲ್ಲಿ ನಾವು ಹಮ್ಮಿಕೊಂಡ ಕಾರ್ಯಕ್ರಮವೇ ಈ ಮಾತೃನಮನ".

ಈ ಮಾತುಗಳು ಇಡೀ ಸಮಾರಂಭದ ಭಾವಕೋಶವನ್ನು ಶಾಬ್ದೀಕರಿಸಿದಂತೆ ಭಾಸವಾಗುತ್ತವೆ.

ಇಲ್ಲಿನ ಒಂದೊಂದು ಮಾತು ಮತ್ತೆ ಮತ್ತೆ ಮೆಲುಕುಹಾಕುವಂತಿವೆ. ಮನುಷ್ಯ ಸಂಬಂಧಗಳ ಆಪ್ತತೆ ಕೊಡುವಂತಹ ನೆಮ್ಮದಿ, ನಿರಾಳಗಳ ಮಹತ್ವ ಇದರಿಂದ ಅರ್ಥವಾಗುತ್ತದೆ. ಹಾಗೆಯೇ 'ಹೃದಯಸಂವಾದ'ವಿಲ್ಲದ ಬರಿ ಮಾತುಗಳು ಉಂಟುಮಾಡುವ ದುರಂತವೂ ಸೂಕ್ಷ್ಮವಾಗಿ ಇದರಿಂದ ಅರ್ಥವಾಗುತ್ತದೆ.

ಶ್ರೀಮತಿ ಮಲ್ಲಮ್ಮನವರನ್ನು ಸಾರ್ವಜನಿಕವಾಗಿ ವೇದಿಕೆಯ ಮೇಲೆ ಕೂರಿಸಿ ಗೌರವ ಸಮರ್ಪಣೆ ಮಾಡಿ, ಕುಟುಂಬದ ಕಿರಿಯ ಸದಸ್ಯರೆಲ್ಲರೂ ಅವರ ಆಶೀರ್ವಾದವನ್ನು ಪಡೆದರು. ತನ್ನ ವಂಶದ ಒಂದೊಂದು ಕುಡಿಯೂ ಸನಿಹಕ್ಕೆ ಬಂದು ಪಾದಮುಟ್ಟಿ ನಮಸ್ಕಾರ ಮಾಡಿ ಆಶೀರ್ವಾದವನ್ನು ಬೇಡುವ ಪ್ರತಿ ಸಂದರ್ಭದಲ್ಲಿಯೂ ಅನಂತ ಆನಂದವನ್ನು ಅನುಭವಿಸುತ್ತಿದ್ದ ಅಪರ ವಯಸ್ಸಿನ ಮಲ್ಲಮ್ಮನವರ ಮುಖವೂ ಫಳಫಳನೆ ಹೊಳೆಯುತ್ತಿರುವಂತೆ ಭಾಸವಾಗುತ್ತಿತ್ತು. ತನಗೆ ಯಾವ ಸುಖಸಂಪತ್ತುಗಳೂ ತಂದುಕೊಡದ ಆನಂದದ ಮನಸ್ಥಿತಿಯನ್ನು ಶ್ರೀಮತಿ ಮಲ್ಲಮ್ಮನವರು ಅನುಭವಿಸುತ್ತಿದ್ದರು. ನಮ್ಮ ಪ್ರತಿ ಹಿರಿಯರೂ ನಮ್ಮಿಂದ ಬಯಸುವುದು ಇಂತಹ ಆನಂದದ ಕ್ಷಣಗಳನ್ನು ಮಾತ್ರ.

ಅಂದು ಮಲ್ಲಮ್ಮನವರನ್ನು ಮಾತ್ರ ಅವರ ಕುಟುಂಬದವರು ಗೌರವಿಸಲಿಲ್ಲ; ಅದೇ ವಯೋಮಾನದ ಆ ಊರಿನ ಅನೇಕ ಮಹಿಳೆಯರನ್ನು - ಜಾತಿ ವರ್ಗಗಳನ್ನು ಮೀರಿ ವೇದಿಕೆಯ ಮೇಲೆ ಗೌರವಿಸಿದುದು ಪಟೇಲ ಕುಟುಂಬದವರ ವಿಶಾಲ ಮನೋಭಾವಕ್ಕೆ ಸಾಕ್ಷಿಯಾಗಿತ್ತು. ಇಲ್ಲಿ ಅವರ ತಾಯಿ ಮಾತ್ರ ಅವರಿಗೆ ತಾಯಿಯಾಗಿ ಕಾಣಲಿಲ್ಲ; ಗ್ರಾಮದ ಎಲ್ಲ ಹಿರಿಯ ಮಹಿಳೆಯರೂ ಮಾತೃಸ್ವರೂಪರಾಗಿಯೇ ಕಂಡದ್ದು ಒಂದು ವಿಶೇಷ. ತಾಯಿ ಎನ್ನುವುದು ಕೇವಲ ಒಂದು ಜೀವಂತ ವ್ಯಕ್ತಿಯಲ್ಲ;

ಅದೊಂದು ತತ್ವ. ತ್ಯಾಗ, ಸಹನೆ, ಸೇವೆ, ಸಮನ್ವಯ, ಹೊಂದಾಣಿಕೆ - ಈ ಎಲ್ಲವುಗಳ ಸಾಕಾರ ರೂಪ ತಾಯಿ, ಆದ್ದರಿಂದಲೇ ಅದೊಂದು ತತ್ವ. ನಮ್ಮ ಆರ್ಷೇಯರು ಆ ಕಾರಣಕ್ಕೇ ಮೊದಲು 'ಮಾತೃದೇವೋಭವ' ಎಂದು ಹೇಳಿದರು. ಮಗುವೊಂದು ತಾಯಿಯ ಎದೆಯ ಹಾಲುಂಡು ಚೈತನ್ಯವನ್ನು ಪಡೆಯುತ್ತ ಬೆಳೆದಂತೆ ಬ್ರಹ್ಮಾಂಡದ ಸಕಲ ಚರಾಚರಗಳಿಂದ ಅಮೃತೋಪಮವಾದ ಒಂದೊಂದು ಶಕ್ತಿಯನ್ನು ಪಡೆದುಕೊಳ್ಳುತ್ತಾ, ವ್ಯಕ್ತಿ ಮಗುವಿನ ಸ್ತರದಿಂದ ಮಹಾಮಾನವಸ್ತರಕ್ಕೆ ಏರುತ್ತಾನೆ. 'ಮಾತೃ' ಎನ್ನುವ ವ್ಯಷ್ಟಿಭಾವ 'ಮಾತೃತತ್ವ'ವಾಗಿ ಹೀಗೆ ವಿಕಾಸಗೊಳ್ಳುತ್ತದೆ. ಈ ತತ್ವವನ್ನು ಪೂಜಿಸುವುದು ಎಂದರೆ ಚೇತನವೊಂದು ಬ್ರಹ್ಮಾಂಡ ತತ್ವವನ್ನು ಗೌರವಿಸಿ ತನ್ನೊಳಗೆ ಆವಾಹಿಸಿಕೊಳ್ಳುವ ಪ್ರಕ್ರಿಯೆಯೂ ಆಗಿಬಿಡುತ್ತದೆ.

ಇಂತಹ ಒಂದು ವಿಶಿಷ್ಟ ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಆಶೀರ್ವಾದದ ನುಡಿಗಳು ಹೀಗಿದ್ದವು –

"Father's Day, Mother's Day ಆಚರಿಸುವ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಆ ದಿನಗಳಲ್ಲಿ ಮಾತ್ರ ಪುಷ್ಪಗುಚ್ಛ ನೀಡಿ ಶುಭ ಕೋರುತ್ತಾರೆ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ಈ ಸಂಬಂಧ ಜೀವನಪರ್ಯಂತ ಇರುವಂತದು. ಈ ಸಂಬಂಧಗಳನ್ನು ಇಂತಹ ಸಮಾರಂಭಗಳು ಗಟ್ಟಿಗೊಳಿಸಬಲ್ಲವು". ಈ ಮಾತುಗಳು ಪಾಶ್ಚಾತ್ಯ ಸಂಸ್ಕೃತಿಯ ಬುದ್ಧಿಗತವಾದ ಕೃತಕತೆಯನ್ನೂ, ಭಾವಶ್ರೀಮಂತಿಕೆಯನ್ನೊಳಗೊಂಡ ಭಾರತೀಯ ಸಂಸ್ಕೃತಿ ಗಟ್ಟಿಗೊಳ್ಳಬೇಕಿರುವ ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ಸಮರ್ಥವಾಗಿ ತಿಳಿಸಿ ಎಲ್ಲರಲ್ಲಿಯೂ ಒಂದು ರೀತಿಯ ಭಾವಸಂಚಲನವನ್ನು ಉಂಟುಮಾಡಿದವು.

ನಮ್ಮ ಪರಂಪರೆಯ ದ್ಯೋತಕವಾದ ಇಂತಹ ಒಂದು ಸಮಾರಂಭದ ಬಗ್ಗೆ ಪತ್ರಿಕೆಗಳು ವಿಶೇಷ ಲೇಖನಗಳನ್ನು ಪ್ರಕಟಿಸುವ ಮೂಲಕ ತಮ್ಮ ಸಾಂಸ್ಕೃತಿಕ ಜವಾಬ್ದಾರಿಯನ್ನು ಮೆರೆದದ್ದು ನಿಜಕ್ಕೂ ಮೆಚ್ಚುವ ಸಂಗತಿಯಾಗಿತ್ತು.

ಇಂತಹ ಒಂದು ಹೃದಯಸ್ಪರ್ಶಿ ಕಾರ್ಯಕ್ರಮವನ್ನು ಆಯೋಜಿಸಿ, ಅನೇಕರಿಗೆ ಈ ದಿಸೆಯಲ್ಲಿ ಸ್ಫೂರ್ತಿನೀಡಿದ ಕರ್ತಾಳಿನ ಪಟೇಲ್ ಕುಟುಂಬದ ಎಲ್ಲ ಸದಸ್ಯರು ಅದರಲ್ಲೂ ಪ್ರೊ. ಕ.ಪು. ಮಹದೇವಪ್ಪನವರು ಯಾವತ್ತೂ ಅಭಿನಂದನಾರ್ಹರು.

ಇಂತಹವರ ಸಂಖ್ಯೆ ಮತ್ತಷ್ಟು ವೃದ್ಧಿಸಲಿ; ನಮ್ಮ ಹಿರಿಯ ಜೀವಗಳು ತಮ್ಮ ಕರುಳಕುಡಿಗಳ ಪ್ರೀತಿಯನ್ನು ಪಡೆದು ನೆಮ್ಮದಿಯಿಂದ ಬದುಕುವ ಮೂಲಕ ಕಿರಿಯರ ಬದುಕಿನಲ್ಲಿ ಸಾಂಸ್ಕೃತಿಕ ಬೇರುಗಳನ್ನು ಗಟ್ಟಿಗೊಳಿಸಲಿ ಎನ್ನುವುದೇ ನನ್ನ ಹಾಗೂ ನನ್ನಂತಹ ಅನೇಕರ ಆಶಯವಾಗಿದೆ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ದುರ್ಲಭಂ ತ್ರಯಮೇವೈತತ್ ದೈವಾನುಗ್ರಹಹೇತುಕಂ।
ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ॥

(ಮನುಷ್ಯನಾಗಿ ಜನಿಸುವುದು, ಅಜ್ಞಾನವನ್ನು ಹೋಗಲಾಡಿಸಿಕೊಳ್ಳಬೇಕೆಂಬ ಬಯಕೆ, ಇದಕ್ಕೆ ಬೇಕಾದ ಮಹಾಪುರುಷರ ಮಾರ್ಗದರ್ಶನ, ಆಶ್ರಯ, ಇವು ದೈವಾನುಗ್ರಹ ಇದ್ದವರಿಗೆ ಮಾತ್ರ ಲಭಿಸುತ್ತವೆ).

ಸಕಲ ಜೀವರಾಶಿಗಳ ಸಮೂಹದಲ್ಲಿ ಮನುಷ್ಯ ಶ್ರೇಷ್ಠ ಜೀವಿ ಎನ್ನುವುದು ಎಲ್ಲರೂ ಒಪ್ಪಿರುವ ಸತ್ಯ. ಆದರೆ ಮನುಷ್ಯನಾಗಿ ಹುಟ್ಟಿದ ಮಾತ್ರಕ್ಕೇ ಅವನು ಶ್ರೇಷ್ಠನೆನಿಸಿಕೊಳ್ಳುತ್ತಾನೆ ಎನ್ನುವುದು ಮಾತ್ರ ನಿಜವಲ್ಲ. ಏಕೆಂದರೆ ಹಸಿವು ನಿದ್ರೆ ಭಯ ಕಾಮ ಇವೆಲ್ಲವೂ ಎಲ್ಲ ಜೀವಿಗಳಲ್ಲಿಯೂ ಕಂಡುಬರುವಂತಹ ಒಂದು ಪ್ರಾಕೃತಿಕ ವ್ಯಾಪಾರ. ಈ ದೃಷ್ಟಿಯಿಂದ ಮನುಷ್ಯನೂ ಕೂಡ ಒಂದು ಪ್ರಾಣಿಯೇ. ಆದರೆ ಅದರಾಚೆಗೂ ಅವನು ಬೆಳೆದುಬಂದ ಕ್ರಿಯೆ ಪ್ರಕ್ರಿಯೆಗಳಿಂದ ಆತ ಶ್ರೇಷ್ಠ ಸ್ಥಾನವನ್ನು ಪಡೆಯುತ್ತ ಬಂದಿದ್ದಾನೆ. ಆ ಪ್ರಕ್ರಿಯೆಯೇ 'ಅಜ್ಞಾನದಿಂದ ಜ್ಞಾನದೆಡೆಗೆ, ಅಸತ್ಯದಿಂದ ಸತ್ಯದೆಡೆಗೆ' ನಡೆಯುವ ಆತನ ನಿಶಿತಮತಿಯ ಗತಿಶೀಲತೆ. ಆದರೆ ಈ ಊರ್ಧ್ವಮುಖ ಚಲನೆ ಎಂಬುದು ಅಷ್ಟು ಸುಲಭವಾಗಿ ಸಿದ್ಧಿಸುವ ಅಂಶವಲ್ಲ. ಅದಕ್ಕೆ ಮಹಾಪುರುಷರ ಮಾರ್ಗದರ್ಶನ, ಆ ಮಾರ್ಗದಲ್ಲಿ ನಡೆಯುತ್ತ ದಕ್ಕಿಸಿಕೊಳ್ಳಬೇಕಾದ ಜ್ಞಾನ ಮತ್ತು ಅದರ ಅನುಸಂಧಾನ ಅಗತ್ಯವಾಗಿ ಬೇಕಿರುತ್ತದೆ. ಇದು ಯಾವುದೇ ಜೀವಿಗೆ ಸಿಗದ ಮತ್ತು ಸಾಧ್ಯವಾಗದ ಒಂದು ವಿಶಿಷ್ಟ ಶಕ್ತಿ ಮತ್ತು ಅವಕಾಶ. ತನ್ನ ತಾಮಸ, ರಾಜಸ ಪ್ರವೃತ್ತಿಗಳನ್ನು ಕಳೆದುಕೊಂಡು ಸಾತ್ವಿಕನಾಗಿ ನಿರಂಜನತ್ವವನ್ನು ಪಡೆಯುವ ಭಾಗ್ಯ ಮನುಷ್ಯನ ಮುಂದೆ ವಿವಿಧ ರೀತಿಗಳಲ್ಲಿ ತೆರೆದುಕೊಂಡಿರುತ್ತದೆ. ಇಡೀ ಸೃಷ್ಟಿಯನ್ನು ನೋಡುವ ದೃಷ್ಟಿ, ಹಾಗೆಯೇ ಅದರ ಒಂದೊಂದು ಕೌತುಕಭರಿತ ಅಂಶಗಳನ್ನು ಆವಾಹನೆ ಮಾಡಿಕೊಳ್ಳುವ ಹಸಿವು ನಿರಂತರವಾಗಿ ಕ್ರಿಯಾತ್ಮಕವಾಗಿದ್ದಾಗ ಮಾತ್ರ ಅದು ಸಾಧಿತವಾಗುತ್ತದೆ.

ದೇಹದ ಯಾವುದೇ ಹಸಿವಿಗೆ ಒಂದು ಇತಿಮಿತಿ ಇರುತ್ತದೆ. ಈ ಇತಿಮಿತಿಗಳ ಪ್ರಜ್ಞೆ ಇರದಿದ್ದರೆ ಅದು ಜೀವಕ್ಕೆ ಮಾರಕವೇ ಆಗಿ ಪರಿಣಮಿಸುತ್ತದೆ. ತೃಪ್ತಿಯ ಗಡಿರೇಖೆಯನ್ನು ಅತಿಕ್ರಮಿಸುವುದು ಎಂತಹವರನ್ನೂ ದುರಂತದ ಅಧೋಲೋಕಕ್ಕೆ ಕೊಂಡೊಯ್ಯುತ್ತದೆ. ಹಾಗೆ ನೋಡಿದರೆ ದೇಹಸಂಬಂಧಿಯಾದ 'ತೃಪ್ತಿಯ ಪ್ರಜ್ಞೆ'

ಮನುಷ್ಯನಿಗಿಂತಲೂ ಪ್ರಾಣಿವರ್ಗದಲ್ಲಿ ಸಹಜ ರೀತಿಯಲ್ಲಿ ನಡೆಯುತ್ತದೆ. ಹುಲಿ, ಚಿರತೆಗಳಂತಹ ಹಿಂಸ್ರಪ್ರಾಣಿಗಳೂ ಮತ್ತೊಂದು ಪ್ರಾಣಿಯನ್ನು ಕೊಲ್ಲುವುದು ತನಗೆ ಹಸಿವಾದಾಗ ಮಾತ್ರ. ಹಸಿವು ಹಿಂಗಿದ ನಂತರ, ದುರ್ಬಲ ಪ್ರಾಣಿಗಳ ನಡುವೆಯೇ ಸಂಚರಿಸುತ್ತಿದ್ದರೂ ಅವು 'ಇಂದಿಂಗೆ ನಾಳಿಂಗೆ' ಎನ್ನುವ ಕಾಲ್ಪನಿಕ ಹಸಿವಿನಿಂದ ಅಥವಾ ತನ್ನ ವಿನೋದಕ್ಕಾಗಿ ಕೊಲ್ಲುವ ಯೋಚನೆಯನ್ನು ಮಾಡುವುದಿಲ್ಲ. ಇದೆಲ್ಲವೂ ಕಂಡುಬರುವುದು ಪ್ರಾಣಿಶ್ರೇಷ್ಠನೆಂದು ಭ್ರಮಿಸಿರುವ ಈ ಮನುಷ್ಯನಲ್ಲಿ ಮಾತ್ರ. ಆದರೆ ಈ ಭ್ರಮಾಲೋಕದಿಂದ ಅವನು ಹೊರಬಂದು ನಿಜದ ನೆಲೆಯಲ್ಲಿ ನಿಂತು ಅನಿಕೇತನತ್ವವನ್ನು ಪಡೆಯಲು ಸಾಧ್ಯವಾಗುವುದು ಆತ ಜ್ಞಾನದ ಬೆಳಕಿನತ್ತ ತನ್ನ ಅಂತಶ್ಚಕ್ಷುಗಳನ್ನು ತೆರೆದಾಗ ಮಾತ್ರ.

ಕೆಂಡದ ಗಿರಿಯ ಮೇಲೊಂದು ಅರಗಿನ ಕಂಬ ಇದ್ದಿತ್ತು ನೋಡಯ್ಯ
ಅರಗಿನ ಕಂಬದ ಮೇಲೆ ಹಂಸೆಯಿದ್ದಿತ್ತು
ಕಂಬ ಬೆಂದಿತ್ತು ಹಂಸೆ ಹಾರಿತ್ತು ಗುಹೇಶ್ವರಾ

ಅಲ್ಲಮಪ್ರಭುಗಳ ಈ ಸೂತ್ರಪ್ರಾಯವಾದ ವಚನ, ಮೇಲಿನ ಮಾತುಗಳಿಗೆ ಬರೆದ ವ್ಯಾಖ್ಯಾನದಂತಿದೆ.

ಇದು ಬಯಲಲ್ಲಿ ಬಯಲಾಗುವ ಪ್ರಕ್ರಿಯೆ. ಈ ಶಕ್ತಿಯನ್ನು ಸಂಚಯ ಮಾಡಿಕೊಳ್ಳುವುದು 'ಅಳಿಮನ'ದವರಿಗೆ ಸಾಧ್ಯವಾಗುವ ಅಂಶವಲ್ಲ. ಏಕೆಂದರೆ 'ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಡುವ' ಮೂಲಕ ಅದನ್ನು ಗಟ್ಟಿಗೊಳಿಸಲು ಸಾಧ್ಯವಿಲ್ಲ. ಅಂತಹ ಜನರು ದೀಕ್ಷಾಸಂಸ್ಕಾರಗಳಿಗೆ ಒಳಗಾಗಲಾರರು. ತಮ್ಮ ಮನಸ್ಸನ್ನು ಗಟ್ಟಿಯಾಗಿ 'ಬ್ರಹ್ಮ'ದಲ್ಲಿ ಕೇಂದ್ರೀಕರಿಸಿ, ಮಹಾಪುರುಷರನ್ನು ಆಶ್ರಯಿಸಿದಾಗ ಮಾತ್ರ ಅದು ಸಾಧ್ಯವಾಗುವ ಕ್ರಿಯೆ. ಮುಮುಕ್ಷುಗಳಾದವರು ಬ್ರಹ್ಮಜ್ಞಾನಿಗಳಾದ ಋಷಿಮುನಿಗಳನ್ನು ಆಶ್ರಯಿಸುತ್ತಿದ್ದುದು ಈ ಕಾರಣಕ್ಕಾಗಿಯೇ. ಹಾಗೆಯೇ ಶರಣ ಸಮುದಾಯವು ಬಸವೇಶ್ವರ, ಅಲ್ಲಮಪ್ರಭುಗಳನ್ನು ಆಶ್ರಯಿಸಿತ್ತು; ವಿವೇಕಾನಂದರು ಪರಮಹಂಸರನ್ನು ಆಶ್ರಯಿಸಿದ್ದರು; ಹೀಗೆ ಪರಂಪರೆಯಲ್ಲಿ ಇಂತಹ ಅನೇಕ ಉದಾಹರಣೆಗಳು ಸಿಕ್ಕುತ್ತವೆ. ಇದೆಲ್ಲವೂ ಸಾಧ್ಯವಾಗುವುದು ದೈವಾನುಗ್ರಹದಿಂದ ಮಾತ್ರ. ಅಂತಹ ಬ್ರಹ್ಮಶಕ್ತಿಯ ಅನುಗ್ರಹವಿಲ್ಲದಿದ್ದರೆ ಮನುಷ್ಯ ಅತ್ತ ಪ್ರಾಣಿಯೂ ಆಗದೆ, ಇತ್ತ ಮನುಷ್ಯನೂ ಆಗದೆ ತ್ರಿಶಂಕುವಾಗಿ ಉಳಿದು ಪರಿತಪಿಸಬೇಕಾಗುತ್ತದೆ. ಆದ್ದರಿಂದಲೇ ಕ್ಷುಲ್ಲಕವೆನಿಸಿದ ಎಲ್ಲವನ್ನೂ ತಿರಸ್ಕರಿಸಿ ಸಂತ ಮಹಂತರಂತಹರ ಸಂಸರ್ಗದಿಂದ ದೈವಾನುಗ್ರಹಕ್ಕೆ ಪಾತ್ರರಾಗಿ ಬೆಳಕಿನ ಪಥವನ್ನು ಎಲ್ಲರೂ ಕಂಡುಕೊಳ್ಳಬೇಕು.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಪ್ರಸ್ತುತತೆ

**ಕೊತ್ತಲವಾಡಿ ಶಿವಕುಮಾರ್**

ಜಗತ್ತಿನಲ್ಲಿ ಸಾವಿರಾರು ವರ್ಷಗಳಿಂದಲೂ ಆರ್ಥಿಕತೆಯ ಕುರಿತಾಗಿ ಅವಲೋಕನ, ಚಿಂತನೆಗಳು ನಡೆಯುತ್ತಲೆ ಬಂದಿವೆ. ಮಹಾನ್ ದಾರ್ಶನಿಕರಾದ ಪ್ಲೇಟೋ, ಅರಿಸ್ಟಾಟಲ್ ಮೊದಲಾದವರ ಗ್ರಂಥಗಳಲ್ಲಿಯೂ ಆರ್ಥಿಕ ಚಿಂತನೆ ಕಂಡುಬರುತ್ತದೆ. ಈಗಲೂ ಸಹ ಅರ್ಥಶಾಸ್ತ್ರಜ್ಞರು ಬದಲಾದ ಆರ್ಥಿಕ ಚಟುವಟಿಕೆಗಳನ್ನು ಅಭ್ಯಸಿಸುತ್ತಾ ಅವುಗಳ ಸಮಸ್ಯೆಗಳ ಪರಿಹಾರಕ್ಕಾಗಿ ಸಂಶೋಧನೆಗಳನ್ನು ನಡೆಸುತ್ತಲೆ ಇದ್ದಾರೆ. ಆರ್ಥಿಕ ಸಮಸ್ಯೆಗಳಾದ ಹಸಿವು, ಬಡತನ, ನಿರುದ್ಯೋಗ, ಅಸಮಾನತೆಗಳ ನಿವಾರಣೆಗಾಗಿ ನೀತಿ ಸೂತ್ರಗಳನ್ನು ರೂಪಿಸುತ್ತಲೆ ಇದ್ದಾರೆ.

ಸನಾತನ ಪರಂಪರೆಯನ್ನು ಹೊಂದಿರುವ ಭಾರತದಲ್ಲಿ ಅರ್ಥಶಾಸ್ತ್ರಜ್ಞರು ಪ್ರಾಚೀನ ಕಾಲದಿಂದಲೂ ಇಂದಿನವರೆವಿಗೂ ಅರ್ಥಶಾಸ್ತ್ರಕ್ಕೆ ವಿಶಿಷ್ಟ ಕೊಡುಗೆಗಳನ್ನು ನೀಡುತ್ತಲೆ ಬಂದಿದ್ದಾರೆ. ವೇದಗಳ ಕಾಲದಿಂದಲೂ ಭಾರತೀಯ ಚಿಂತಕರು ಆರ್ಥಿಕ ವಿಚಾರಗಳ ಮೇಲೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಮನುಸ್ಮೃತಿಯಲ್ಲಿಯು ಆಸ್ತಿ ಹಕ್ಕು, ವಿತರಣೆ, ವ್ಯವಹಾರ ನಿರ್ವಹಣೆ, ವರ್ಣಾಶ್ರಮ, ಧರ್ಮವ್ಯವಸ್ಥೆ ಇವೇ ಮುಂತಾದ ಆರ್ಥಿಕ ವಿಚಾರಗಳ ಕುರಿತಾಗಿ ಚಿಂತಿಸಲಾಗಿದೆ.

ಭಾರತದ ಪ್ರಾಚೀನ ಅರ್ಥಶಾಸ್ತ್ರಜ್ಞನೆಂದೇ ಪ್ರಸಿದ್ಧನಾದ ಕೌಟಿಲ್ಯನು ಕ್ರಿ.ಪೂ. ಸುಮಾರು 325ರಲ್ಲಿ "ಅರ್ಥಶಾಸ್ತ್ರ" ಎಂಬ ರಾಜನೀತಿ ಗ್ರಂಥವನ್ನು ರಚಿಸಿದನೆಂದು ನಂಬಲಾಗಿದೆ. ಈತನಿಗೆ ಚಾಣಕ್ಯ ಮತ್ತು ವಿಷ್ಣುಗುಪ್ತನೆಂಬ ಉಪನಾಮಗಳು ಸಹ ಇದ್ದವು. ಆಚಾರ್ಯ ಚಾಣಕ್ಯನು ತನಗಾದ ಅಸಮಾಧಾನದಿಂದ ಕೋಪಗೊಂಡು ನಂದರನ್ನು ನಾಶಮಾಡಿ ಮಗಧ ಸಾಮ್ರಾಜ್ಯದ ಚಕ್ರವರ್ತಿಯನ್ನಾಗಿ ಚಂದ್ರಗುಪ್ತ ಮೌರ್ಯನನ್ನು ಸಾಮ್ರಾಟ ಪದವಿಗೆ ಏರಿಸಿದನೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.

ತುಂಬಾ ಪ್ರಾಚೀನ ಗ್ರಂಥವಾದ ಕೌಟಿಲ್ಯನ ಅರ್ಥಶಾಸ್ತ್ರ ಆಧುನಿಕ ಲೋಕಕ್ಕೆ ಪರಿಚಯವಾದದ್ದು ಮಾತ್ರ ತೀರಾ ಇತ್ತೀಚೆಗೆ. ಎಂದರೆ ಕ್ರಿ.ಶ. 1909 ರಲ್ಲಿ. ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ (ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್)

ಆಗ ಕ್ಯೂರೇಟರ್ ಆಗಿದ್ದ, ವಿದ್ವಾಂಸ ಡಾ. ಆರ್. ಶ್ಯಾಮಶಾಸ್ತ್ರಿಗಳು ಈ ಗ್ರಂಥವನ್ನು ಪತ್ತೆಮಾಡಿದರು. ಸುತ್ತಲೂ ರಾಶಿರಾಶಿಯಾಗಿ ಬಿದ್ದಿದ್ದ ತಾಳೆಗರಿಗಳಲ್ಲಿ ಹೆಚ್ಚಿನವು ಶಿಥಿಲಾವಸ್ಥೆಯಲ್ಲಿದ್ದವು. ಅವುಗಳನ್ನು ಜೋಪಾನವಾಗಿ ಲೇಪನ ಮಾಡಿ ಮತ್ತೆ ಜೋಡಿಸುತ್ತಿದ್ದ ಶಾಮಶಾಸ್ತ್ರಿಗಳಿಗೆ ಒಂದು ದಿನ ಮೂಲೆಯಲ್ಲಿದ್ದ ತಾಳೆಪತ್ರದ ಮೇಲೆ ದೃಷ್ಟಿ ಬಿದ್ದಿತು. ಅವುಗಳನ್ನು ಶುಚಿಗೊಳಿಸಲು ಹೊರ ತೆಗೆದರು, ಆಸಕ್ತಿಯಿಂದ ಒಂದೆರಡು ಪತ್ರಗಳನ್ನು ನೋಡಿದರು. ಶಾಮಶಾಸ್ತ್ರಿಗಳು ಸಂಸ್ಕೃತ, ಆಂಗ್ಲ, ಕನ್ನಡ ಭಾಷೆಗಳಲ್ಲಿ ಪಾರಂಗತರು. ಒಂದೊಂದು ತಾಳೆಪತ್ರಗಳನ್ನು ಓದುತ್ತಾ ಹೋದಂತೆ ಆಶ್ಚರ್ಯ, ಆನಂದ, ಉದ್ವೇಗಗಳಿಗೆ ಒಳಗಾದವರಂತೆ ಅವರ ಮನಸ್ಸು ಪುಳಕಿತಗೊಂಡಿತು. ಅದು ಅಂತಿಂತಹ ತಾಳೆ ಪತ್ರಗಳಲ್ಲ, ಅದು ಸಾಕ್ಷಾತ್ ಕೌಟಿಲ್ಯನ ಅರ್ಥಶಾಸ್ತ್ರ. ಶ್ಯಾಮಶಾಸ್ತ್ರಿಗಳು ಅದನ್ನು ಶ್ರದ್ಧೆಯಿಂದ ಅಭ್ಯಸಿಸಿ ಶ್ರಮದಿಂದ ಸಂಪಾದಿಸಿ ನಂತರ 1909ರಲ್ಲಿ ಪ್ರಕಟಿಸಿದರು. ಹೀಗೆ ಪ್ರಪಂಚದಲ್ಲಿ ಮೊಟ್ಟಮೊದಲಿಗೆ ಕೌಟಿಲ್ಯನ ಅರ್ಥಶಾಸ್ತ್ರ ಪ್ರಕಟವಾಯಿತು. ತದನಂತರ ಅವರೇ ಈ ಕೃತಿಯನ್ನು ಇಂಗ್ಲಿಷ್‌ಗೆ ಅನುವಾದಿಸಿದರು. ಈ ರೀತಿಯಾಗಿ ಒಬ್ಬ ಮಹಾನ್ ವ್ಯವಹಾರಿ ಅರ್ಥಶಾಸ್ತ್ರದ ಗುರುವಿನ ಬಗೆಗೆ ಪಾಶ್ಚಾತ್ಯ ಪ್ರಪಂಚಕ್ಕೆ ಪರಿಚಯವಾಯಿತು.

ಕೌಟಿಲ್ಯನ ಅರ್ಥಶಾಸ್ತ್ರ ಕೃತಿಯ ಕುರಿತಾಗಿ ಈಗ ನಾವು ಆಲೋಚಿಸುತ್ತಾ ಹೋದಂತೆ ಶತಶತಮಾನಗಳ ಹಿಂದಿನ ಅರ್ಥಶಾಸ್ತ್ರವು ಸಮಕಾಲೀನ ಸಮಾಜದ ಮೇಲೆ ಯಾವ ರೀತಿಯ ಪ್ರಭಾವ ಬೀರಬಹುದು? ಅದನ್ನು ಅನುವಾದಿಸುವ ಅಗತ್ಯವಿದೆಯೆ? ಅದರ ಅಧ್ಯಯನದ ಅವಶ್ಯಕತೆಯಾದರೂ ಏನು? ಅದರ ಬಗೆಗೆ ಸಂಶೋಧನೆಗಳೇಕೆ? ಈ ಗ್ರಂಥದಲ್ಲಿ ಅಡಗಿರುವ ವಸ್ತುವಿಷಯವೇನು? ಎಂಬ ಅನೇಕ ಪ್ರಶ್ನೆಗಳು ಗರಿಗೆದರುತ್ತವೆ. ಅಷ್ಟೇ ಸ್ಪಷ್ಟವಾಗಿ ನಮಗೆ ಉತ್ತರವೂ ದೊರಕುತ್ತದೆ. ಏಕೆಂದರೆ ಚಂದ್ರಗುಪ್ತಮೌರ್ಯ, ಬಿಂದುಸಾರ, ಅಶೋಕ, ಶಾತವಾಹನ, ಇವರೇ ಮೊದಲಾದ ಆಡಳಿತಗಾರರಿಗೆ ಬಲವಾದ ಸಾಮ್ರಾಜ್ಯವನ್ನು ನಿರ್ಮಿಸಲು, ಸಮಸ್ಯೆಗಳನ್ನು ಎದುರಿಸಲು, ಸಮರ್ಥವಾಗಿ ಆಡಳಿತ ನಡೆಸಲು ಸಹಕರಿಸಿದ ಸೂತ್ರಗಳೆ ಈ ಅರ್ಥಶಾಸ್ತ್ರ.

ಬಯಕೆಗಳ ಆಗರವಾಗಿರುವ ಮಾನವನಲ್ಲಿ ಆಧುನಿಕ, ವೈಜ್ಞಾನಿಕ ಪ್ರಗತಿಯಿಂದಾಗಿ ಅವನಲ್ಲಿ ಬಯಕೆಗಳು ಮತ್ತಷ್ಟು ವೈವಿಧ್ಯಮಯವಾಗಿ ಕವಲೊಡೆದವು. ನಿಸರ್ಗಸಂಪತ್ತಿನ ಮೇಲೆ ದುರಾಸೆಯಿಂದ ಕೂಡಿದ ಮನುಷ್ಯನ ಕ್ರೌರ್ಯ ಮೇರೆ ಮೀರಿದೆ. ನಿಸರ್ಗದಲ್ಲಿ ದೊರೆಯುವ ಸಂಪನ್ಮೂಲಗಳೆಲ್ಲವು ಬಲಾಢ್ಯರ ಮಿತಿಮೀರಿದ ಉಪಭೋಗಕ್ಕೆ ಬಳಕೆಯಾಗುತ್ತಿವೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿನ ಸೂತ್ರಗಳಲ್ಲಿ ಕಂಡುಬರುವ ನೀತಿಸಂಹಿತೆ ಪ್ರಸ್ತುತವೆನಿಸುತ್ತದೆ. ಈಗಿನ ಪ್ರಜಾಪ್ರಭುತ್ವದ ಕಾರ್ಯಾಂಗ, ಶಾಸಕಾಂಗಗಳಿಗೆ ಉಪಯೋಗವಾಗುವ



ರೀತಿಯಲ್ಲಿ ಅದು ಆರ್ಥಿಕ ಸುಧಾರಣೆಗಳಲ್ಲಿಯೂ ಸಹಾಯಕವಾಗುತ್ತದೆ.

ಕೌಟಿಲ್ಯನ ಅರ್ಥಶಾಸ್ತ್ರವು ಪ್ರಾಚೀನ ಭಾರತದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಸಂರಚನೆ ಹಾಗೂ ನಿರ್ಣಾಯಕ ಸೂತ್ರಗಳನ್ನು ಕುರಿತಂತೆ ಸರ್ವಶ್ರೇಷ್ಠ ದಾಖಲೆಯಾಗಿದೆ. ಪ್ರಸ್ತುತ ಸಮಸ್ಯೆಗಳು ಸಮಸ್ಯೆಗಳೇ ಅಲ್ಲ ಮುಂಬರುವ ಸಮಸ್ಯೆಗಳನ್ನು ಕುರಿತು ಯೋಚಿಸಿ ಅವುಗಳನ್ನು ಎದುರಿಸಲು ಸಿದ್ಧರಾಗಬೇಕು. ಪರಿಹಾರಕ್ಕಾಗಿ ಯತ್ನಿಸಬೇಕು ಎಂಬ ಕೌಟಿಲ್ಯನ ಉಪದೇಶವು ಸರ್ವಕಾಲಿಕ ಸಂದೇಶವಾಗಿದ್ದು, ಈಗಲೂ ಅನೇಕ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಆಧುನಿಕ ಅರ್ಥಶಾಸ್ತ್ರಜ್ಞರು ಕೌಟಿಲ್ಯನ ಅರ್ಥಶಾಸ್ತ್ರದ ಮೊರೆಹೋಗುತ್ತಾರೆ. ವಿಶ್ವ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿಯು ಮೊದಲು ನೆನಪಾಗುವುದು ಕೌಟಿಲ್ಯನ ಅರ್ಥಶಾಸ್ತ್ರವೇ. ದೂರದೃಷ್ಟಿ, ಅನುಭವಸಾರ ಮತ್ತು ಆಚರಣೆಯ ಮೂಲಕ ನಿರೂಪಿಸಿರುವ ಕೌಟಿಲ್ಯನ ಅರ್ಥಶಾಸ್ತ್ರ ಮಾನವನ ಮನೋಭೂಮಿಕೆ ಮತ್ತು ಆಲೋಚನಾ ವಿಧಾನಗಳಿಗೆ ಸಂಬಂಧಿಸಿದ ಗ್ರಂಥ. ಎಷ್ಟೇ ಯುಗ, ತಲೆಮಾರುಗಳು ಬದಲಾದರು ಮನುಷ್ಯನ ಮನೋಸಹಜ ಮೂಲ ಆಲೋಚನಾಕ್ರಮ ಬದಲಾಗುವುದಿಲ್ಲ. ವಸ್ತುವಿಷಯಗಳ ಕುರಿತ ಮನುಷ್ಯನ ವಾಂಛೆ ಹಾಗೆಯೇ ಇರುತ್ತದೆ. ಮನುಷ್ಯಸಹಜ ಕಾಮನೆಗಳು ಯುಗಯುಗಾಂತರಗಳಲ್ಲಿ ಜನಮಾನಸದಲ್ಲಿ ಹರಿದು ಬರುತ್ತವೆ. ಆದ್ದರಿಂದಲೆ ಈ ಗ್ರಂಥ ಸಮಕಾಲೀನ ಸತ್ಯವನ್ನು ಸಾರುವ ಪ್ರಸ್ತುತತೆಯನ್ನು ಇಂದಿಗೂ ಉಳಿಸಿಕೊಂಡು ಬಂದಿದೆ.

ಆರ್ಥಿಕ ತಜ್ಞರಿಗೆ ವಿತ್ತಶಾಸ್ತ್ರವಾಗಿ, ರಾಜಕೀಯ ತಜ್ಞರಿಗೆ ರಾಜನೀತಿಯಾಗಿ, ಉದ್ಯಮಿಗಳಿಗೆ ಉದ್ಯಮ ನಿರ್ವಹಣೆಯ ಪಾಠವಾಗಿ, ಕೃಷಿಕರಿಗೆ ನೆಲಮೂಲ ಸಂಸ್ಕೃತಿಯ ಕಸುಬಿನಲ್ಲಿ ಬದುಕನ್ನು ಸಮೃದ್ಧಗೊಳಿಸಿಕೊಳ್ಳಲು ಬೇಕಾದ ಪ್ರೇರಣಾಶಕ್ತಿಯಾಗಿ, ಸೈನ್ಯಾಧಿಕಾರಿಗಳಿಗೆ ಯುದ್ಧತಂತ್ರ ವಾಚಕವಾಗಿ ಹೀಗೆ ಸಮಾಜದಲ್ಲಿನ ಎಲ್ಲಾ ಸ್ತರದ ವರ್ಗದಲ್ಲಿರುವವರಿಗೆ ಅವಶ್ಯಕವಾದ ಅಮೂಲ್ಯ ಸೂತ್ರಗಳನ್ನು ಕೌಟಿಲ್ಯನ ಅರ್ಥಶಾಸ್ತ್ರ ಒಳಗೊಂಡಿದೆ.

ಕೌಟಿಲ್ಯನ ಅರ್ಥಶಾಸ್ತ್ರ ರಾಜನಾದವನು ಸಂಪತ್ತು ಮತ್ತು ಅಧಿಕಾರವನ್ನು ಹೇಗೆ ನಿರ್ವಹಿಸಬೇಕು ಹಾಗೂ ಅವುಗಳನ್ನು ಹೇಗೆ ಸಂರಕ್ಷಿಸಿಕೊಳ್ಳಬೇಕೆಂಬುದನ್ನು ವಿಶ್ಲೇಷಿಸುತ್ತದೆ. ಸಂಪತ್ತು ಆರ್ಥಿಕ ವ್ಯಾಪ್ತಿಯ ಪರಿಕಲ್ಪನೆಯನ್ನೊಳಗೊಂಡಿದ್ದು ರಾಜಾಧಿಕಾರವೆಂಬುದು ರಾಜಕೀಯ ಆಡಳಿತ ವ್ಯಾಪ್ತಿಯ ಪರಿಕಲ್ಪನೆಯಾಗಿದ್ದು ಕೌಟಿಲ್ಯನ ಅರ್ಥಶಾಸ್ತ್ರವು ಕೇವಲ ಸಂಪತ್ತಿನ ಕಾರಣಗಳನ್ನು ಮಾತ್ರ ವಿಶ್ಲೇಷಿಸದೆ, ಪ್ರಭುತ್ವವು ಒಳಗೊಳ್ಳುವ ಆರ್ಥಿಕ ಸಂಪನ್ಮೂಲಗಳನ್ನು ಒಳಗೊಂಡಂತೆ ರಾಜ್ಯ ವ್ಯವಸ್ಥೆಯ ಅಧ್ಯಯನವಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರವೆಂದರೆ ಬರೀ ಹಣಕಾಸಿನ

ಶಾಸ್ತ್ರವೆಂದು ತಿಳಿದರೆ ಅದರ ವ್ಯಾಪ್ತಿ ಸಂಕುಚಿತವಾಗುತ್ತದೆ. ಏಕೆಂದರೆ ಸ್ವಯಂ ಅರ್ಥಶಾಸ್ತ್ರವೆ ಸಮಸ್ತ ಆರ್ಥಿಕ ವಿಚಾರಗಳ ಅಧ್ಯಯನವಾಗಿದೆ. ಸಮಗ್ರವು ವ್ಯವಸ್ಥಿತವು ಆದ ಕೌಟಿಲ್ಯನ ಕೃತಿಯು ಅರ್ಥಶಾಸ್ತ್ರದ ತತ್ವ ಮತ್ತು ಆಚರಣೆಯ ಪ್ರತಿ ವಿಷಯವನ್ನು ಕುರಿತು ವಿಶ್ಲೇಷಿಸಿದೆ. ಮನುಷ್ಯರು ತುಂಬಿದ ಭೂಮಿಯೆ ನಿಜವಾದ 'ಅರ್ಥ'. ಇದನ್ನು ಬಳಸುವುದು ಹಾಗೂ ರಕ್ಷಣೆ ಮಾಡುವುದನ್ನು ತಿಳಿಸುವ ಶಾಸ್ತ್ರವೇ ಅರ್ಥಶಾಸ್ತ್ರ ಎನ್ನುತ್ತಾನೆ ಕೌಟಿಲ್ಯ.

ಆಧುನಿಕ ಆರ್ಥಿಕ ವಿಶ್ಲೇಷಣೆಯಲ್ಲಿಯು ಸಹ ಭೂಮಿಯನ್ನು ಒಂದು ಉತ್ಪಾದನಾಂಗವಾಗಿ ಪರಿಗಣಿಸಿ ಭೂಮಿಯಲ್ಲಿರುವ ಅರಣ್ಯಸಂಪನ್ಮೂಲ, ಜಲಸಂಪನ್ಮೂಲ, ಖನಿಜಸಂಪತ್ತು ಮತ್ತು ಫಲವತ್ತಾದ ಜಮೀನು ಇವುಗಳು ಮಿತವಾಗಿದ್ದು ವಿವಿಧ ಉಪಯೋಗಗಳನ್ನು ಹೊಂದಿವೆ. ಆರ್ಥಿಕ ಪ್ರಕ್ರಿಯೆಗೆ ಅತ್ಯಂತ ಪ್ರಮುಖವಾಗಿ ಬೇಕಾಗಿರುವುದು ಭೂಮಿ ಎಂಬ ಮೂಲ ಉತ್ಪಾದನಾಂಗ. ಇದನ್ನು ಸಮರ್ಥವಾಗಿ ಬಳಸಿಕೊಂಡು ಅವಿಶ್ರಾಂತ ಅಭಿವೃದ್ಧಿಯ ಕಡೆ ಗಮನ ಹರಿಸುವುದರ ಜೊತೆಗೆ ನೈಸರ್ಗಿಕ ಸಂಪನ್ಮೂಲಗಳನ್ನು ಯಥಾವತ್ತಾಗಿ ಕಾಪಾಡುವ, ಪರಿಸರ ಸಂರಕ್ಷಣೆಗೆ ಒತ್ತು ನೀಡುವ ಕಡೆ ಗಮನಹರಿಸಬೇಕಾಗಿರುವುದು ಇಂದು ಮುಖ್ಯವಾಗುತ್ತದೆ.

ರಾಜ್ಯದ ಕಲ್ಯಾಣ ಅಭಿವೃದ್ಧಿಗೆ ರಾಜ ಸುಶಿಕ್ಷಿತನಾಗಿರಬೇಕು. ರಾಜನಾದವನು ಸಕಲ ವಿದ್ಯೆಯನ್ನು ಕಲಿತವನಾಗಿರಬೇಕು, ಅದಕ್ಕಾಗಿ ರಾಜಕುಮಾರರಿಗೆ ಶಿಕ್ಷಣ ನೀಡುವುದರ ಅವಶ್ಯಕತೆಯನ್ನು ಅರ್ಥಶಾಸ್ತ್ರದಲ್ಲಿ ಪ್ರಸ್ತಾಪಿಸಲಾಗಿದೆ.

**"ನೀತಿಶಾಸ್ತ್ರಾನುಗೋ ರಾಜಃ"**

ರಾಜನು ನೀತಿಶಾಸ್ತ್ರ ತತ್ವ ವಿಚಾರ ತರ್ಕಶಾಸ್ತ್ರ ದಂಡನೀತಿ ಮತ್ತು ಅರ್ಥಶಾಸ್ತ್ರ ಇವೇ ಮೊದಲಾದವುಗಳನ್ನು ತಿಳಿದಿರಬೇಕು.

**"ಬಲವಾನ್ ಅಲಬ್ದ ಲಾಭೇ ಪ್ರಯತೇತ"**

ಶಕ್ತಿಸಂಪನ್ನನಾದ ರಾಜನು ತನ್ನ ಸೈನ್ಯಬಲದಿಂದ ಶತ್ರುರಾಜ್ಯವನ್ನು ಎದುರಿಸುವ ಸಾಮರ್ಥ್ಯದ ಜೊತೆಗೆ ತನ್ನ ಪ್ರಜೆಗಳ ಹಿತ ಕಾಯಲು ಸಮರ್ಥನಾಗಿರುವನು.

**'ಅಲಬ್ದ ಲಾಭಾದಿ ಚತುಷ್ಟಯಂ ರಾಜ್ಯತಂತ್ರಮ್'**

ರಾಜನಾದವನು ಸಾಮ, ದಾನ, ಭೇದ ಮತ್ತು ದಂಡ ಎಂಬ ಈ ನಾಲ್ಕು ತಂತ್ರಗಳನ್ನು ಉಪಯೋಗಿಸಿ ದಕ್ಷತೆಯಿಂದ ರಾಜ್ಯವಾಳಬೇಕು.

**'ನ ಭತ್ಯಾನ್ ಪೋಷಯತಿ'**



ಸೋಮಾರಿಯಾದ ರಾಜನು ತನ್ನ ಪ್ರಜೆಗಳನ್ನು ರಕ್ಷಿಸುವಲ್ಲಿ ಅಸಹಾಯಕನಾಗುತ್ತಾನೆ. ಇದರಿಂದ ಪ್ರಜಾಪಾಲನೆ ಹಾಗೂ ರಾಜ್ಯದ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯಲು ಸಾಧ್ಯವಿಲ್ಲ.

ಹೀಗೆ ರಾಜ್ಯಭಾರ ಮಾಡುವವರಿಗೆ ಸೂಕ್ತ ಶಿಕ್ಷಣ ಬೇಕು ಎನ್ನುವ ಪರಿಕಲ್ಪನೆಯನ್ನು ಕೌಟಿಲ್ಯನ ಅರ್ಥಶಾಸ್ತ್ರ ತಿಳಿಸುತ್ತದೆ. ಪವಿತ್ರವಾದ ಶಾಸನ ಸಭೆಯಲ್ಲೇ ಕಚ್ಚಾಡುವ, ಮಾಧ್ಯಮಗಳೆದುರೇ ವಾಚಾಮ ಗೋಚರವಾಗಿ ಪರಸ್ಪರ ನಿಂದಿಸಿಕೊಳ್ಳುವ ನಮ್ಮ ಜನಪ್ರತಿನಿಧಿಗಳು ಕೌಟಿಲ್ಯನ ಅರ್ಥಶಾಸ್ತ್ರವನ್ನು ಅಧ್ಯಯನ ಮಾಡುವ ಜರೂರಿದೆ.

**'ಕು ರಾಜ ರಾಜ್ಯೇನ ಕುತಃ ಪ್ರಜಾಸುಖಂ?'**

ಕೆಟ್ಟ ರಾಜನಿಂದ ಪ್ರಜೆಗಳಿಗೆ ಸುಖವೆಲ್ಲಿ? ಎಂಬ ಮಾತು ಇಂದಿನ ಆಡಳಿತಗಾರರಿಗೆ ಅನ್ವಯಿಸಿ ಹೇಳಿದಂತಿದೆ.

**"ರಾಜಾ ಧರ್ಮಿಣೇ ಧರ್ಮಿಷ್ಠಾಃ ಪಾಪೇಪಾಪಾಃ ಸಮೇ ಸಮಾಃ|**
**ರಾಜಾನ ಮನುವರ್ತಂತೇ ಯಥಾ ರಾಜಾ ತಥಾ ಪ್ರಜಾಃ"||**

ರಾಜನು ಧರ್ಮಾನುವರ್ತಿಯಾಗಿದ್ದರೆ ಪ್ರಜೆಗಳೂ ಧರ್ಮಿಷ್ಠರಾಗಿರುತ್ತಾರೆ. ಸನ್ಮಾರ್ಗದಲ್ಲಿ ನಡೆಯುವ ರಾಜ ಪ್ರಜೆಗಳ ಹಿತಚಿಂತಕನಾಗಿರುತ್ತಾನೆ. ಅವನೇ ಪಾಪಕರ್ಮಗಳನ್ನು ಮಾಡಿದರೆ ಪ್ರಜೆಗಳು ರಾಜನಂತೆಯೆ ದುರ್ಮಾರ್ಗಿಗಳಾಗುತ್ತಾರೆ. ಸಮಾಜಕಂಟಕರಾಗುತ್ತಾರೆ. ಹೀಗೆ ರಾಜನು ಹೇಗಿರುತ್ತಾನೋ ಹಾಗೆಯೇ ಪ್ರಜೆಗಳೂ ಅವನನ್ನು ಅನುಸರಿಸುತ್ತಾರೆ.

**'ಇಂದ್ರಿಯವಶವರ್ತೀ ಚತುರಂಗವಾನಪಿ ವಿನಶ್ಯತಿ'**

ಇಂದ್ರಿಯಗಳ ಅಧೀನತೆಗೊಳಗಾದ ರಾಜನು ತನ್ನೆಲ್ಲಾ ಬಲವನ್ನು ಹಾಳುಮಾಡಿಕೊಳ್ಳುವನು. ರಾಜನಾಗಲಿ ಅಥವಾ ಜನಸಾಮಾನ್ಯರೆ ಆಗಲಿ ಪಂಚೇಂದ್ರಿಯಗಳನ್ನು ಅಧೀನದಲ್ಲಿರಿಸಿಕೊಳ್ಳದಿದ್ದರೆ ಅನೇಕ ಅನರ್ಥಗಳು ಸಂಭವಿಸಿಬಿಡುತ್ತವೆ. ಅರಿಷಡ್ವರ್ಗಗಳನ್ನು ಗೆಲ್ಲಬೇಕಾದ ಅನಿವಾರ್ಯತೆ ರಾಜನಿಗಿದೆಯೆಂಬ ಕೌಟಿಲ್ಯನ ಅರ್ಥಶಾಸ್ತ್ರದ ಈ ಮೇಲಿನ ಶ್ಲೋಕಗಳು ಇಂದಿನವರಿಗೆ ಸೂಕ್ತಿಯಂತಿದೆ.

ತಂದೆ, ತಾಯಿ ಹೇಗಿರಬೇಕು, ಮಕ್ಕಳು ಹೇಗಿರಬೇಕು, ಗಂಡ, ಹೆಂಡತಿ ಹೇಗಿರಬೇಕು, ಸಹೋದರ, ಸಹೋದರಿಯರು ಬಂಧು ಬಳಗದವರು ಹೇಗಿರಬೇಕು ಎಂಬುದನ್ನು ತಿಳಿದುಕೊಳ್ಳಬೇಕಾದರೆ ರಾಮಾಯಣ, ಮಹಾಭಾರತವನ್ನು ಓದಲು ಹೇಳುತ್ತಾರೆ. ಆದರೆ ಒಬ್ಬ ರಾಜನಾದವನು ಅಧಿಕಾರದ ಚುಕ್ಕಾಣಿ ಹಿಡಿದವನು ಹೇಗಿರಬೇಕು

ಎಂಬುದನ್ನು ತಿಳಿಯಲು ಕೌಟಿಲ್ಯನ ಅರ್ಥಶಾಸ್ತ್ರವನ್ನು ಅಭ್ಯಸಿಸಿದರೆ ಮಾತ್ರ ಅರ್ಥವಾಗುತ್ತದೆ. ಕೌಟಿಲ್ಯನ ಆದರ್ಶ ನಾಯಕ ವ್ಯಸನಗಳಿಗೆ, ರಾಗದ್ವೇಷಗಳಿಗೆ, ಅತೀತ ಮೌಲ್ಯಗಳಿಗೆ ಪ್ರಾಧಾನ್ಯತೆ ನೀಡುವ ವ್ಯಕ್ತಿತ್ವ. ಸಮರ್ಥತೆಗಾಗಿ ಶ್ರಮಿಸುವ ಶ್ರದ್ಧಾಳು. ಸಕಲರನ್ನು ಪೊರೆವ ಗುಣವುಳ್ಳ ಸಹೃದಯಿ, ಯುದ್ಧತಂತ್ರ ನಿಪುಣ. ಇಂಥವರು ಒಂದು ದೇಶದ ಪ್ರಧಾನ ಮಂತ್ರಿಯಾದರೆ ಆ ದೇಶವು ಸುಭಿಕ್ಷವಾಗುತ್ತದೆ. ಉನ್ನತ ಅಧಿಕಾರಿಗಳಾಗಿದ್ದರೆ ಎಲ್ಲರೂ ಸುಖ ಸಂತೋಷದಿಂದಿರುತ್ತಾರೆ. ಉದ್ಯಮಪತಿಯಾದರೆ ಆ ಉದ್ಯಮ ವಿಶ್ವದರ್ಜೆಗೆ ಏರುತ್ತದೆ.

ನಾಯಕ ಕಷ್ಟಪಟ್ಟು ದುಡಿಯಬೇಕು. ಕೆಲಸಗಾರರಿಂದಲೂ ಕೆಲಸ ಮಾಡಿಸಬೇಕು. ಆತ ಆಲಸಿಗನಾದರೆ ಆತನನ್ನು ಅನುಸರಿಸುವ ಜನರು ಸೋಮಾರಿಗಳಾಗುತ್ತಾರೆ. ಆಡಳಿತ ತಪ್ಪುದಾರಿ ಹಿಡಿಯುತ್ತದೆ ಎಂದು ಎಚ್ಚರಿಕೆ ನೀಡುತ್ತಾನೆ ಕೌಟಿಲ್ಯ.

**"ಯೊಯಸ್ಮಿನ್ ಕರ್ಮಣಿ ಕುಶಲಃ ತಂ**
**ತಸ್ಮಿನ್ನೇವ ನಿಯೋಜಯೇತ್..."**

ಎಂದರೆ ಯಾರು ಯಾವ ಕ್ಷೇತ್ರದಲ್ಲಿ ನಿಪುಣರೋ ಅವರನ್ನು ಆ ಕ್ಷೇತ್ರದಲ್ಲಿ ತೊಡಗಿಸಬೇಕು ಎಂದರ್ಥ. ಮಾನವ ಸಂಪನ್ಮೂಲವನ್ನು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಾಗ ಅತ್ಯಂತ ಜಾಗ್ರತೆ ಬೇಕಾಗುತ್ತದೆ ಎಂಬ ಕೌಟಿಲ್ಯನ ಚಿಂತನೆಯನ್ನು ಅರ್ಥಶಾಸ್ತ್ರದ ಪಿತಾಮಹನೆಂದು ಖ್ಯಾತನಾದ ಸಂಪ್ರದಾಯ ಪಂಥದ ಅರ್ಥಶಾಸ್ತ್ರಜ್ಞ ಆಡಂಸ್ಮಿತ್‌ರವರ ಶ್ರಮ ವಿಭಜನೆಯ (Division of Labour) ಪರಿಭಾವನೆಯಲ್ಲಿ ಗುರುತಿಸಬಹುದು. ಈ ಕುರಿತಾಗಿ ಇವರೀರ್ವರ ಚಿಂತನೆಯಲ್ಲಿ ಸಾಮ್ಯತೆ ಇದೆ. ರಾಷ್ಟ್ರದ ಸಂಪತ್ತಿನ ಮೂಲವಾಗಿರುವ ಶ್ರಮವು ಉತ್ಪಾದಕತೆಯನ್ನು ಹೆಚ್ಚಿಸುವ ಮೂಲಕ ರಾಷ್ಟ್ರದ ಸಂಪತ್ತಿನ ಹೆಚ್ಚಳಕ್ಕೆ ಕಾರಣವಾಗುತ್ತದೆ. ಆಡಂಸ್ಮಿತ್ ಪ್ರಕಾರ ಶ್ರಮವಿಭಜನೆಯೆಂದರೆ ಯಾವುದೇ ಒಂದು ಉದ್ಯಮದಲ್ಲಿ ಉತ್ಪಾದನೆಯು ವಿವಿಧ ಹಂತಗಳನ್ನು ಹಾದು ಬರುವಾಗ ಒಂದೊಂದು ಹಂತದಲ್ಲಿ ಬೇರೆ ಬೇರೆ ಕೆಲಸದಲ್ಲಿ ಅಂದರೆ ತಾವು ಮಾಡುವ ಕೆಲಸದಲ್ಲಿ ನೈಪುಣ್ಯತೆಯನ್ನು ಹೊಂದಿರುವ ಜನರು ಉತ್ಪಾದನೆಯನ್ನು ಕೈಗೊಳ್ಳುವುದು ಎಂದರ್ಥ. ಇದರಿಂದ ಕೆಲಸಗಾರನ ಚಾತುರ್ಯ ಹೆಚ್ಚಳವಾಗುವುದಲ್ಲದೆ ಉತ್ಪಾದನೆ ಹೆಚ್ಚಾಗುತ್ತದೆ ಹಾಗು ಸಮಯವು ಉಳಿತಾಯವಾಗುತ್ತದೆ ಎಂಬುದಾಗಿದೆ.

ಸರ್ಕಾರವು ಸರ್ವಶ್ರೇಷ್ಠ ವ್ಯವಸ್ಥೆಯಾಗಿದ್ದು ವ್ಯಾಪಕವಾದ ಪ್ರಭಾವವನ್ನು ಹೊಂದಿದ್ದ ಆಗಿನ ಕಾಲದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರವು ವಿವರಿಸುವ ಮತ್ತು ಪ್ರತಿಪಾದಿಸುವ ಆರ್ಥಿಕತೆಯು ಸಂಪೂರ್ಣವಾಗಿ ಸರ್ಕಾರದ ನಿಯಂತ್ರಣದಲ್ಲಿರುವುದಾಗಿದೆ. ಆರ್ಥಿಕ ಕ್ಷೇತ್ರಗಳಲ್ಲಿ ಸರ್ಕಾರ ನೇರವಾಗಿ ಭಾಗವಹಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಕೃಷಿ, ಕೈಗಾರಿಕೆ, ಗಣಿಗಾರಿಕೆ, ವ್ಯಾಪಾರ, ರಸ್ತೆ ನಿರ್ಮಾಣ, ಅರಣ್ಯ ರಕ್ಷಣೆ ಎಲ್ಲದರ ಹೊಣೆ ಆಳುವ ಸರ್ಕಾರದ್ದು; ಸರ್ಕಾರವೆಂದರೆ ಕೇವಲ ತೆರಿಗೆ ವಿಧಿಸುವುದಲ್ಲ ಎಂದು ಹೇಳುವ ಕೌಟಿಲ್ಯ, ರಾಜ್ಯ, ರಾಜ್ಯದ ಜನತೆಯ ಹಿತಕ್ಕಾಗಿ ರಾಜನಾದವನು ಕಠಿಣ ಕ್ರಮಗಳನ್ನುಕೈಗೊಳ್ಳಲು ಹಿಂಜರಿಯಬಾರದು ಹಾಗೆಯೆ ರಾಜನಾದವನು ಅಪವ್ಯಯ ದುಂದುವೆಚ್ಚ ಮಾಡಬಾರದು. ಆರ್ಥಿಕತೆಯಲ್ಲಿ ಶಿಸ್ತು ತರಲು ಪ್ರಯತ್ನಿಸಬೇಕು ಎಂದು ಹೇಳಿದ್ದಾನೆ.



**"ಅರ್ಥ ದೂಷಕಂ ಶ್ರೀಃ ಪರಿತ್ಯಜತಿಃ"**

ಅಪವ್ಯಯ ಮಾಡುವ ಆರ್ಥಿಕ ವ್ಯವಹಾರದ ಅರಿವಿರದ ರಾಜನನ್ನು ರಾಜ್ಯ (ಲಕ್ಷ್ಮಿಯು) ಕೈಬಿಡುವಳು.

**"ದಂಡನೀತಿ ಪ್ರಜಾಃ ಸಂರಕ್ಷತಿ"**

ದಂಡನೀತಿಯನ್ನು ಅನುಸರಿಸುವ ರಾಜನು ಪ್ರಜೆಗಳನ್ನು ರಕ್ಷಣೆ ಮಾಡುತ್ತಾನೆ. ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುವುದು ರಾಜನಾದವನ ಕರ್ತವ್ಯ.

ಇಂದಿನ ಆರ್ಥಿಕತೆಯ ಕಾರ್ಯಾಚರಣೆಯಲ್ಲಿ ಖಾಸಗಿ ಉದ್ಯಮ ಮತ್ತು ಬಂಡವಾಳಕ್ಕೆ ಹೆಚ್ಚು ಉತ್ತೇಜನ ಪ್ರೋತ್ಸಾಹ ನೀಡಿರುವುದನ್ನು ಕಾಣುತ್ತೇವೆ. ಹಾಗೆ ನೋಡಿದರೆ ಇಂದು ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಪಾತ್ರ ತುಂಬಾ ಕಡಿಮೆಯಾಗುತ್ತಿದೆ. ಕೇವಲ ತೆರಿಗೆ ವಿಧಿಸುವುದು ಮತ್ತು ಸಂಪನ್ಮೂಲಗಳನ್ನು ಸಂಗ್ರಹಿಸುವುದಕ್ಕೆ ಹಾಗೂ ಅದನ್ನು ವೆಚ್ಚ ಮಾಡುವುದಕ್ಕೆ ಮಾತ್ರ ಸರ್ಕಾರ ಎಂಬಂತಾಗಿದೆ. ಜನರ ತೆರಿಗೆ ಹಣವು ಅಭಿವೃದ್ಧಿಕಾರ್ಯಗಳಿಗೆ ಸಮರ್ಪಕವಾಗಿ ಬಳಕೆಯಾಗದೆ ಅಪವ್ಯಯವಾಗುತ್ತಿದೆ. ಖಾಸಗೀಕರಣದ ಪರಿಣಾಮ ಸರ್ಕಾರವು ಖಾಸಗಿ ಉದ್ಯಮ ಮತ್ತು ಬಂಡವಾಳಿಗರಿಗೆ ನೀಡಲಾಗುತ್ತಿರುವ ಪ್ರಾಮುಖ್ಯತೆ ಹೆಚ್ಚಾಗುತ್ತಿದೆ. ಇದರಿಂದಾಗಿ ದೇಶದ ನೈಸರ್ಗಿಕ ಸಂಪನ್ಮೂಲ ಮತ್ತು ಆರ್ಥಿಕ ವ್ಯವಸ್ಥೆ ಬಂಡವಾಳಶಾಹಿಗಳ ಹಿಡಿತಕ್ಕೆ ಸಿಲುಕಿಕೊಳ್ಳುತ್ತಿದೆ. ಇದು ದೇಶದಲ್ಲಿ ಆರ್ಥಿಕ ಅಸಮಾನತೆಗೆ ಕಾರಣವಾಗುತ್ತಿದೆ. ಇದಲ್ಲದೆ ಅನೇಕ ಕಾರಣಗಳಿಂದ ಆರ್ಥಿಕಾಭಿವೃದ್ಧಿ ಮತ್ತು ಜನರ ಕಲ್ಯಾಣಕ್ಕಾಗಿ ಶಾಸನಗಳ ಮೂಲಕ ಕಠಿಣ ಕ್ರಮ ಕೈಗೊಳ್ಳಲು ನಮ್ಮ ಸರ್ಕಾರಗಳು ಮುಂದಾಗುವುದಿಲ್ಲ. ಈ ಕಾರಣದಿಂದಲೆ ಅರ್ಥಶಾಸ್ತ್ರಜ್ಞ ಗುನ್ನಾರ್‌ಮಿರ್ಡಾಲ್ ಭಾರತವು ಸೇರಿದಂತೆ ಏಷ್ಯಾದ ಅನೇಕ ರಾಷ್ಟ್ರಗಳನ್ನು 'ಮೃದು ರಾಜ್ಯಗಳು' (Soft States) ಎಂದಿದ್ದಾನೆ.

**"ಆಶ್ರಿತೈರಪ್ಯವಮನ್ಯತೇ ಮೃದು ಸ್ವಭಾವಃ"**

ರಾಜಕಾರ್ಯವು ಅತ್ಯಂತ ಮಹತ್ತರವಾದ ಪಾತ್ರ. ಧೈರ್ಯ, ಸ್ಥೈರ್ಯ, ಬುದ್ಧಿವಂತಿಕೆ ಇದ್ದಾಗ ಮಾತ್ರ ರಾಜನ ಸ್ಥಾನ ಶೋಭಿಸುತ್ತದೆ. ಮೃದು ಸ್ವಭಾವದ ರಾಜನು ಗುರುತರವಾದ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥನಾಗಿರುತ್ತಾನೆ. ಆತನು ತನ್ನ ಆಶ್ರಯಕ್ಕೆ ಒಳಗಾಗಿರುವವರಿಂದಲೆ ಅವಮಾನಿತನಾಗುವನು ಎಂಬ ಕೌಟಿಲ್ಯನ ಮಾತುಗಳು ನಮ್ಮ ಇಂದಿನ ಕೆಲವು ರಾಜಕೀಯ ಧುರೀಣರ ದುಸ್ಥಿತಿಗೆ ಎಷ್ಟು ಪ್ರಸ್ತುತವೆನಿಸುತ್ತದೆ ಅಲ್ಲವೆ?

ಕೃಷಿಯನ್ನು ಅಭಿವೃದ್ಧಿಪಡಿಸುವುದು ಸರ್ಕಾರದ ಪ್ರಮುಖ ಚಟುವಟಿಕೆಯಾಗಬೇಕು. ಕೆರೆಕಟ್ಟೆಗಳನ್ನು ನಿರ್ಮಿಸುವುದು, ಹಣ್ಣು ಮತ್ತು ಹೂದೋಟಗಳನ್ನು ಬೆಳೆಸುವುದು ಕೃಷಿಕರಿಗೆ ಪಶುಸಂಗೋಪನೆ ಮತ್ತು ಹುಲ್ಲುಗಾವಲು ಬೆಳೆಸಲು ಉತ್ತೇಜಿಸುವುದು. ನೀರಾವರಿ ಸೌಲಭ್ಯ ಒದಗಿಸುವುದು ರಾಜನ ಆದ್ಯ ಕರ್ತವ್ಯವೆಂದು ಕೌಟಿಲ್ಯನ ಅರ್ಥಶಾಸ್ತ್ರ ಹೇಳುತ್ತದೆ. ಫ್ರಾನ್ಸಿನ ಹದಿನಾಲ್ಕನೆ ಲೂಯಿಯ ಆಸ್ಥಾನ ವೈದ್ಯನು, ಆರ್ಥಿಕ ಚಿಂತಕನು ಆಗಿದ್ದ, ಕೃಷಿ ಪಂಥದ 'ಫ್ರಾಂಕಾಯ್ಸ್ ಕ್ವೆಸ್ನೇ'ಯು ಕೃಷಿಯು ಅತ್ಯಂತ ಮಹತ್ವದ ಕಸುಬು, ಕೃಷಿಕನು ಬಡವನಾದರೆ ರಾಜಧಾನಿಯು ಬಡವಾಗುತ್ತದೆ ಮತ್ತು ರಾಜನು ಬಡವನಾಗುತ್ತಾನೆ ಎಂದು ಹೇಳಿದ್ದಾನೆ. ಕೃಷಿಕರ ಬಡತನದಿಂದಾಗಿ ರಾಜ್ಯವು ಸೊರಗುತ್ತದೆ ಎಂಬುದು ಅವನ ನಿಲುವಾಗಿತ್ತು. ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವ ದಿಸೆಯಲ್ಲಿ ಕೃಷಿಯನ್ನು ಬಲಪಡಿಸಬೇಕು ಎಂಬುದು ಕ್ವೆಸ್ನೇಯ ವಾದವಾಗಿತ್ತು.

ಇಂದು ಭಾರತದ ಆರ್ಥಿಕ ಸುಧಾರಣೆಗಳ ಕಾರ್ಯಕ್ರಮದಲ್ಲಿ ಕೇವಲ ಕೈಗಾರಿಕೆ, ಸೇವಾ ವಲಯ ಮತ್ತು ಬಾಹ್ಯ ವಲಯಗಳಿಗೆ ಆದ್ಯತೆ ನೀಡಲಾಗಿದೆ. ಆದರೆ ದೇಶದ ಅತಿ ದೊಡ್ಡ ವಲಯವಾದ ಕೃಷಿ ನಿರ್ಲಕ್ಷಿಸಿತ ಕ್ಷೇತ್ರವಾಗಿದೆ. ಕೃಷಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡು ರೈತರ ಬದುಕನ್ನು ಹಸನುಗೊಳಿಸುವಲ್ಲಿ ನಮ್ಮ ಸರ್ಕಾರಗಳು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿಲ್ಲ. ನಮ್ಮ ರೈತರು ಬೆಳೆದ ಬೆಳೆಗೆ ಸರಿಯಾದ ಮಾರುಕಟ್ಟೆಯಾಗಲಿ, ಬೆಲೆಯಾಗಲಿ ಇಲ್ಲ. ಪರಿಣಾಮ ಸಾಲದ ಸುಳಿಯಲ್ಲಿ ಸಿಲುಕಿರುವ ಭಾರತದ ರೈತ ಆತ್ಮಹತ್ಯೆಯ ಹಾದಿ ಹಿಡಿದಿದ್ದಾನೆ; ಇಂತಹ ಪರಿಸ್ಥಿತಿಯಲ್ಲಿ "ಕೃಷಿ ಒಂದೇ ಎಲ್ಲಾ ಆರ್ಥಿಕ ಚಟುವಟಿಕೆಗಳಿಗೆ ಆಧಾರ, ಉತ್ಪಾದಕ ಕಸುಬು ಮತ್ತು ಎಲ್ಲಾ ಸಂಪತ್ತಿನ ಮೂಲ". ಆದ್ದರಿಂದ ಪ್ರಭುತ್ವ ಕೃಷಿಗೆ ಹೆಚ್ಚು ಒತ್ತು ನೀಡಿ ಕೃಷಿಯನ್ನು ಅಭಿವೃದ್ಧಿಪಡಿಸಬೇಕು ಎಂದು ಹೇಳಿದ ಕೌಟಿಲ್ಯ ಮತ್ತು ಫ್ರಾಂಕಾಯ್ಸಾ ಕ್ವೆಸ್ನೇ ವಿಚಾರಗಳು ಅನುಸರಣೀಯ.



ಖನಿಜ ಸಂಪನ್ಮೂಲಗಳ ನಿರ್ವಹಣೆಯು ಸರ್ಕಾರದ ಚಟುವಟಿಕೆಯ ಇನ್ನೊಂದು ಮುಖ್ಯ ಕ್ಷೇತ್ರವಾಗಿತ್ತು. ಮೌರ್ಯ ಸಾಮ್ರಾಜ್ಯದಲ್ಲಿ ಎಲ್ಲಾ ಗಣಿಗಳನ್ನು ಸರ್ಕಾರವೇ ಹೊಂದಿತ್ತು. ಹೀಗಾಗಿ ಹೊಸ ಗಣಿಗಳನ್ನು ಪ್ರಾರಂಭಿಸುವುದು ಹಳೆಯ ಗಣಿಗಳನ್ನು ಪುನರುಜ್ಜೀವನಗೊಳಿಸುವುದು ಸರ್ಕಾರದ ಮುಖ್ಯ ಚಟುವಟಿಕೆಯಾಗಿತ್ತು.

ಇಂದು ದೇಶದ ಖನಿಜ ಸಂಪನ್ಮೂಲಗಳು ಬಂಡವಾಳಶಾಹಿಗಳ ಹಿಡಿತದಲ್ಲಿದ್ದು, ಅವರ ಲಾಭಕೋರತನದ ದುರಾಸೆಗೆ ಬರಿದಾಗುತ್ತಿವೆ; ಬಹುಪಾಲು ಗಣಗಾರಿಕೆ ಖಾಸಗಿ ಶ್ರೀಮಂತರ ಪಾಲಾಗಿವೆ. ಇದರಿಂದ ಪರಿಸರ ಸಂರಕ್ಷಣೆ ಮತ್ತು ಅವಿಶ್ರಾಂತತೆಗೆ ಧಕ್ಕೆಯಾಗುತ್ತಿದೆ. ಭವಿಷ್ಯದ ಒಳಿತಿನ ದೃಷ್ಟಿಯಿಂದ ನಮ್ಮ ಆರ್ಥಿಕ ಸುಧಾರಕರು ಕೌಟಲ್ಯನ ಆರ್ಥಿಕ ನೀತಿ ಸೂತ್ರಗಳನ್ನು ತಿಳಿದು ನಡೆಯುವುದು ಒಳ್ಳೆಯದು.

**"ಆಪದರ್ಥೆ ಧನಂ ರಕ್ಷೇಚ್ಚೆ ಮತಾಂ ಕುತ ಆಪದಃ|**
**ಕದಾಚಿಚ್ಚ್ಯಾಲಿತಾ ಲಕ್ಷ್ಮೀಃ ಸಂಚಿತಾಽಪಿ ವಿನಶ್ಯತಿ||"**

ಮನುಷ್ಯನು ತನ್ನ ದೈನಂದಿನ ಜೀವನೋಪಾಯಕ್ಕಾಗಿ ಧನಾರ್ಜನೆ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಕಷ್ಟಕರ ದಿನಗಳಿಗಾಗಿ ಮತ್ತು ತೊಂದರೆಗಳನ್ನು ಎದುರಿಸಲು ಹಣವನ್ನು ರಕ್ಷಿಸಬೇಕಾಗುತ್ತದೆ. ಆದ್ದರಿಂದ ಹಣವನ್ನು ಅನಗತ್ಯವಾಗಿ ವ್ಯಯ ಮಾಡಬಾರದು.

**"ಧರಿದ್ರತಾ ನಾಶನಂ ದಾನಂ ಶೀಲಾ ದುರ್ಗತಿ ನಾಶಃ|**
**ಅಜ್ಞಾನ ನಾಶಿನಿ ಪ್ರಜ್ಞಾ ಭಾವನಾಭಯ ನಾಶಿನೀ||"**

ಸನಾತನ ಕಾಲದಿಂದಲೂ ನಮ್ಮ ಸಂಸ್ಕೃತಿಯಲ್ಲಿ ದಾನ ಧರ್ಮವನ್ನು ಪ್ರಶಂಸಿಸಲಾಗಿದೆ. ಜ್ಞಾನವು ಅಜ್ಞಾನವನ್ನು ದೂರವಿರಿಸುವಂತೆ ದಾನ-ಧರ್ಮವು ಬಡತನವನ್ನು ನಾಶ ಮಾಡುತ್ತದೆ. ದಾನ ನೀಡುವವನಿಗೆ ಮತ್ತಷ್ಟು ದುಡಿಯುವ ಚೈತನ್ಯ ಹೆಚ್ಚಾಗಿ ಸುಖ ಸಮೃದ್ಧಿ ಲಭಿಸುವುದು ಎಂದು ಈ ಶ್ಲೋಕದಲ್ಲಿ ಹೇಳಲಾಗಿದೆ.

**"ಉಪಾರ್ಜಿತಾನಾಂ ವಿತ್ತಾನಾಂ ತ್ಯಾಗಪವಹಿ ರಕ್ಷಣಮ್ |**
**ತಡಾಗೋದರ ಸಂಸ್ಥಾನಾಂ ಪರಿವಾಹ ಇವಾಂಭಸಾಮ್ ||"**

ಗಳಿಸಿದ ಹಣವು ಖರ್ಚಾಗಬೇಕು. ಅದು ಸದಾ ಚಲಾವಣೆಯಲ್ಲಿರಬೇಕು. ಹಣವು ಸಕ್ರಿಯವಾಗಿರುವು ದರಿಂದ ಆರ್ಥಿಕ ಪ್ರಕ್ರಿಯೆ ಸುಗಮವಾಗಿ ನಡೆಯುತ್ತದೆ. ಅದರಲ್ಲು ಹಣ ಯೋಗ್ಯವಾದೆಡೆಗೆ ಸದ್ವಿನಿಯೋಗ ವಾಗಬೇಕು.

**"ಉದ್ಯೋಗೇ ನಾಸ್ತಿ ದಾರಿದ್ರ್ಯಂ ಜಪತೋ ನಾಸ್ತಿ ಪಾತಕಂ|**
**ಮೌನೇನ ಕಲಹೋನಾಸ್ತಿ ಜಾಗ್ರತಸ್ಯಚನ ಭಯಂ||"**

ಕೆಲಸದಲ್ಲಿ ನಿರತನಾದವನಿಗೆ ಬಡತನ ಎಂಬುದು ಹತ್ತಿರವು ಸುಳಿಯದು. ಸನ್ಮಾರ್ಗದಲ್ಲಿ ನಡೆಯುವವನಿಗೆ ಯಾವುದೇ ಪಾತಕದ ಕಳಂಕ ತಟ್ಟದು. ಮೌನಿಯಾದವನಿಗೆ ಜಗಳವಿಲ್ಲ, ಸದಾ ಎಚ್ಚರದಿಂದಿರುವವನಿಗೆ ಯಾವ ಭಯವು ಇರದು ಎಂಬುದೇ ಈ ಶ್ಲೋಕದ ತಾತ್ಪರ್ಯವಾಗಿದೆ.

**'ಅಕೃತೇರ್ನಿಯತಾ ಕ್ಷುದ್ವ್ಯಾಧಾಃ'**

ಸೋಮಾರಿಯಾದವನಿಗೆ ತಾಪಗಳು ಹೆಚ್ಚಾಗಿ ಅವನ ಜೀವನ ಅಧೋಗತಿಯತ್ತ ಸಾಗುವುದು. ಉದ್ಯೋಗನಿರತನು ಎಂದೆಂದೂ ಕೆಡನು.

ಕೌಟಿಲ್ಯನ ಮೇಲಿನ ಎಲ್ಲಾ ಶ್ಲೋಕಗಳಲ್ಲಿ ಬಸವಾದಿ ಶರಣರ ಕಾಯಕ ದಾಸೋಹ ತತ್ವಗಳಿರುವುದನ್ನು ಕಾಣಬಹುದು. ಜನರು ಅನುಸರಿಸುವ ಯಾವುದೇ ಕೆಲಸ ನೈತಿಕ ನೆಲೆಯಲ್ಲಿರಬೇಕು. ಸಮಾಜದ ಪ್ರಗತಿಗೆ ಪೂರಕವಾಗಿರಬೇಕು. ಮನುಷ್ಯನಿಗೆ ಅತಿಯಾಸೆ ಸಲ್ಲದು. ಗಳಿಸಿದ ಹಣವನ್ನು ಕೂಡಿಡದೆ ತನ್ನ ಸಮಾಜಕ್ಕಾಗಿಯೆ ವಿನಿಯೋಗಿಸಬೇಕು. ಹೀಗೆ ಸಮಾಜಕ್ಕಾಗಿ, ಜನರ ಒಳಿತಿಗಾಗಿ ವಿನಿಯೋಗಿಸುವ ಹಣವು ದಾಸೋಹ ವೆನಿಸುತ್ತದೆ. ಈ ತತ್ವವನ್ನರಿಯುವುದರಿಂದ ಯಾರೂ ಸೋಮಾರಿಗಳಾಗದೆ ಎಲ್ಲರು ಕಾಯಕ ಮಾಡುವಂತಾಗು ತ್ತದೆ ಎಂಬ ಶರಣರ ಸಂದೇಶಗಳನ್ನೇ ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಹೇಳಿದ್ದಾನೆ.

ಸಾಮರ್ಥ್ಯ ಇರುವವರ ಮೇಲೆ ಹೆಚ್ಚು ತೆರಿಗೆಗಳನ್ನು ವಿಧಿಸಬೇಕು ಎಂದು ಹೇಳಿರುವ ಕೌಟಿಲ್ಯ ಆದಾಯ ತೆರಿಗೆ ವ್ಯವಸ್ಥೆಯನ್ನು ಹಣ್ಣಿನ ತೋಟಕ್ಕೆ ಹೋಲಿಸುತ್ತಾನೆ. ಹಸಿ ಕಾಯಿಗಳನ್ನು ಕೀಳುವುದರಿಂದ ರೈತನಿಗೂ ನಷ್ಟ, ಬೆಳೆಗೂ ಹಾನಿ ಎನ್ನುತ್ತಾನೆ. ತೆರಿಗೆ ಕಳ್ಳರನ್ನು ನಿರ್ನಾಮ ಮಾಡುವುದು, ಆದಾಯದ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು, ಸರ್ಕಾರಿ ನೌಕರರನ್ನು ನಿಯಂತ್ರಿಸುವುದು, ವಾಣಿಜ್ಯ ಬೆಳೆಗಳನ್ನು ಬೆಳೆಯುವುದು, ತೆರಿಗೆ ವಿನಾಯಿತಿ ಕಡಿಮೆಗೊಳಿಸುವುದು, ನಗದು ಬಹುಮಾನವನ್ನು ಇಳಿಸುವುದು ಇವೇ ಮುಂತಾದವುಗಳು ಬೊಕ್ಕಸವನ್ನು ಹೆಚ್ಚಿಸುವ ಮಾರ್ಗೋಪಾಯಗಳಾಗಿವೆ ಎನ್ನುವುದು ಕೌಟಿಲ್ಯನ ತೆರಿಗೆ ನೀತಿಯಾಗಿದೆ. ಈ ಆರ್ಥಿಕ ದೃಷ್ಟಕೋನವು ಜನರ ಸಂಗ್ರಹ ಪ್ರವೃತ್ತಿ ಮತ್ತು ವಿಲಾಸಿ ಜೀವನಕ್ಕೆ ಕಡಿವಾಣ ಹಾಕುವ ಹಾಗೂ ತನ್ಮೂಲಕ ಆರ್ಥಿಕ ಸ್ಥಿರತೆ ಮತ್ತು ಸಮಾನತೆ ಸಾಧಿಸುವ ಉಪಾಯವನ್ನು ಒಳಗೊಂಡಿದೆ.

ವಿದೇಶಾಂಗ ನೀತಿಯ ಬಗೆಗೆ ಒಂದು ದೊಡ್ಡ ಅಧ್ಯಾಯವೇ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿದೆ. ಪರ ರಾಷ್ಟ್ರಗಳಿಗೆ ಹೋಲಿಸಿದರೆ ತನ್ನ ರಾಷ್ಟ್ರ ದುರ್ಬಲವಾಗಿದ್ದರೆ ಮಾತ್ರ ಸಂಧಿ ಮಾಡಿಕೊಳ್ಳಬೇಕು. ಪ್ರಬಲವಾಗಿದ್ದರೆ ಯುದ್ಧ ಮಾಡಬಹುದು,



ಸಮಬಲರಾಗಿದ್ದಲ್ಲಿ ಸುಮ್ಮನಿರಬಹುದು. ವಿವಿಧ ಕಾರಣಗಳಿಂದ ದೇಶಗಳಲ್ಲಿ ಸಂಚರಿಸುವ ವಿದೇಶಿಯರ ಮೇಲೆ ಸೂಕ್ಷ್ಮ ನಿಗಾ ವಹಿಸಬೇಕು ಎಂದು ಹೇಳುತ್ತದೆ. ಇಂದಿನ ಭಾರತದ ಸ್ಥಿತಿಗೆ ಇದು ಪ್ರಸ್ತುತವೆನಿಸುತ್ತದೆ. ಇಂದು ದೇಶ ವಿದೇಶಿ ಭಯೋತ್ಪಾದಕರ ದಾಳಿಯಿಂದ ತತ್ತರಿಸಿದೆ. ಜನರಲ್ಲಿ ಅಸ್ಥಿರತೆಯ ಭಾವ ಆವರಿಸಿದೆ. ವಿದೇಶಿ ಬಂಡವಾಳಕ್ಕೆ ರತ್ನಗಂಬಳಿ ಸ್ವಾಗತ ನೀಡುವ ನಮ್ಮ ಸರ್ಕಾರಗಳು ಭಯೋತ್ಪಾದನೆ ಹತ್ತಿಕ್ಕಲು ಮನಸ್ಸು ಮಾಡುತ್ತಿಲ್ಲ. ಶ್ರೀಮಂತ ರಾಷ್ಟ್ರಗಳು, ವಿಶ್ವ ಬ್ಯಾಂಕು, WTO ಮುಂತಾದ ಅಂತಾರಾಷ್ಟ್ರಿಯ ಸಂಘಟನೆಗಳ ಅಣತಿಯಂತೆ ನಿರ್ಧಾರ ಕೈಗೊಳ್ಳುತ್ತವೆ. ಇದರಿಂದ ದೇಶದ ಸ್ವಾತಂತ್ರ್ಯ, ಸ್ವಾಯತ್ತತೆಗೆ ಧಕ್ಕೆ ಉಂಟಾಗಿದೆ.

ಹೀಗೆ ಕೌಟಿಲ್ಯನ ಅರ್ಥಶಾಸ್ತ್ರದ ವಿಷಯವ್ಯಾಪ್ತಿಯನ್ನು ತಿಳಿಯುತ್ತಾ ಹೋದಂತೆ ಅದರ ಹರವು ಹೆಚ್ಚಾಗುತ್ತಲೆ ಹೋಗುತ್ತದೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರ ಗ್ರಂಥದಲ್ಲಿ ಮಾಡಿರುವ ನಿರೂಪಣೆ ಅವನ ಪಾಂಡಿತ್ಯಕ್ಕೆ ಕನ್ನಡಿ ಹಿಡಿದಿದೆ. ಅವನ ಚಿಂತನೆಯಲ್ಲಿ ಸ್ವೋಪಜ್ಞತೆ (Originality) ಇದೆ. ಅವನಲ್ಲಿ ವಿಶೇಷವಾದ ವಿಶ್ಲೇಷಣಾಶಕ್ತಿ ಸಮಾಜಚಿಕಿತ್ಸಿಕ ಗುಣ ಮತ್ತು ವಿಭಿನ್ನ ದೃಷ್ಟಿಕೋನವಿದೆ. ಕೌಟಿಲ್ಯ ತಾನು ಜೀವಿಸಿದ್ದ ಕಾಲದಿಂದ ಬಹಳ ವರ್ಷಗಳ ನಂತರವೂ ಉದ್ಭವಿಸಬಹುದಾದ ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಬಗ್ಗೆ ತನ್ನ ಅರ್ಥಶಾಸ್ತ್ರ ಕೃತಿಯಲ್ಲಿ ವಿವರಿಸಿರುವನು.

ಕೌಟಿಲ್ಯನ ಅಂದಿನ ಚಿಂತನೆಗಳು, ರಾಜಕೀಯ, ವಿದೇಶಾಂಗ, ಅರ್ಥವ್ಯವಸ್ಥೆಗೆ ಸಂಬಂಧಿಸಿದ ಸೂತ್ರಗಳು ಇಂದಿಗೂ ಪ್ರಸ್ತುತನೆನಿಸುತ್ತದೆ. ಇಂದಿನ ನಮ್ಮ ಅನೇಕ ವಾಸ್ತವ ಸಮಸ್ಯೆಗಳಿಗೆ ಕೌಟಿಲ್ಯನ ಅರ್ಥಶಾಸ್ತ್ರದಿಂದ ಪರಿಹಾರ ಕಂಡುಕೊಳ್ಳಬಹುದು.

□

ಅರ್ಥಪ್ರಾಣಾಭಿಮಾನವ ಕೊಟ್ಟೆನೆಂಬರಲ್ಲದೆ
ಕೊಟ್ಟ ಭಕ್ತರನಾರನೂ ಕಂಡುದಿಲ್ಲ.
ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಇವೆಲ್ಲ ಹೊರಗಣ ಮಾತು !
ಕೂಡಲಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧುಮರಾಳ.

**ಬಸವಣ್ಣ**

# ಬಸವಣ್ಣ ಮತ್ತು ಗುರುನಾನಕ್: ಒಂದು ತೌಲನಿಕ ನೋಟ

**ಡಾ. ತಿಪ್ಪೇಸ್ವಾಮಿ**

(ಹಿಂದಿನ ಸಂಚಿಕೆಯಿಂದ)

**(ಈ) ಮಾಯೆ :** ಮಾಯೆಯನ್ನು ಕುರಿತು ಬಸವಾದಿ ಶರಣರು ಮತ್ತು ಸಿಕ್ಖ್ ಗುರುಗಳು ಸಮಾನವಾಗಿ ಚಿಂತಿಸಿದ್ದಾರೆ. ಶರಣರು ಮಾಯೆಯ ಅಸ್ತಿತ್ವವನ್ನು ಒಪ್ಪುತ್ತಾರೆ. ಸಾಧಕ ಹೆಣ್ಣು, ಹೊನ್ನು, ಮಣ್ಣೆಂಬ ಆಕರ್ಷಣೆಗೆ ಒಳಗಾಗಿ ಅಜ್ಞಾನದ ಅಂಧಕಾರದಲ್ಲಿದ್ದು ಇವುಗಳಿಂದ ಬಿಡುಗಡೆ ಹೊಂದುವುದು ಸಾಧಕನ ಗುರಿಯಾಗಬೇಕು. ಶರಣ ಧರ್ಮದ ಪ್ರಕಾರ ಮಾಯೆಗೆ ಮೂರು ಮುಖಗಳು. 1. ಆಣವ ಮಲ, 2. ಮಾಯಾಮಲ, 3. ಕಾರ್ಮಿಕ ಮಲ. ಈ ಮೂರು ಮಲಗಳಲ್ಲಿ ತೊಳಲಾಡುವುದರಿಂದ ಮೇಲೆದ್ದು ಬರುವುದೇ ಶರಣನ ಉದ್ದೇಶವಾಗಿದೆ. ವ್ಯಕ್ತಿ ಈ ಮಲಗಳ ವಶದಲ್ಲಿ ಸಿಲುಕಿ ಪರಮಾತ್ಮನನ್ನು ಮರೆತಿರುವ ಸಂಗತಿಯನ್ನು ಬಸವಣ್ಣನವರು ಹೀಗೆ ಹೇಳಿದ್ದಾರೆ:

ಊರ ಸೀರೆಗೆ ಅಗಸ ತಡಬಡಿಹಡೆದಂತೆ
ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದೆಂದು ಮರುಳಾದೆ
ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆ, ಕೂಡಲಸಂಗಮದೇವಾ

ಈ ಮಾಯೆ ಅಂದರೆ ಮನದ ವಿಕಾರಗಳು ಭಕ್ತನನ್ನು ಯಾವ ರೀತಿ ಕಾಡುತ್ತವೆ ಎಂಬುದನ್ನು ಸಹ ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ:

ನಾನೊಂದು ನೆನೆದಡೆ ತಾನೊಂದು ನೆನೆವುದು
ನಾನಿತ್ತಲೆಳೆದಡೆ ತಾನತ್ತಲೆಳೆವುದು
ತಾ ಬೇರೆ ಎನ್ನನಳಲಿಸಿ ಕಾಡಿತ್ತು
ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು
ಕೂಡಲಸಂಗಮನ ಕೂಡಿಹೆನೆಂದೊಡೆ
ತಾನೆನ್ನ ಮುಂದುಗೆಡಿಸಿತ್ತು ಮಾಯೆ

ಹೀಗೆ ಬಸವಣ್ಣನವರು ಮಾಯಾಪಾಶದಿಂದ ಸುತ್ತುವರಿದಿರುವ ಮನುಷ್ಯನನ್ನು ಈ ಪಾಶದಿಂದ ಮುಕ್ತಗೊಳಿಸಿಕೊಳ್ಳುವ ಸಂದೇಶ ನೀಡುತ್ತಾರೆ.

ನಾನಕರು ಸಹ ಕಾಮ, ಕ್ರೋಧ, ಲೋಭ, ಮೋಹ, ಅಹಂಕಾರವೇ ಮುಂತಾದ



ವಿಕಾರಗಳಿಂದ ಸುತ್ತುವರಿದಿರುವ ಮನುಷ್ಯನಿಗೆ ಇವುಗಳಿಂದ ಬಿಡುಗಡೆ ಹೊಂದಲು ಹೇಳುತ್ತಾರೆ. ನಾನಕರ ದೃಷ್ಟಿಯಲ್ಲಿ ಈ ಎಲ್ಲ ವಿಕಾರಗಳು ತಾತ್ಕಾಲಿಕವಾಗಿ ವ್ಯಕ್ತಿಯ ಅಹಂಅನ್ನು ತೃಪ್ತಿಪಡಿಸಿದರೂ ಇವುಗಳಿಂದ ಅವನಿಗೆ ಮುಕ್ತಿಯಿಲ್ಲ ಎಂದು ಹೇಳುತ್ತಾರೆ. ಮಾಯೆಯು ಜಂಜಡದಲ್ಲಿ ಸಿಲುಕಿರುವ ಮನುಷ್ಯನನ್ನು ಅದರಿಂದ ಹೊರಗೆ ಬರುವಂತೆ ನಾನಕರು ಹೇಳಿದ್ದಾರೆ:

ತೂಮ್ ಸುಣಿ ಹರಣಾ ಕಾಲಿಆ ಕೀ ವಾಡೀಐ ರಾತಾ ರಾಮ್ |
ಬಿಖು ಫಲು ಮೀಠಾ ಚಾರಿ ದಿನ್ ಫಿರಿ ಹೋವೈ ತಾತಾ ರಾಮ್ |
ಫಿರಿ ಹೋಇ ತಾತಾ ಖರಾ ಮಾತಾ ನಾಮ್ ಬಿನು ಪರತಾಪಏ |
ಓಹು ಜೆವ್ ಸಾಇರ್ ದೇಇ ಲಹರೀ ಬಿಜುಲ ಜಿವೈ ಚಮಕಏ |
ಹರಿ ಬಾಝು ರಾಖಾ ಕೋಇ ನಾಹೀ ಸೋಇ ತುಝಹಿ ಬಿಸಾರಿಆ |
ಸಚು ರಿಹೈ ನಾನಕು ಚೆತಿ ರೆ ಮನ್ ಮರಹಿ ಹರಣಾ ಕಾಲಿಆ |

ಕಪ್ಪು ಜಿಂಕೆಯಂತೆ ಪ್ರಪಂಚವೆಂಬ ಕಾಡಿನಲ್ಲಿ ಯಾವುದೇ ಹಂಗಿಲ್ಲದೆ ಸುತ್ತುವ ಮನಸ್ಸೆ, ನನ್ನ ಮಾತು ಕೇಳು. ನೀನು ಈ ಜಗತ್ತೆಂಬ ಅರಣ್ಯದಲ್ಲಿ ಮದಮತ್ತನಾಗಿ ಏಕೆ ತಿರುಗುತ್ತಿರುವೆ? ಇಲ್ಲಿನ ಹಣ್ಣುಗಳು ಒಂದಷ್ಟು ಸಮಯದಲ್ಲಿ ಸಿಹಿಯಾಗಿರುತ್ತವೆ, ಆನಂತರ ಇವು ದುಃಖ ನೀಡುವಂಥವಾಗಿವೆ. ವಿಷಯ ವಿಕಾರಗಳ ಈ ಹಣ್ಣುಗಳು ವಿಷದಿಂದ ತುಂಬಿವೆ. ಪರಮಾತ್ಮನ ಹೆಸರೇಳದೆ ಹೋದರೆ, ಇವು ತುಂಬ ದುಃಖ ನೀಡುತ್ತವೆ. ವಿಷಯ ವಿಕಾರಗಳು ಎಷ್ಟು ರಂಗುರಂಗಾಗಿರುತ್ತವೆ ಮತ್ತು ಮೋಹಕವಾಗಿರುತ್ತವೆಂದರೆ ಇವು ಶಾಶ್ವತವಲ್ಲ. ಸಾಗರದಲ್ಲಿ ತರಂಗಗಳಿದ್ದಾಗ ಅವು ಮಿಂಚಿನ ಬೆಳಕಲ್ಲಿ ಹೊಳೆಯುವಂತೆ ಹೊಳೆಯುತ್ತವೆ. ಪರಮಾತ್ಮ ನಾಮಸ್ಮರಣೆ ಇಲ್ಲದೇ ಯಾವುದೂ ರಕ್ಷಿಸುವುದಿಲ್ಲ. ಜಿಂಕೆಯಂತೆ ಕುಣಿದು ಕುಪ್ಪಳಿಸುವ ಮನವೇ, ನೀನು ಪರಮಾತ್ಮನನ್ನು ಮರೆತಿದ್ದೀಯ. ಅವನನ್ನು ಸ್ಮರಿಸು, ಇಲ್ಲದೇ ಹೋದರೆ ಈ ಅರಣ್ಯದಲ್ಲಿ ನಿನ್ನ ಸಾವು ನಿಶ್ಚಿತ.

ಇನ್ನೊಂದು ವಚನದಲ್ಲಿ ನಾನಕರು ಮನಸ್ಸನ್ನು ಕಾಡುವ ಐವರು ವೈರಿಗಳನ್ನು ಕುರಿತು ಮಾರ್ಮಿಕವಾಗಿ ಹೇಳಿದ್ದಾರೆ:

ಅವರಿ ಪಂಚ್ ಹಮ್ ಏಕ್ ಜನಾ | ಕಿವು ರಾಖಿವು ಘರ್ ಬಾರು ಮನಾ |
ಮಾರಹಿ ಲೂಟಹಿ ನೀತ್ ನೀತ್ ಕಿಸು ಆಗೈ ಕರೀ ಪುಕಾರ್ ಜನಾ || ೧ ||

ಸ್ರೀ ರಾಮ್ ನಾಮಾ ಉಚರು ಮನಾ |
ಆಗೈ ಜಮ್ ದಲು ಬಿಖಮು ಘನಾ || ರಹಾವು ||
ಉಸಾರಿ ಮಡೋಲೀ ರಾಖೈ ದುವಾರಾ ಭೀತರಿ ಬೈಠೀ ಸಾ ಘನಾ |
ಅಂಮ್ರಿತ್ ಕೆಲ್ ಕರೆ ನಿತ್ ಕಾಮಣಿ ಅವರಿ ಲುಟೆನಿ ಸು ಪಂಚ್ ಜನಾ || ೨ ||

ಧಾಹಿ ಮಡೊಲೀ ಲೂಟಿಆ ದೆಹುರಾ ಸಾ ಧನ್ ಪಕಡೀ ಏಕ್ ಜನಾ |
ಜಮ ಡಂಡಾ ಗಲಿ ಸಂಗಲು ಪಡಿಆ ಭಾಗಿ ಗಯೆ ಸೆ ಪಂಚ್ ಜನಾ || ೩ ||
ಕಾಮಣಿ ಲೋಡೈ ಸುಇನಾ ರುಪಾ ಮಿತ್ರ ಲುಡೆನಿ ಸು ಖಾಧಾತಾ |
ನಾನಕ್ ಪಾಪ್ ಕರೆ ತಿನ್ ಕಾರಣಿ ಜಾಸೀ ಜಮ್ ಪುರಿ ಬಾಧಾತಾ || ೪ ||

ಹೇ, ಮನವೇ, ನನಗೆ ಐವರು ವೈರಿಗಳಿದ್ದಾರೆ. ಆದರೆ ನಾನು ಒಬ್ಬನೆ. ನಾನು ಇವರಿಂದ ನನ್ನ ಮನೆ ಮಠವನ್ನು ಹೇಗೆ ರಕ್ಷಿಸಿಕೊಳ್ಳಲಿ? ಈ ಐವರು ನಿತ್ಯವೂ ನನಗೆ ಹೊಡೆಯುತ್ತಾರೆ ಮತ್ತು ನನ್ನ ಲೂಟಿ ಮಾಡುತ್ತಾರೆ. ಇದನ್ನು ನಾನು ಯಾರಿಗೆ ಹೇಳಲಿ? ಹೇ ಮನವೇ, ಪರಮಾತ್ಮನ ನಾಮಸ್ಮರಣೆ ಮಾಡು. ಏಕೆಂದರೆ ಯಮರಾಜನ ದೊಡ್ಡ ದಂಡೆ ಎದುರಿಗೆ ಬರುತ್ತಿದೆ. ಅಂದರೆ ಮೃತ್ಯು ಕಾಣುತ್ತಿದೆ. ಪರಮಾತ್ಮ ಈ ಶರೀರವನ್ನು ಸೃಷ್ಟಿಸಿ ಇದಕ್ಕೆ ಮೂಗು, ಕಿವಿ ಮುಂತಾದ ದಶದ್ವಾರಗಳನ್ನು ಮಾಡಿದ್ದಾನೆ. ಅವನ ಆಣತಿಯಂತೆ ಈ ಶರೀರದಲ್ಲಿ ಜೀವ ಎಂಬ ಹೆಣ್ಣು ಬಂದು ನೆಲೆಸಿತು. ಈ ಜೀವವೆಂಬ ಹೆಣ್ಣು ತನ್ನನ್ನು ತಾನು ಅಮರ ಎಂದು ಭಾವಿಸಿ, ಲೌಕಿಕ ತಮಾಷೆಗಳನ್ನು ತೋರಿಸುತ್ತಿರುತ್ತಾಳೆ. ಕಾಮಾದಿಗಳು ಮನುಷ್ಯನ ಶೋಷಿಸುತ್ತಿರುತ್ತವೆ.

ಯಮನ ದಂಡ ಶರೀರವೆಂಬ ಮಠವನ್ನು ಬೀಳಿಸಿ ಅಲ್ಲಿನದೆಲ್ಲವನ್ನೂ ಕೊಳ್ಳೆಹೊಡೆದು ಜೀವವೆಂಬ ಒಂಟಿ ಹೆಣ್ಣನ್ನು ಬಂಧಿಸುತ್ತದೆ. ಯಮನ ದಂಡ ತಲೆಗೆ ಅಪ್ಪಳಿಸುತ್ತದೆ, ಪಾಶ ಕೊರಳಿಗೆ ಬೀಳುತ್ತದೆ. ಲೂಟಿ ಮಾಡಿದ ಈ ಐವರು ಓಡಿ ಹೋಗುತ್ತಾರೆ.

ಜೀವ ಅಥವಾ ಆತ್ಮ ಎಂಬ ಹೆಣ್ಣು ಬದುಕಿರುವವರೆಗೂ ಚಿನ್ನ ಬೆಳ್ಳಿಯ ಆಭರಣಗಳನ್ನು ಕೇಳುತ್ತಿರುತ್ತಾಳೆ. ಆಕೆಯ ಸಂಬಂಧಿಕರು ತಿಂದುಣ್ಣುವ ಪದಾರ್ಥಗಳನ್ನು ಕೇಳುತ್ತಿರುತ್ತಾರೆ. ಇವರಿಗಾಗಿ ಜೀವ ಎಂಬ ಹೆಣ್ಣು ಪಾಪ ಮಾಡುತ್ತಿರುತ್ತದೆ. ಕೊನೆಗೆ ಈ ಪಾಪಗಳ ಕಾರಣದಿಂದಾಗಿ ಜೀವ ಹೆಣ್ಣು ಯಮಪುರಿಗೆ ಒಂಟಿಯಾಗಿ ಹೋಗುತ್ತಾಳೆ.

ಹೀಗೆ ಮಾಯಾಬಂಧನದಲ್ಲಿ ಸಿಲುಕಿರುವ ಆತ್ಮ ಅಥವಾ ಮನುಷ್ಯನ ಬದುಕಿನ ದಾರುಣ ಕಥೆಯನ್ನು ನಾನಕ್ ಹೇಳುತ್ತಾರೆ. ನಾನಕರ ದೃಷ್ಟಿಯಲ್ಲಿ ಈ ಮಾಯೆ ಒಂದು ಬಂಧನ. ಇದರಿಂದ ಮುಕ್ತಿ ಪಡೆದುಕೊಂಡು ಸಾಗಲಿ ಜೀವನ ಎಂದು ನುಡಿಯುತ್ತಾರೆ.

ಶರಣರು ಮತ್ತು ಸಿಕ್ಖರು ಮಾಯೆಯ ಅಸ್ತಿತ್ವವನ್ನು ನಂಬಿ ಅದರಿಂದ ಮುಕ್ತರಾಗಲು ಪ್ರಯತ್ನಿಸುವಂತೆ ಹೇಳುತ್ತಾರೆ. ಬಸವಣ್ಣನವರು ಮಾಯೆಯ ಮೂರು ಮುಖ-ಮಲತ್ರಯ-ಗಳ ಪಾರಿಭಾಷಿಕ ಶಬ್ದಾವಳಿಗಳಲ್ಲಿ ಹೇಳಿದರೆ ನಾನಕರು ಈ ಬಗೆಯ ಪಾರಿಭಾಷಿಕ ಶಬ್ದಗಳನ್ನು ಬಳಸದೆ ಕಾಮಕ್ರೋಧಾದಿಗಳಿಂದ ಬಿಡುಗಡೆ ಹೊಂದಲು ಹೇಳುತ್ತಾರೆ.



೫. **ಮೋಕ್ಷ:** ಶರಣರ ದೃಷ್ಟಿಯಲ್ಲಿ ಮೋಕ್ಷವೆಂಬುದು ಪರವಸ್ತುವಲ್ಲ. ಜೀವ ತನ್ನ ಕ್ರಿಯೆ ಮತ್ತು ಜ್ಞಾನದ ಬಲದಿಂದ ಹಂತ ಹಂತವಾಗಿ ಮೇಲೇರಿ ಪರಮಾತ್ಮನಲ್ಲಿ ಲೀನವಾಗುವುದೇ ಐಕ್ಯ, ಶಿವೈಕ್ಯ. ನ್ಯಾಯಮೂರ್ತಿ ಬಿ.ಎಸ್. ಪಾಟೀಲ್‌ರವರು ಹೇಳಿರುವಂತೆ-ವೀರಶೈವ ಧರ್ಮದಲ್ಲಿ ಅಂಗನು ಲಿಂಗದಲ್ಲಿ ಸಮರಸವಾಗಲು ಷಟ್‌ಸ್ಥಲದಾಚರಣೆಯನ್ನು ಕಲ್ಪಿಸಲಾಗಿದೆ. ಇದುವೇ ಭವಬಂಧನವನ್ನು ಕಳೆದು ನಿತ್ಯಮುಕ್ತಿ, ನಿತ್ಯಾನಂದ ಕೊಡುವ ಲಿಂಗಾಂಗಸಾಮರಸ್ಯವಾಗಿದೆ. ಇಲ್ಲಿ ಸುಲಲಿತ ವೇದಾಂತವು ಸುಗಮವಾದ ಸಿದ್ಧಾಂತದೊಡನೆ ಕೂಡಿಕೊಂಡಿದೆ. ಭಕ್ತಿ ಜ್ಞಾನಗಳು ಈ ಮಾರ್ಗದ ತಿರುಳು. ಆದುದರಿಂದ ಇದರಲ್ಲಿ ದೈವತ್ವಭಕ್ತಿಯೂ ಉಂಟು, ಅದ್ವೈತದ ಜ್ಞಾನವೂ ಉಂಟು. ಭಕ್ತನು 'ಲಿಂಗವ ಮುಟ್ಟಿದ ಕೈ ಮೀಸಲು, ಲಿಂಗವ ಧರಿಸಿದ ದೇಹ ದೇಗುಲ' ಎಂಬ ತತ್ವದಾಚರಣೆಯಂತೆ ಪರಿಶುದ್ಧನಾಗಿರುತ್ತಾನೆ.

ನೀರಿನಲ್ಲಿ ನೀರು, ಹಾಲಿನಲ್ಲಿ ಹಾಲು, ಬಯಲಲ್ಲಿ ಬಯಲು ಬೆರಸಿದಂತೆ ಒಂದಾಗಿ ಮಹಾಲಿಂಗವಾದಾತನೇ ಐಕ್ಯನೆನಿಸುತ್ತಾನೆ. ಮಹಾದೇವಿಯಕ್ಕನ ಸಮರಸ ಭಕ್ತಿಯ ಪರಿಣಾಮವಾದ ಲಿಂಗಾಂಗ ಸಾಮರಸ್ಯದ (ಶಿವ ಜೀವೈಕ್ಯ) ಸ್ವಾನುಭಾವದಲ್ಲಿ ದ್ವೈತಭಾವವಿಲ್ಲ. ಉಪ್ಪಿನ ಗೊಂಬೆ ಸಮುದ್ರವನ್ನು ಅಳೆಯಲು ಹೋದಂತೆ ಎಂದು ಹೇಳುತ್ತಾರೆ.

ಶರಣರು ಪಾರಮಾರ್ಥಿಕ ಮೋಕ್ಷವನ್ನು ಪ್ರತಿಪಾದಿಸಿದ್ದರೂ ವ್ಯಾವಹಾರಿಕ ವಾಗಿಯೂ, ಮುಕ್ತಿಯೆಂಬುದು ಅಥವಾ ಮೋಕ್ಷವೆಂಬುದು ಸಜ್ಜನರ ಸಂಗದಲ್ಲಿ, ಸದಾಚಾರದಲ್ಲಿ ಸಿಗುತ್ತದೆ ಎಂದಿದ್ದಾರೆ. ಕಾಣದ ಲೋಕದಲ್ಲಿ ಸಿಗುವ ಮೋಕ್ಷ ಇವರಿಗೆ ಬೇಕಿಲ್ಲ. ಬದುಕುವ ಲೋಕದಲ್ಲಿ ಆ ಮೋಕ್ಷ ಬೇಕಿದೆ. ಬಸವಣ್ಣನವರು ಈ ಮೋಕ್ಷದ ಸ್ವರೂಪ ಹೇಗಿದೆ ಎಂಬುದನ್ನು ಕೆಳಗಿನ ವಚನದಲ್ಲಿ ಹೇಳಿದ್ದಾರೆ:

ಬ್ರಹ್ಮಪದವಿಯನೊಲ್ಲೆ ವಿಷ್ಣುಪದವಿಯನೊಲ್ಲೆ
ರುದ್ರಪದವಿಯನೊಲ್ಲೆ, ನಾನು ಮತ್ತಾವ ಪದವಿಯನೊಲ್ಲೆನಯ್ಯಾ
ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ
ಮಹಾಪದವಿಯ ಕರುಣಿಸಯ್ಯ

ಹೀಗೆ ಶರಣರು ಪಾರಮಾರ್ಥಿಕ ಮೋಕ್ಷ ಮತ್ತು ವ್ಯಾವಹಾರಿಕ ಮೋಕ್ಷ ಎರಡನ್ನೂ ಹೇಳಿದ್ದಾರೆ.

ಗುರುನಾನಕರು ಮತ್ತು ಅವರ ಅನುಯಾಯಿಗಳು ಸಹ ಪರಮಾತ್ಮನಲ್ಲಿ ಏಕಾಕಾರಗೊಳ್ಳುವುದನ್ನು ಮೋಕ್ಷವೆಂದು ಭಾವಿಸಿದ್ದಾರೆ. ಲೌಕಿಕ ಜಂಜಡಗಳಲ್ಲಿ ಲೀನವಾಗಿರುವ ಆತ್ಮ ಪರಮಾತ್ಮನಲ್ಲಿ ಲೀನವಾಗುವುದು ಅವನ ಗುಣಗಾನದಿಂದ

ಮತ್ತು ಸತ್ಕರ್ಮದಿಂದ. ಗುರುನಾನಕರ ಪ್ರಕಾರ ಪ್ರತಿಯೊಬ್ಬ ಸಿಕ್ಖ್ ಸಹ ಸತಿ ಎಂದರೆ ಆತ್ಮ ಸತಿ, ಪರಮಾತ್ಮ ಪತಿ, ಆ ಪತಿಯೊಡನೆ ಲೀನಗೊಳ್ಳುವುದೇ ಐಕ್ಯ. ಗುರು ಅರ್ಜುನದೇವರು ಹೇಳುವಂತೆ:

> ಜಿಸು ಸಿಮಿರತ್ ಸಭಿ ಕಿಲಿವಿಖ್ ನಾಸಹಿ ಪಿತರೀ ಹೋಯಿ ಉಧಾರೊ |
> ಸೊ ಹರಿ ಹರಿ ತುಮ್ ಸದ್ ಹೀ ಜಾಪಹು ಜಾ ಕಾ ಅಂತು ನ ಪಾರೊ ||೧||
> ಪೂತಾ ಮಾತಾ ಕೀ ಆಸೀಸ್ |
> ನಿಮಖ್ ನ ಬಿಸರವು ತುಮ್ಹ್ ಕವು ಹರಿ ಹರಿ ಸದಾ ಭಜಹು ಜಗದೀಸ್ ||ರಹಾವು||

ಹೇ ಪ್ರಭು, ನಿನ್ನ ನಾಮಸ್ಮರಣೆ ಮಾಡುವುದರಿಂದ ಎಲ್ಲ ಪಾಪಗಳು ನಾಶವಾಗುತ್ತವೆ. ನನ್ನ ಪೂರ್ವಜರಿಗೆ ಮೋಕ್ಷ ಸಿಗುತ್ತದೆ. ನಿನ್ನ ನಾಮಸ್ಮರಣೆಯನ್ನು ಮಾಡುವುದರಿಂದ ಪ್ರಪಂಚದ ಕಷ್ಟ ಕೋಟಲೆಗಳಿಂದ ಮನುಷ್ಯ ಪಾರಾಗುತ್ತಾನೆ. ನಿನ್ನನ್ನು ಒಂದು ಕ್ಷಣಕ್ಕೂ ಮರೆಯದಿರುವಂತೆ ಹರಸು. ಇದು ತಾಯಿ ಮಗನಿಗೆ ಹರಸಿದಂತೆ. ತಮ್ಮ ಇನ್ನು ಅನೇಕ ವಚನಗಳಲ್ಲಿ ಅರ್ಜುನದೇವರು ಆ ಪರಮಾತ್ಮನೊಡನೆ ಐಕ್ಯವಾಗುವ ಸ್ಥಿತಿಯನ್ನೇ ಮೋಕ್ಷವೆಂದು ಕರೆದಿದ್ದಾರೆ.

ಶರಣರು ಮತ್ತು ಸಿಕ್ಖರು ಆತ್ಮ, ಪರಮಾತ್ಮ, ಜಗತ್ತು, ಮಾಯೆ ಮತ್ತು ಮೋಕ್ಷವನ್ನು ಕುರಿತು ನಡೆಸಿರುವ ಚಿಂತನೆ ಸಮಾಂತರವಾಗಿದೆ.

೫. **ಭಕ್ತಿ**- ಬಸವಣ್ಣನವರು ಮತ್ತು ಗುರುನಾನಕರು ಶ್ರೇಷ್ಠ ಭಕ್ತರು. ಬಸವಣ್ಣನವರು ಮತ್ತು ನಾನಕರು ಭಕ್ತಿಯ ಪರಾಕಾಷ್ಠೆಯನ್ನು ಮೆರೆದ ಮಾನ್ಯರು ಮತ್ತು ಪೂಜನೀಯರು. ಇವರ ಸಾಧಕ ವ್ಯಕ್ತಿತ್ವದ ಎರಡು ಕಣ್ಣುಗಳೆಂದರೆ: ೧. ಆಧ್ಯಾತ್ಮಿಕ ಚಿಂತನೆ. ೨. ಸಾಮಾಜಿಕ ಪರಿವರ್ತನೆ. ಇವರಿಬ್ಬರ ಭಕ್ತಿಯನ್ನು ಒಂದೇ ಮಾತಿನಲ್ಲಿ ಪರಿಭಾಷಿಸುವುದಾದರೆ ಪರಮಾತ್ಮನ ಬಗೆಗಿರುವ ಇವರ ಅನನ್ಯ ಅನುರಾಗವೇ ಭಕ್ತಿಯಾಗಿ ಅರಳಿದೆ. ಬಸವಣ್ಣ ಮತ್ತು ಗುರುನಾನಕ್ ತಾವು ನಂಬಿದ ನಿರ್ಗುಣ ದೈವದ ಗರಿಮೆಯನ್ನು ಕಣ್‌ತುಂಬಿಕೊಂಡು ಅದನ್ನು ಸಾಕ್ಷಾತ್ಕರಿಸಿಕೊಳ್ಳಲು ತಮ್ಮ ಆಚಾರ ನಡೆ-ನುಡಿ ಮತ್ತು ಜೀವನಮಾರ್ಗವನ್ನು ಶುದ್ಧವೂ ಪವಿತ್ರವೂ ಆಗಿರುವಂತೆ ನೋಡಿಕೊಳ್ಳಲು ಹೇಳುತ್ತಾರೆ. ಬಸವಣ್ಣ ಮತ್ತು ನಾನಕ್ ಭಕ್ತಿ ಎಂದರೆ ಧೂಪ ದೀಪ ಮಂಗಳಾರತಿ ಬೆಳಗುವ ವಿಧಿ ಎಂದು ಭಾವಿಸದೆ ಬದುಕನ್ನು ನಮ್ರಗೊಳಿಸುವ ಶಕ್ತಿ ಎಂದು ನಂಬಿರುವುದರಿಂದ ಭಕ್ತಿ ಇವರ ಜೀವಾಳವಾಗಿದೆ. ಇವರ ಪ್ರಕಾರ ಭಕ್ತನಲ್ಲದವ ಸಾಮಾಜಿಕ ಬದುಕಿನಲ್ಲಿ ಬದುಕಲು ಅನರ್ಹನಾಗುತ್ತಾನೆ.

ಬಸವಣ್ಣನವರು ಭಕ್ತಿಯನ್ನು ಜೀವನ ಧರ್ಮವನ್ನಾಗಿ ಮಾಡಿಕೊಂಡರು. ತಮಗೆ 'ಸದ್‌ಭಕ್ತಿಯ ಉದಕವನೆರೆದು ಸಲಹು' ಎಂದು ಪರಮಾತ್ಮನನ್ನು ಬೇಡಿದರೆ ಭಕ್ತಿ ಎಂಬುದನ್ನು ಸಾಧಿಸುವುದು. ಅದನ್ನು ಬದುಕಿನಲ್ಲಿ ಅನ್ವಯಿಸುವುದು ತುಂಬ ಕಷ್ಟ.



ಅದಕ್ಕೆ ಸಾಧನೆ ಬೇಕು, ತಪಸ್ಸು ಬೇಕು ಎಂದು ನಂಬಿದ್ದಾರೆ. ಇವರ ದೃಷ್ಟಿಯಲ್ಲಿ ಭಕ್ತಿಯನ್ನು ಸಾಧಿಸುವುದು ಕಡುಕಷ್ಟ. ಏಕೆಂದರೆ ಅದು ಗರಗಸದಂತೆ. ಭಕ್ತಿಯೆಂಬುದು ಮಾಡಬಾರದು:

> ಗರಗಸದಂತೆ ಹೋಗುತ್ತ ಕೊಯ್ಯುದು, ಬರುತ್ತ ಕೊಯ್ಯುದು!

ಬಸವಣ್ಣನವರ ಈ ವಚನದಲ್ಲಿ ಭಕ್ತನಾಗುವುದು ಕತ್ತಿಯ ಅಲಗಿನ ಮೇಲೆ ನಡೆದಷ್ಟೇ ಕಷ್ಟವೆಂಬ ಎಚ್ಚರಿಕೆಯಿದೆ. ಈ ಕಷ್ಟವನ್ನು ಸಹಿಸಬಲ್ಲಾತನೇ ನಿಜವಾದ ಭಕ್ತನಾಗುತ್ತಾನೆ.

ಬಸವಣ್ಣನವರ ದೃಷ್ಟಿಯಲ್ಲಿ ಭಕ್ತ ಆದರ್ಶಜೀವಿ. ಭಕ್ತನಾಗಬೇಕಾದರೆ ಏನೆಲ್ಲ ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂಬುದನ್ನು ಹೀಗೆ ಹೇಳುತ್ತಾರೆ:

> ಭಕ್ತನು ಶಾಂತನಾಗಿರಬೇಕು;
> ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು;
> ಭೂತಹಿತ ವಚನವ ನುಡಿಯಬೇಕು;
> ಲಿಂಗಜಂಗಮದಲ್ಲಿ ಕುಂದುನಿಂದೆಗಳಿಲ್ಲದಿರಬೇಕು;
> ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು;
> ತನು-ಮನ-ಧನ ಗುರುಲಿಂಗ ಜಂಗಮಕ್ಕೆ ಸಮರ್ಪಿಸಬೇಕು;
> ಅಪಾತ್ರದಾನಗೆಯ್ಯದಿರಬೇಕು;
> ಸಕಲ ಇಂದ್ರಿಯಂಗಳೂ ತನ್ನ ವಶಗತವಾಗಿರಬೇಕು

ಇಷ್ಟಲ್ಲದೆ ಭಕ್ತರಾದವರ ನಡೆ-ನುಡಿಯಲ್ಲಿ ಒಂದು ಜವೆಯಷ್ಟು ವ್ಯತ್ಯಾಸವಾಗಬಾರದು. ಹೀಗೆ ವ್ಯತ್ಯಾಸವಾದರೆ ಸದ್ಭಕ್ತನಾಗುವುದಿಲ್ಲ ಎಂದು ಬಸವಣ್ಣನವರು ಹೇಳುತ್ತಾರೆ:

> ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ,
> ನಡೆಯೊಳಗೆ ನುಡಿಯ ಪೂರೈಸುವೆ-
> ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ;
> ಒಂದು ಜವೆ ಕೊರತೆಯಾದಡೆ
> ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ.

ಇದು ಬಸವಣ್ಣನವರ ಭಕ್ತಿಯ ಸ್ವರೂಪ, ಭಕ್ತನ ಆದರ್ಶ.

ಗುರುನಾನಕರು ಸಹ ಭಕ್ತಿ ಸಾಮ್ರಾಟರು. ಬಾಲ್ಯದಿಂದಲೇ ಅವರು ಪರಮಾತ್ಮನ ಜಪ ಮಾಡುತ್ತ ಅವನಲ್ಲಿ ಏಕಾಕಾರಗೊಳ್ಳುವ ಪ್ರಯತ್ನದಲ್ಲಿದ್ದರು. ಅವರ ತಂದೆ ತಾಯಿಗಳು, ಅವರ ಪತ್ನಿ, ಮಕ್ಕಳು ಲೌಕಿಕದೆಡೆಗೆ ಸೆಳೆಯಲು ಎಷ್ಟೇ ಪ್ರಯತ್ನಪಟ್ಟರೂ, ಇವರ ಮನಸ್ಸು ಪರಮಾತ್ಮನ ಧ್ಯಾನದಿಂದ ಅವನ ಭಕ್ತಿಯಿಂದ ವಿಮುಖವಾಗಲಿಲ್ಲ.

ಪರಮಾತ್ಮನ ಧ್ಯಾನದಲ್ಲಿ ಎಷ್ಟು ಲೀನರಾಗಿದ್ದರೆಂದರೆ ಅವರು ನೀರಿನಲ್ಲಿ ಮುಳುಗಿ ನಾಲ್ಕನೆಯ ದಿನ ಎದ್ದು ಬಂದಾಗ ಅವರು ಹೇಳಿದ ನುಡಿಮುತ್ತೆಂದರೆ 'ಯಾರೂ ಹಿಂದೂ ಅಲ್ಲ, ಯಾರೂ ಮುಸ್ಲಿಮರಲ್ಲ, ಇರುವನೊಬ್ಬನೆಂದರೆ ಮನುಷ್ಯ'. ಈ ಮನುಷ್ಯನ ಸೇವೆ ಮಾಡುವುದೇ ಮಾನವೀಯತೆ. ಈ ಮಾನವೀಯತೆಯನ್ನು ಬದುಕಿನುದ್ದಕ್ಕೂ ಪೋಷಿಸಿಕೊಂಡು ಬಂದ ದಿವ್ಯ ಮಾನವರು ಗುರುನಾನಕ್. ಇವರು ಎರಡು ವಿಭಿನ್ನ ಹಾಗೂ ವಿರೋಧಿ ಧರ್ಮೀಯರನ್ನು ಒಂದುಗೂಡಿಸಲು, ಅವರಿಗೆ ಧರ್ಮದ ನಿಜಸ್ವರೂಪವನ್ನು ತಿಳಿಸಲು ಪ್ರಯತ್ನಿಸಿದರು. ನಾನಕರು ಮುಸಲ್ಮಾನರಲ್ಲಿರುವ ನಮಾಜು ಮಾಡುವ ಪದ್ಧತಿ ಹೇಗಿರಬೇಕು, ಭಗವಂತನಿಗೆ ಹೇಗೆ ತಮ್ಮ ಭಕ್ತಿಯನ್ನು ತೋರಬೇಕು ಎಂಬುದನ್ನು ಹೀಗೆ ಉಪದೇಶಿಸಿದರು: 'ಮುಸಲ್ಮಾನ ಬರಿ ನಮಾಜು ಮಾಡುವುದಲ್ಲ, ಆಚರಣೆಯಲ್ಲೂ ಉನ್ನತ ಗುಣಗಳನ್ನು ಅಳವಡಿಸಿಕೊಳ್ಳಬೇಕು' ಎಂದರು. ಅವರ ಮಾತುಗಳಲ್ಲಿ 'ಎಲ್ಲ ಜೀವಿಗಳ ಮೇಲೆ ದಯೆ ತೋರುವುದನ್ನು ಮಸೀದಿ ಮಾಡಿಕೊಳ್ಳಿ, ಶ್ರದ್ಧೆಯನ್ನು ನಮಾಜು ಮಾಡುವಾಗ ಹಾಸಿಕೊಳ್ಳುವ ಚಾದರವನ್ನಾಗಿ ಮಾಡಿಕೊಳ್ಳಿ, ನಿಜಕಾಯಕದಿಂದ ಬಂದ ದುಡಿಮೆಯನ್ನು ಕುರಾನು ಮಾಡಿಕೊಳ್ಳಿ, ಕೆಟ್ಟ ಕರ್ಮಗಳ ಬಗೆಗಿನ ನಾಚಿಕೆಯನ್ನು 'ಸುನ್ನತ್' ಎಂದು ಭಾವಿಸಿ, ಉತ್ತಮ ಶೀಲಗಳನ್ನು 'ರೋಜ' ಎಂದು ಭಾವಿಸಿ. ಇವನ್ನು ಆಚರಿಸುವುದರ ಮೂಲಕ ನಿಜವಾದ ಮುಸ್ಲಿಮನಾಗಿ' ಎಂದರು. ಗುರುನಾನಕರು ತಮ್ಮ ಇನ್ನೊಂದು ವಚನದಲ್ಲಿ ಮುಸಲ್ಮಾನರಿಗೆ ಹೇಳುವುದೆಂದರೆ 'ಐದು ನಮಾಜುಗಳನ್ನು ಮಾಡಬೇಕು. ಐದು ಹೊತ್ತಿನಲ್ಲಿ ಮಾಡಬೇಕು ಮತ್ತು ಈ ಐದು ನಮಾಜುಗಳಿಗೆ ಐದು ಹೆಸರುಗಳಿವೆ. ಸತ್ಯ ಹೇಳುವುದು, ತನ್ನ ಕಾಯಕದಿಂದ ಬಂದದ್ದನ್ನು ಸ್ವೀಕರಿಸುವುದು, ಸರ್ವಭೂತಗಳ ಹಿತ ಕಾಯುವಂತೆ ಪರಮಾತ್ಮನನ್ನು ಪ್ರಾರ್ಥಿಸುವುದು, ತನ್ನ ನಿಯತ್ತನ್ನು ಮತ್ತು ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳುವುದು ಮತ್ತು ಪರಮಾತ್ಮನ ಕೀರ್ತಿಯನ್ನು ಕೊಂಡಾಡುವುದು.' ಈ ಐದು ನಮಾಜುಗಳು ಮುಸಲ್ಮಾನರ ದಾರಿದೀವಿಗೆಗಳು. ಇವುಗಳ ಹೊರತಾಗಿ ಉಳಿದದ್ದೆಲ್ಲ ಸುಳ್ಳು.

ನಾನಕರು ಮೇಲಿನ ಅಂಶಗಳನ್ನು ಹಿಂದೂಗಳಿಗೂ ಹೇಳಿದರು. ದ್ವೇಷ ಮತ್ತು ತಿರಸ್ಕಾರಗಳನ್ನು ಮತ್ತು ಇತರರನ್ನು ತಿರಸ್ಕಾರ ಭಾವನೆಯಿಂದ ನೋಡುವ ದೃಷ್ಟಿಯನ್ನು ತೊರೆದರೆ ಆತ್ಮೋನ್ನತಿ ಸಾಧ್ಯ ಎಂದರು.

ಬಸವಣ್ಣನವರು ಮತ್ತು ಗುರುನಾನಕರು ದಾಸ್ಯಭಕ್ತಿಯ ಆರಾಧಕರು. ಪರಮಾತ್ಮನನ್ನು ದೇವ, ತಮ್ಮನ್ನು ದಾಸರೆಂದು ಇಬ್ಬರೂ ಹೇಳಿಕೊಂಡಿದ್ದಾರೆ. ಬಸವಣ್ಣನವರಂತೂ ತಮ್ಮನ್ನು ಶಿವಭಕ್ತರಿಗಿಂತ ಕಿರಿಯ ಎಂದು ಹೇಳಿಕೊಳ್ಳುತ್ತ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂದಿದ್ದಾರೆ.



ಹೀಗೆ ಬಸವಣ್ಣನವರ ಮತ್ತು ನಾನಕರ ಭಕ್ತಿಮಾರ್ಗ ವ್ಯಕ್ತಿಯ ಸಚ್ಚಾರಿತ್ರ್ಯವನ್ನು ರೂಪಿಸುವ ಉನ್ನತ ಮಾನವೀಯ ಮೌಲ್ಯಗಳನ್ನು ಪೋಷಿಸುವ ಮಾರ್ಗವಾಗಿದೆ.

**೬. ಸಮಾಜ ಸುಧಾರಕರು:** ಬಸವಣ್ಣನವರು ಮತ್ತು ಗುರುನಾನಕರು ಈ ದೇಶ ಕಂಡ ಮಹಾನ್ ಭಕ್ತರಾಗಿರುವಂತೆ ಸಮಾಜ ಸುಧಾರಕರೂ ಆಗಿದ್ದಾರೆ. ಆಧ್ಯಾತ್ಮ ಸಾಧಕರಾಗಿ ಇವರು ಸಾಧನೆಯ ತುತ್ತತುದಿಯನ್ನು ಏರಿದಂತೆ ಸಮಾಜ ಸುಧಾರಕರಾಗಿ ತಾವು ಬಾಳುತ್ತಿದ್ದ ನೆಲದ ಸಾಮಾಜಿಕ ಬದುಕನ್ನು ಹಸನುಗೊಳಿಸಲು ಶ್ರಮಿಸಿದರು. ಕರ್ನಾಟಕದ ಶರಣರು ಬದುಕಿದ್ದ ಕಾಲದಲ್ಲಿ ನಾನಾ ಜಾತಿಗಳಿದ್ದವು, ಜಾತಿ ಜಾತಿಗಳ ಮಧ್ಯೆ ಅಂತರವಿದ್ದವು. ಉಚ್ಚಕುಲದವರು ತಮ್ಮನ್ನು ತಾವು ದೊಡ್ಡವರೆಂದು ಭಾವಿಸಿದ್ದರು. ನಿಮ್ನ ಕುಲದವರು ತಮ್ಮ ಸ್ಥಿತಿಗೆ ಮಮ್ಮಲ ಮರುಗುತ್ತಿದ್ದರು. ಬಸವಣ್ಣನವರು ಜಾತಿಯ ಈ ಅಡ್ಡಗೋಡೆಗಳನ್ನು ಒಡೆದು ಎಲ್ಲರೂ ಒಂದೇ ಎಂಬ ಸಂದೇಶವನ್ನು ನೀಡಿದರು. ಬಸವಣ್ಣನವರ ಸಾಮಾಜಿಕ ಕ್ರಾಂತಿಯ ಉತ್ತುಂಗ ಸ್ಥಿತಿಯನ್ನು ಅವರು ಬ್ರಾಹ್ಮಣ ಮತ್ತು ದಲಿತ ಕುಟುಂಬದ ನಡುವೆ ಮಾಡಿಸಿದ ವೈವಾಹಿಕ ಸಂಬಂಧದಲ್ಲಿ ನೋಡಬಹುದು.

ಉತ್ತರ ಭಾರತದಲ್ಲಿ ಇದ್ದ ಧರ್ಮೀಯ ಸಮಸ್ಯೆ ಬೇರೆಯೇ ಆಗಿದೆ. ಇಸ್ಲಾಮ್ ಮತ್ತು ಹಿಂದೂ ಸಂಸ್ಕೃತಿ ಮುಖಾಮುಖಿಯಾಗಿ ಒಂದರೊಡನೊಂದು ಸ್ಪರ್ಧೆಗಿಳಿದಿದ್ದವು. ಮಧ್ಯಕಾಲೀನ ಭಾರತದಲ್ಲಿ ಮುಸ್ಲಿಮ್ ಸಂಸ್ಕೃತಿಯ ಪ್ರಭಾವ ಎಷ್ಟರಮಟ್ಟಿಗೆ ಇತ್ತೆಂದರೆ ಅದರಿಂದ ತಪ್ಪಿಸಿಕೊಳ್ಳುವುದೇ ಒಂದು ಸವಾಲಾಗಿತ್ತು. ಉತ್ತರ ಭಾರತದ ಸಂತರು ಮತ್ತು ಪಶ್ಚಿಮೋತ್ತರ ಭಾರತದ ಸಿಕ್ಖರು ಈ ಎರಡು ಧರ್ಮೀಯರ ನಡುವೆ ಸಾಮರಸ್ಯ ಮೂಡಿಸುವ ಪ್ರಯತ್ನ ಮಾಡಿದರು. ನಾನಕರು ಜ್ಞಾನೋದಯದ ಕ್ಷಣದಲ್ಲಿ ಹೇಳಿದ "ನಾನು ಹಿಂದೂವೂ ಅಲ್ಲ, ಮುಸ್ಲಿಮನೂ ಅಲ್ಲ, ನಾನು ಮನುಷ್ಯ" ಎಂಬ ಮಾತು ಮಹತ್ವದ್ದಾಗಿದೆ. ನಾನಕರು ಈ ಎರಡು ಧರ್ಮೀಯರ ಮಧ್ಯೆ ಸಾಮರಸ್ಯವನ್ನು ಮೂಡಿಸಲು ಬದುಕಿನುದ್ದಕ್ಕೂ ಸಂಘರ್ಷ ಮಾಡಿದರು. ಬಸವಣ್ಣನವರು ಹಿಂದೂ ಧರ್ಮದಲ್ಲಿನ ಜಾತಿಗಳ ನಡುವೆ ಸಾಮರಸ್ಯವನ್ನು ಮೂಡಿಸಲು ಪ್ರಯತ್ನಿಸಿದರೆ, ಗುರುನಾನಕರು ಎರಡೂ ಧರ್ಮಗಳನ್ನು ಹತ್ತಿರ ತರಲು ಪ್ರಯತ್ನಿಸಿದರು.

ಬಸವಣ್ಣನವರು ಮೂರ್ತಿಪೂಜೆಯನ್ನು ವಿರೋಧಿಸಿ ದೇಹವನ್ನೇ ದೇವಾಲಯವೆಂದು ಹೇಳಿದರು. ನಾನಕರೂ ಮನುಷ್ಯನ ದೇಹವನ್ನು ಭಗವಂತನ ಆವಾಸಸ್ಥಾನವೆಂದರು. ತಮ್ಮ ತಮ್ಮ ಸಮಾಜದಲ್ಲಿನ ಮೂಢನಂಬಿಕೆಗಳನ್ನು, ಅಂಧವಿಶ್ವಾಸಗಳನ್ನು ಮತ್ತು ಅರ್ಥವಿಲ್ಲದ ಆಚರಣೆಗಳನ್ನು ಬಸವಣ್ಣ ಮತ್ತು ನಾನಕ್

ಸಮಾನವಾಗಿ ಖಂಡಿಸಿದರು.

**೭. ಸ್ತ್ರೀ ಸಮಾಜವನ್ನು ಕುರಿತು :** ಭಾರತೀಯ ಸಮಾಜದಲ್ಲಿ ಹೆಣ್ಣಿಗೆ ಬಸವಯುಗದಲ್ಲಿ ಸಂದಷ್ಟು ಮಹತ್ವ ಇನ್ನಾವ ಯುಗದಲ್ಲೂ ಸಂದಿಲ್ಲವೆಂದು ಹೇಳಬೇಕು. ಭಾರತೀಯ ವೈದಿಕ ಸಮಾಜ ಸ್ತ್ರೀಯರಿಗೆ ಯಾವ ಅಧಿಕಾರವನ್ನೂ ಕೊಡದೆ ಕತ್ತಲಲ್ಲಿಟ್ಟಿತ್ತು. 'ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ' ಎಂದು ಹೇಳಿ ಅವಳ ದನಿಯನ್ನು ಮತ್ತು ನಡೆಯನ್ನು ಅದುಮಿಟ್ಟಿತ್ತು. ಹೆಣ್ಣು ಭೋಗದ ಕೇಂದ್ರವಾಗಿದ್ದಳು. ಸತಿಪದ್ಧತಿ, ದಾಸ್ಯದ ಬದುಕು, ವೈಧವ್ಯದ ದೈನ್ಯತೆ ಮುಂತಾದ ಸಾಮಾಜಿಕ ಅಭಿಶಾಪಗಳಿಂದ ಹೆಣ್ಣು ತತ್ತರಿಸಿಹೋಗಿದ್ದಳು. ಇಂತಹ ದಯನೀಯ ಸ್ಥಿತಿಯಿಂದ ಹೆಣ್ಣನ್ನು ಪಾರುಮಾಡಿದ ಶ್ರೇಯ ಬಸವಣ್ಣನವರಿಗೆ ಸಲ್ಲುತ್ತದೆ. ವೀರಶೈವ ಧರ್ಮದಲ್ಲಿ, ಇಷ್ಟಲಿಂಗ ಸಂಸ್ಕಾರ ಪಡೆದ ಸ್ತ್ರೀಯರು ವಿದ್ಯಾವಂತರಾಗಿ, ಕ್ರಿಯಾಜ್ಞಾನಿಗಳಾಗಿ, ವಚನಕಾರ್ತಿಯರಾಗಿ, ಸುಸಂಸ್ಕೃತರಾಗಿ ಸತ್ಯ ಶುದ್ಧ ಕಾಯಕ ದಾಸೋಹಿಗಳಾಗಿ, ಅನುಭಾವ ಷಟ್‌ಸ್ಥಲ ಸಾಧಕರಾಗಿ, ಲಿಂಗಾನುಭವಿಗಳಾಗಿ ಶರಣಸತಿ-ಲಿಂಗಪತಿ ಭಾವ ಸಮರಸ ಹೊಂದಿ ಉನ್ನತ ಮಟ್ಟಕ್ಕೇರಿ ಪುರುಷರೊಂದಿಗೆ ಸಮಾನಸ್ಕಂದರಾಗಿ ನಿಂತರು.

ಬಸವಣ್ಣನವರು ತಮ್ಮ ಕಾಲದ ಸಾಮಾಜಿಕ ಜೀವನದಲ್ಲಿ ಮತ್ತು ಆಧ್ಯಾತ್ಮಿಕ ಬದುಕಿನಲ್ಲಿ ಹೆಣ್ಣಿಗೆ ಪುರುಷನಿಗೆ ಸಮಾನವಾದ ಹಕ್ಕುಗಳನ್ನು ಮತ್ತು ಅಧಿಕಾರಗಳನ್ನು ನೀಡಿದರು. ಇದರ ಪರಿಣಾಮವಾಗಿಯೇ ಕನ್ನಡದಲ್ಲಿ ಮೂವತ್ತಕ್ಕೂ ಹೆಚ್ಚು ಮಹಿಳೆಯರು-ಶರಣೆಯರು-ವಚನಾಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಕಾಯಕನಿಷ್ಠರಾದರು, ವಚನಕಾರ್ತಿಯರಾದರು. ಇವರ ವಚನಗಳು ಎಂತಹ ಮೌಲ್ಯಗಳನ್ನು ಸಾರುತ್ತವೆಯೆಂದರೆ ಅವು ಸಾಮಾಜಿಕ ಬದುಕಿಗೆ ಅನಿವಾರ್ಯವಾಗಿವೆ. ಉದಾಹರಣೆಗೆ ಆಯ್ದಕ್ಕಿ ಲಕ್ಕಮ್ಮಳ ಈ ವಚನ ಶಿವಭಕ್ತರಿಗೆ ಸಂಗ್ರಹಬುದ್ಧಿ ಇರಬಾರದು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ:

> ಆಸೆಯೆಂಬುದು ಅರಸಿಂಗಲ್ಲದೆ, ಶಿವಭಕ್ತರಿಗುಂಟೆ ಅಯ್ಯಾ?
> ರೋಷವೆಂಬುದು ಯಮದೂತರಿಗಲ್ಲದೆ, ಅಜಾತರಿಗುಂಟೆ ಅಯ್ಯಾ?
> ಈಸಕ್ಕಿಯಾಸೆ ನಿಮಗೇಕೆ ? ಈಶ್ವರನೊಪ್ಪ
> ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರ ಮಾರಯ್ಯ

ಹೀಗೆ ಶರಣೆಯರು ಜಾಗೃತ ಸಾಮಾಜಿಕ ಚಿಂತಕರಾಗಿ ಸಮಾಜಕ್ಕೆ ನೀಡಿರುವ ಕೊಡುಗೆ ಅತ್ಯಮೂಲ್ಯವಾದುದು. ಅಕ್ಕಮಹಾದೇವಿಯಂತಹ ಅನುಭಾವಿ ಕವಯತ್ರಿ ಈ ಶರಣೆಯರ ಸಮೂಹದಲ್ಲಿ ಗೌರಿಶಂಕರರಂತಿದ್ದಾರೆ.

ಸಿಕ್ ಧರ್ಮದಲ್ಲು ಸಹ ಹೆಣ್ಣಿನ ಬಗೆಗೆ ವಿಶೇಷ ಗೌರವಾದರವಿದೆ. ಸಿಕ್ ಧರ್ಮ ಲಿಂಗ ಅಸಮಾನತೆಯನ್ನು ಒಪ್ಪುವುದಿಲ್ಲ. ಸಿಕ್ಖರು ಸತಿ ಪದ್ಧತಿ, ಪರದೆ ಪದ್ಧತಿ ಮತ್ತು ಹೆಣ್ಣು ಭ್ರೂಣ ನಾಶದ ವಿರೋಧಿಯಾಗಿದ್ದಾರೆ. ನಾನಕರು ಹೆಣ್ಣಿನ ಬಗೆಗೆ ಹೇಳಿರುವ ಅಭಿಮಾನದ ಮಾತುಗಳೆಂದರೆ "ಹೆಣ್ಣು ನಮಗೆ ಜನ್ಮ ನೀಡುತ್ತಾಳೆ. ಹೆಣ್ಣು ಗರ್ಭ ಧರಿಸುತ್ತಾಳೆ. ಹೆಣ್ಣಿನೊಡನೆ ನಾವು ವಿವಾಹವಾಗುತ್ತೇವೆ. ಹೆಣ್ಣಿನಿಂದಲೇ ನಮ್ಮ ಕುಟುಂಬ ಮತ್ತು ಸಾಮಾಜಿಕ ವಲಯ ಬೆಳೆಯುತ್ತದೆ. ಅಂದ ಮೇಲೆ ಹೆಣ್ಣನ್ನು ನಾವು ಏಕೆ ದೂಷಿಸಬೇಕು?"



ಸಿಕ್ಖರ ಮೂರನೆಯ ಗುರು ಅಮರದಾಸರು 146 ಜನರಿಗೆ ದೀಕ್ಷೆಯನ್ನು ಕೊಟ್ಟಿದ್ದರು. ಅವರಲ್ಲಿ 52 ಜನ ಹೆಣ್ಣು ಮಕ್ಕಳಿದ್ದರು ಎಂಬುದು ಗಮನಾರ್ಹವಾದ ಸಂಗತಿ. ಹತ್ತನೇ ಗುರು ಗೋವಿಂದ ಸಿಂಹರ ಕಾಲದಲ್ಲಿ ಮಾಯೀ ಭಾಗೊ ಎಂಬ ಮಹಿಳೆ ಗುರುಗಳ ಜೊತೆಯಲ್ಲಿ ಇದ್ದುಕೊಂಡು ತನ್ನ ಸೇವೆಯನ್ನು ಸಲ್ಲಿಸಿದ್ದಳು. ಹೀಗೆ ಶರಣರು ಮತ್ತು ಸಿಕ್ಖರು ಹೆಣ್ಣಿನ ಬಗೆಗೆ ಸಮಾನವಾದ ಆದರಭಾವವನ್ನು ತೋರಿದರು.

**೮. ಧಾರ್ಮಿಕ ಕಟ್ಟಳೆಗಳು:** ಶರಣ ಧರ್ಮದಲ್ಲಿ ಅಷ್ಟಾವರಣಗಳಿಗೆ ವಿಶೇಷ ಸ್ಥಾನವಿದೆ. ಗುರು, ಲಿಂಗ, ಜಂಗಮ, ಪಾದೊದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ, ಶರಣರ ಅಷ್ಟಾವರಣಗಳು. ಅಂತೆಯೇ ಸಿಕ್ಖರಲ್ಲಿ ಕೇಶ, ಕೈಕಡಗ, ಕಂಘಿ, ಕೃಪಾಣ ಮತ್ತು ಕಾಂಥ ಅವರ ಲಾಂಛನಗಳು.

ಶರಣರಿಗೆ ಅಷ್ಟಾವರಣಗಳಂತೆ ಸಿಕ್ಖರಿಗೆ ಈ ಲಾಂಛನಗಳು ಮುಖ್ಯ. ಅದರಲ್ಲೂ ಲಿಂಗ, ವಿಭೂತಿ ಮತ್ತು ರುದ್ರಾಕ್ಷಿಗಳು ಶರಣರ ಪ್ರತ್ಯಕ್ಷ ಲಾಂಛನಗಳು. ಬಸವಣ್ಣನವರು "ಲಾಂಛನಕ್ಕೆ ಶರಣೆಂಬೆ" ಎಂದು ಹೇಳುವ ಮೂಲಕ ವಿಭೂತಿ ಲಾಂಛನಕ್ಕೆ ಮಹತ್ವವನ್ನು ನೀಡಿದರು.

ವೀರಶೈವರಿಗೆ ಅಷ್ಟಾವರಣಗಳಂತೆ ಪಂಚಾಚಾರಗಳೂ ಇವೆ. ಶರಣರಲ್ಲಿ ಪಂಚಾಚಾರಗಳಿದ್ದಂತೆ ಸಿಕ್ಖರಲ್ಲಿ ಸಿಮಿರನ್, ಕಿರತ್ ಕರ್ನೀ, ವಂದ ಚಖಿನ ಮತ್ತು ಸೇವೆ ಎಂಬ ನಾಲ್ಕು ತತ್ವಗಳಿವೆ. ಇವು ಸಿಕ್ಖರ ಆಚಾರಸಂಹಿತೆಗಳಾಗಿವೆ.

ಈ ಎಲ್ಲವೂ ಶರಣರ ಮತ್ತು ಸಿಕ್ಖರ ಸಾಧನಾಮಾರ್ಗದ ನಿಯಮಗಳು.

**೯. ಅನುಭಾವ:** ಶರಣರು ಶ್ರೇಷ್ಠ ಅನುಭಾವಿಗಳು. ಅನುಭಾವವೆಂದರೆ ಪರಮಾತ್ಮನ ಬಗೆಗಿನ ಅನುರಾಗ. ಸಾಧಕ ತನ್ನನ್ನು ಸ್ತ್ರೀ ಎಂದು ಪರಮಾತ್ಮನನ್ನು ಪತಿಯೆಂದು ಭಾವಿಸಿ ಅವನೊಡನೆ ಮಿಲನಗೊಂಡು ಏಕಾಕಾರಗೊಳ್ಳುವುದೇ ಐಕ್ಯಸ್ಥಿತಿ. ವೀರಶೈವ ಧರ್ಮದಲ್ಲಿ ಈ ಸಾಧನಮಾರ್ಗದಲ್ಲಿ ಈ ಆರು ಸ್ಥಳಗಳನ್ನು ಗುರುತಿಸಿದ್ದಾರೆ. ಇದೇ ಷಟ್‌ಸ್ಥಲಮಾರ್ಗ. ಷಟ್‌ಸ್ಥಲಗಳೆಂದರೆ ಭಕ್ತಸ್ಥಲ, ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಸ್ಥಲ, ಶರಣಸ್ಥಲ ಮತ್ತು ಐಕ್ಯಸ್ಥಲ. ಐಕ್ಯಸ್ಥಲದಲ್ಲಿ

ದ್ವೈತವಿಲ್ಲ. ಪರಮಾತ್ಮನ ಮಿಲನದ ಈ ಹಂತದ ಸುಖ ವರ್ಣನಾತೀತವಾದುದು. ಇದನ್ನು ಹೇಳಲು ಬರುವುದಿಲ್ಲ. ಇದನ್ನು ಬಸವಣ್ಣನವರು ಅನುಭಾವವೆಂಬುದು 'ಅಂತರಂಗದ ರತ್ನ' ಹಾಗೂ 'ಶಿಶು ಕಂಡ ಕನಸು' ಎಂದಿದ್ದಾರೆ.

ವೀರಶೈವರಲ್ಲಿ ಪರಮಾತ್ಮನ ಸಾಧನಾ ಮಾರ್ಗಕ್ಕೆ ಅಥವಾ ಅನುಭಾವ ಮಾರ್ಗಕ್ಕೆ ಷಟ್‌ಸ್ಥಲಗಳಿರುವಂತೆಯೇ, ಸೂಫಿಗಳಲ್ಲಿ ಶರಿಯತ್, ತರಿಯತ್, ಮಾರಿಫತ್ ಮತ್ತು ಹಕೀಕತ್ ಎಂಬ ನಾಲ್ಕು ಹಂತಗಳಿವೆ. ಅಲ್ಲಿ ಪರಮಾತ್ಮ ಸತಿ, ಸಾಧಕ ಪತಿ. ಅಂತೆಯೇ, ಸಿಕ್ಖರಲ್ಲಿ ನಾಲ್ಕು ಸೋಪಾನಗಳಿವೆ. ಮೊದಲ ಸೋಪಾನವನ್ನು ಭಕ್ತಿಖಂಡ ಎಂದು ಹೇಳಲಾಗಿದೆ. ಇಲ್ಲಿ ಮನುಷ್ಯನ ಶರೀರ ಮತ್ತು ಮನಸ್ಸಿನ ಮಧ್ಯದ ಸಂವಾದ ಸ್ಥಾಪಕ ಮನಸ್ಸು ವಿಷಯ ವಾಸನೆಗಳಲ್ಲಿ ಲೀನವಾಗಿದ್ದು ಇದು ಐದು ವಿಕಾರಗಳಿಂದ ಕೂಡಿರುತ್ತದೆ, ಆದರೆ ತನ್ನ ಉನ್ಮನಾವಸ್ಥೆಯಲ್ಲಿ ಇದು ಜ್ಯೋತಿಸ್ವರೂಪವಾಗುತ್ತದೆ. ಸಾಧನೆಯ ಎರಡನೆಯ ಹಂತ ಸದ್ಗುರುವಿನ ಮಿಲನ ಹಂತ. ಸದ್ಗುರುವಿನಿಂದ ಪರಮಾತ್ಮನ ನೆನಪು ಮಾಡಿಕೊಳ್ಳಲು ಮಂತ್ರ ಸಿಗುತ್ತದೆ. ಸತ್ಸಂಗಗಳು ಲಭಿಸುತ್ತವೆ. ಈ ಸತ್ಸಂಗಗಳ ಮೂಲಕ ಮನಸ್ಸಿನಲ್ಲಿ ಈರ್ಷ್ಯಾದಿ ಭಾವನೆಗಳು ದೂರವಾಗುತ್ತವೆ. ಗುರು ಅರ್ಜನ್‌ದೇವ್ ಹೇಳುವಂತೆ:

> ಬಿಸರಿ ಗಈ ಸಭ್ ತಾತಿ ಪರಾಈ |
> ಜಬ್ ತೆ ಸಾಧ್‌ಸಂಗತಿ ಮೊಹಿ ಪಾಈ |
> ನಾ ಕೊ ಬೈರೀ ನಹೀ ಬಿಗಾನಾ ಸಗಲ ಸಂಗಿ ಹಮ್ ಕವು ಬನಿ ಆಈ || ೧ ||
> ಜೊ ಪ್ರಭ್ ಕೀನೋ ಸೋ ಭಲ್ ಮಾನಿವೊ ಎಹ್ ಸುಮತಿ ಸಾಧೂ ತೆ ಪಾಈ || ೨ ||
> ಸಭಿ ಮಹಿ ರವಿ ರಹಿಆ ಪ್ರಭು ಏಕೈ ಪೆಖಿ ಪೆಖಿ ನಾನಕ್ ಬಿಗಸಾಈ || ೩ ||

ನಾನು ಸಾಧುಗಳ ಪಾವನ ದರ್ಶನವನ್ನು ಮಾಡುತ್ತಿದ್ದಂತೆ ಬೇರೆಯವರನ್ನು ನೋಡಿ ನನ್ನ ಮನಸ್ಸಿನಲ್ಲುಂಟಾಗುವ ಈರ್ಷ್ಯೆ ಲಯವಾಗಿದೆ. ಈಗ ನನಗೆ ಯಾವ ವೈರಿಯೂ ಇಲ್ಲ–ನನ್ನವನಲ್ಲದ ಒಬ್ಬನೂ ಇಲ್ಲ. ನನ್ನ ಸಂಬಂಧಗಳು ಎಲ್ಲರೊಡನೆ ಮಧುರವಾಗಿವೆ. ನನಗೆ ಇದನ್ನೆಲ್ಲ ಅರಿವು ಮಾಡಿಸಿದ್ದು ಸತ್ಸಂಗ. ಈಗ ಪರಮಾತ್ಮನ ಹೊಂಬೆಳಗು ಎಲ್ಲೆಡೆಯೂ ವ್ಯಾಪಿಸಿರುವುದನ್ನು ನೋಡಿ ನೋಡಿ ನನ್ನ ಹೃದಯಕಮಲ ಅರಳಿದೆ. ಈ ಹಂತದಲ್ಲಿ ಗುರುವಿನ ಉಪದೇಶ ಪಡೆದ ಮನುಷ್ಯ ಸುಖದುಃಖಗಳ ದ್ವಂದ್ವದಿಂದ ಮೇಲೇರುತ್ತ ಜೀವನ್ಮುಕ್ತನಾಗುತ್ತಾನೆ.

ಮೂರನೆಯ ಹಂತದಲ್ಲಿ ಸಾಧಕ ಪರಮಾತ್ಮನ ಪ್ರೀತಿಯನ್ನು ಅನುಭವಿಸತೊಡಗುತ್ತಾನೆ. ಈ ಪ್ರೀತಿ ದೊರೆತದ್ದು ಗುರುವಿನಿಂದಾದುದರಿಂದ ಆತನ ಬಗ್ಗೆ ಭಕ್ತಿ ಮತ್ತು ಶ್ರದ್ಧೆಯನ್ನು ತೋರಿಸಲಾರಂಭಿಸುತ್ತಾನೆ. ಸರ್ವವೂ ಪರಮಾತ್ಮಮಯವಾಗಿ ಕಾಣಿಸುತ್ತದೆ. 'ಏಕ್ ನೂರ್ ತೆ ಸಬ್ ಜಗ್ ಉಪಜಿ' ಮತ್ತು 'ಸಭೈ ಘಟ್ ರಾಮ್



ಬೋಲೈ' ಅಂದರೆ ಒಂದೇ ಚಿತ್‌ಶಕ್ತಿಯಿಂದ ಈ ಎಲ್ಲವೂ ಹುಟ್ಟಿದೆ ಮತ್ತು ಎಲ್ಲರ ಘಟಗಳಿಂದಲೂ ಪರಮಾತ್ಮನೇ ಮಾತನಾಡುತ್ತಿದ್ದಾನೆ ಎಂಬ ಸತ್ಯವನ್ನು ಕಾಣಲಾರಂಭಿಸುತ್ತಾನೆ. ಹೆಣ್ಣಿನ ರೂಪದಲ್ಲಿರುವ ಸಾಧಕ ಪರಮಾತ್ಮನ ವಿರಹದಿಂದ ಹೇಗೆ ಚಡಪಡಿಸುತ್ತಾನೆಂದರೆ ಇದನ್ನು ರಾಮ್‌ದಾಸ್ ಕೆಳಗಿನ ಮಾತುಗಳಲ್ಲಿ ಹೇಳಿದ್ದಾರೆ:

> ಕೋಈ ಆಣಿ ಮಿಲಾವೈ ಮೇರಾ ಪ್ರೀತಮು ಪಿಆರಾ ಹವು ತಿಸು ಪಹಿ ಆಪು ವೆಚಾಈ || ೧ ||
> ದರಸನು ಹರಿ ದೇಖಣ ಕೈ ತಾಈ ||
> ಕ್ರಿಪಾ ಕರಹಿ ತಾ ಸತಿಗುರು ಮೇಲಹಿ ಹರಿ ಹರಿ ನಾಮು ಧಿಆಈ || ೨ ||

ಯಾರಾದರೂ ನನ್ನನ್ನು ನನ್ನ ಪ್ರಿಯತಮನೊಂದಿಗೆ ಸೇರಿಸುವುದಾದರೆ ನಾನು ಅವರಿಗೆ ಸಮರ್ಪಿಸಿಕೊಳ್ಳುತ್ತೇನೆ. ಹೇ ಪರಮಾತ್ಮ, ನಿನ್ನ ಕೃಪೆಯಾದದ್ದಾದರೆ ನನ್ನನ್ನು ಗುರುವಿಗೆ ಪರಿಚಯಿಸು. ನಾನು ಸದಾ ನಿನ್ನ ದರ್ಶನಕ್ಕಾಗಿ ನಿನ್ನ ಹೆಸರನ್ನೇ ಹೇಳುತ್ತಿದ್ದೇನೆ. ಎಂತಹ ದುಃಖದ ಕ್ಷಣದಲ್ಲೂ ನಾನು ನಿನ್ನನ್ನು ಆರಾಧಿಸುವಂತಹ ಕರುಣೆ ಮಾಡು.

ಪರಮಾತ್ಮನೊಡನೆ ಹೊಂದುವ ಮಿಲನವನ್ನು ಸಿಕ್ಖರು ಪರಮಾತ್ಮನೊಡನೆ ಸಾಕ್ಷಾತ್ಕಾರ ಎಂದು ಹೇಳುತ್ತಾರೆ. ಇದು ಅನುಭಾವಮಾರ್ಗದ ನಾಲ್ಕನೆಯ ಹಂತ. ಇದನ್ನು 'ಲಾಲೂ ರಂಗೀಲೊ ಸಹಜೆ ಪಾಇಓ' (ಪ್ರಿಯತಮನೊಡನೆ ಒಂದಾಗಿ ಪಡೆದೆ ಅವನನ್ನು) ಎಂದಿದ್ದಾರೆ. ಇದು ಎಂತಹ ಐಕ್ಯ ಸ್ಥಿತಿ ಎಂದರೆ ಗುರು ಅರ್ಜುನದೇವರು ಹೇಳುವಂತೆ:

> ಸೂರಜ್ ಕಿರಣಿ ಮಿಲೆ ಜಲ್ ಕಾ ಜಲು ಹೂಆ ರಾಮ್ |
> ಜೋತೀ ಜೋತಿ ರಲೀ ಸಂಪೂರನು ಥೀಆ ರಾಮ್ |
> ಬಹಮು ದೀಸೈ ಬ್ರಹಮು ಸುಣೀಐ ಏಕು ಏಕು ವಖಾಣೀಐ |
> ಆತಮ್ ಪಸಾರಾ ಕರಣ್ ಹಾರಾ ಪ್ರಭ್ ಬಿನಾ ನಹೀ ಜಾಣೀಐ |
> ಆಪಿ ಕರತಾ ಆಪಿ ಭುಗತಾ ಆಪಿ ಕಾರಣು ಕೀಆ |
> ಬಿನವಂತಿ ನಾನಕ್ ಸೆಈ ಜಾಣಹಿ ಜಿನ್ಹೀ ಹರಿ ರಸು ಪೀಆ |

ಸೂರ್ಯನ ಕಿರಣ ಮತ್ತು ಸೂರ್ಯನಲ್ಲಿ, ನೀರಿನ ಅಲೆ ಮತ್ತು ನೀರಿನಲ್ಲಿ ಯಾವ ರೀತಿ ಅಂತರವಿಲ್ಲವೋ ಅಂತಹ ಸ್ಥಿತಿ ಜೀವಾತ್ಮ ಮತ್ತು ಪರಮಾತ್ಮನದಾಗಿದೆ. ಜೀವಾತ್ಮನ ಜ್ಯೋತಿ ಪರಮಾತ್ಮನಲ್ಲಿ ಲೀನವಾಗಿರುವುದರಿಂದ ಜೀವ ಮತ್ತು ಜ್ಯೋತಿ ಒಂದಾದಂತಾಗಿದೆ. ಈ ಸ್ಥಿತಿಯಲ್ಲಿ ಜೀವಾತ್ಮನಿಗೆ ಎಲ್ಲೆಲ್ಲೂ ಪರಮಾತ್ಮನೇ ಕಾಣುತ್ತಾನೆ. ಪರಮಾತ್ಮನ ಧ್ವನಿಯೇ ಕೇಳುತ್ತದೆ. ಈ ಪರಮಾತ್ಮನಿಲ್ಲದೆ ಏನೂ ಸಾಧ್ಯವಿಲ್ಲ. ಏಕೆಂದರೆ ಈತನೇ ಕರ್ತ, ಭೋಕ್ತ ಮತ್ತು ಕಾರಣಪುರುಷ. ಪರಮಾತ್ಮನ ಮಿಲನದ ರಸಾನಂದವನ್ನು ಅನುಭವಿಸಿರುವವರು ಈ ಅಂಶವನ್ನು ಅರಿತಿರುತ್ತಾರೆ.

ಸಿಕ್ಖರ ಅನುಭಾವ ಪಥದ ನಾಲ್ಕು ಹಂತಗಳು ಸಾಧಕ ಅನುಭಾವ ಪಥದಲ್ಲಿ ಏರಬೇಕಾದ ಸ್ಥಿತಿಗಳನ್ನು ಸಂಕೇತಿಸುತ್ತವೆ. ಶರಣರ ಷಟ್‌ಸ್ಥಲಗಳು ಹಾಗೂ ಸಿಕ್ಖರ ಈ ನಾಲ್ಕು ಹಂತಗಳು ಸಮಾಂತರವಾಗಿವೆ.

೧೦. **ಕಾಯಕ:** ಶರಣರಿಗೆ ಕಾಯಕ ಅವರ ಜೀವನಧರ್ಮವಾಗಿತ್ತು, ತಮ್ಮ ಜೀವನಕ್ಕೆ ತೋರಿದಷ್ಟೇ ಪ್ರೀತಿಯನ್ನು ಶರಣರು ತಮ್ಮ ತಮ್ಮ ಕಾಯಕಕ್ಕೂ ತೋರಿದರು. ಕಾಯಕ ಅವರಿಗೆ ಎಷ್ಟು ಅನನ್ಯವಾಗಿತ್ತೆಂದರೆ, ಗುರುಪೂಜೆಗೆ ಮತ್ತು ಲಿಂಗಪೂಜೆಗೆ ನೀಡಿರುವುದಕ್ಕಿಂತಲೂ ಹೆಚ್ಚಿನ ಮಹತ್ತ್ವವನ್ನು ನೀಡಿದರು. 'ಕಾಯಕವಿಲ್ಲದೆ ಭಕ್ತಿ ಹೋಯಿತ್ತು' ಎಂದು ಹೇಳಿ ಭಕ್ತಿಯಲ್ಲೂ ಕಾಯಕ ತತ್ತ್ವ ಮಿಳಿತಗೊಂಡಿರಬೇಕೆಂದು ಹೇಳಿದರು. ಆ ಕಾಯಕ ಹಿರಿದು, ಈ ಕಾಯಕ ಕಿರಿದು, ಆ ಕಾಯಕದಿಂದ ಪ್ರತಿಷ್ಠೆ ಹಿಗ್ಗುತ್ತದೆ, ಈ ಕಾಯಕದಿಂದ ಪ್ರತಿಷ್ಠೆ ಕುಗ್ಗುತ್ತದೆ ಎಂಬ ಭಾವನೆಗಳಿಂದ ದೂರ ಉಳಿದು ಶರಣರು ತಮ್ಮ ತಮ್ಮ ಕಾಯಕಕ್ಕೆ ಹಿರಿಮೆ ಗರಿಮೆಗಳನ್ನು ತಂದುಕೊಟ್ಟರು. ನಮ್ಮ ಸಾಮಾಜಿಕ ವ್ಯವಸ್ಥೆಗೆ ಶಿವಶರಣರ ಕೊಡುಗೆ ಹಾಗೂ ಕಲಿಸಿದ ಪಾಠವೆಂದರೆ-ಕಾಯಕ ಪ್ರೀತಿ. ಶರಣರು 'ಕಾಯಕವೇ ಕೈಲಾಸ'ವೆಂದರು. ಸತ್ಯಶುದ್ಧ ಕಾಯಕ ಪರಮಾತ್ಮನ ಸೇವೆಯ ಪುಣ್ಯಪಥ ಎಂದು ನುಡಿದರು. ಶರಣರು ಹೇಳುವಂತೆ ಕಾಯಕವನ್ನು ಎಷ್ಟರ ಮಟ್ಟಿಗೆ ಪ್ರೀತಿಸಬೇಕೆಂದರೆ ಲಿಂಗಪೂಜೆ, ಗುರುಪೂಜೆಯನ್ನು ಬಿಟ್ಟು ಕಾಯಕ ಮಾಡಬೇಕು. ಬಸವಾದಿ ಶರಣರ ದೃಷ್ಟಿಯಲ್ಲಿ ಕಾಯಕನಿಷ್ಠೆ ಉಪದೇಶವಲ್ಲ, ಬದುಕಿನ ಅವಿಭಾಜ್ಯ ಅಂಗ. ಕಾಯಕವೇ ಇವರಿಗೆ ಶಿವಪೂಜೆ.

ಸಿಕ್ಖರು ಕೂಡ ಕಾಯಕಕ್ಕೆ ಇನ್ನಿಲ್ಲದ ಮಹತ್ತ್ವವನ್ನು ನೀಡಿದ್ದಾರೆ. ಕಾಯಕ ಇವರ ದೃಷ್ಟಿಯಲ್ಲಿ ಲೌಕಿಕ ಸುಖ ಶಾಂತಿಗಳ ಸೋಪಾನ. ಸಿಕ್ಖ್ ಗುರುಗಳು ಭಾವಿಸುವಂತೆ ಪ್ರಾಮಾಣಿಕತೆಯಿಂದ ಮತ್ತು ಬೆವರು ಸುರಿಸಿ ಏನನ್ನು ಸಂಪಾದಿಸುತ್ತೇವೆಯೋ ಅದನ್ನು ಮಾತ್ರ ಅನುಭವಿಸಬೇಕು. ಪರರ ದುಡಿಮೆ ಮತ್ತು ಪರರನ್ನು ವಂಚಿಸಿ ಪಡೆದ ದುಡಿಮೆಯಿಂದ ಉಣ್ಣುವುದನ್ನು ಸಿಕ್ಖ್ ಗುರುಗಳು ಕಟುವಾಗಿ ಟೀಕಿಸಿದ್ದಾರೆ. ಗುರುವಾಣಿಯಲ್ಲಿ 'ಇಂತಹ ದುಡಿಮೆಯನ್ನು ಮುಸಲ್ಮಾನರು ಹಂದಿಯ ಮಾಂಸ ತಿಂದಂತೆ ಮತ್ತು ಹಿಂದೂಗಳು ಗೋಮಾಂಸ ತಿಂದಂತೆ' ಎಂದು ಹೇಳಿದೆ. ಹೀಗೆ ಶರಣರು ಮತ್ತು ಸಿಕ್ಖರು ಸ್ವಂತ ಪರಿಶ್ರಮದ ದುಡಿಮೆಗೆ ಮಹತ್ವವನ್ನು ಕೊಟ್ಟಿದ್ದಾರೆ ಮತ್ತು ತಾವು ಮಾಡುವ ಕಾಯಕದಲ್ಲಿ ಮುಕ್ತಿಯನ್ನು ಕಂಡಿದ್ದಾರೆ. ಶರಣರು ವ್ಯಕ್ತಿಯ ಪರಿಶ್ರಮವನ್ನು ಕಾಯಕವೆಂದಿದ್ದಾರೆ, ಸಿಕ್ಖರು 'ಕಿರತ್ ಕರ್ನೀ' ಎಂದಿದ್ದಾರೆ.



೧೧. **ದಾಸೋಹ:** ವೀರಶೈವರಲ್ಲಿ ದಾಸೋಹವೆಂದರೆ ಸೇವೆ. ಗುರು, ಲಿಂಗ, ಜಂಗಮರಿಗೆ ನಿಷ್ಠರಾಗಿ ತಮ್ಮನ್ನು ತಾವು ಅರ್ಪಿಸಿಕೊಳ್ಳುವುದು. ದಾಸೋಹದಲ್ಲಿ ಸೇವೆ ಮತ್ತು ವಿನಯ ಭಾವನೆ ಇರಬೇಕು. ದಾಸೋಹವೆಂದರೆ ಹಂಚುವುದು ಹಾಗೂ ಬಡಿಸುವುದು ಎಂದು ಆಗುತ್ತದೆ. ದಾಸೋಹ ಸಿದ್ಧಾಂತದ ಪ್ರಕಾರ ಸಾಧಕ ತನ್ನ ಕಾಯಕದಿಂದ ಬಂದಂತಹ ಫಲವನ್ನು ಸಮಾಜಕ್ಕಾಗಿ ಉಪಯೋಗಿಸಬೇಕು. ದಾಸೋಹದಲ್ಲಿ ಅನ್ನ ದಾಸೋಹ, ಜ್ಞಾನ ದಾಸೋಹಕ್ಕೆ ಎಲ್ಲಿಲ್ಲದ ಪ್ರಾಮುಖ್ಯತೆ ಇದೆ. ಸಂಪಾದಿಸಿದ್ದನ್ನು ಹಂಚಬೇಕು. ಗಳಿಸಿದ ವಿದ್ಯೆಯನ್ನು ಎಲ್ಲರಿಗೂ ತಲುಪಿಸಬೇಕು. ಈ ದಾಸೋಹಕ್ರಿಯೆಯಿಂದ ವ್ಯಕ್ತಿ ಸಮಾಜಕ್ಕೆ ಉಪಯೋಗಿ ಆಗಬಲ್ಲ. ದಾಸೋಹದಲ್ಲಿ ಸರ್ವೋದಯ, ಸಮಾನತೆ ಮತ್ತು ಭ್ರಾತೃತ್ವದ ಭಾವನೆ ಇರುತ್ತದೆ. ದಾಸೋಹದಲ್ಲಿ ನಿಷ್ಕಾಮ ಭಾವನೆ ಇರಬೇಕು. ಇಲ್ಲಿ ದಾಸೋಹ ನೀಡುವವರ ಮನಸ್ಸಿನಲ್ಲಿ ನಾನು ನೀಡುತ್ತಿದ್ದೇನೆ ಎಂಬ ಅಹಂ ಬರಬಾರದು. ದಾಸೋಹವನ್ನು ನೀಡುವವರು ಯಾವುದನ್ನೂ ನಿರೀಕ್ಷಿಸಬಾರದು.

ಗುಬ್ಬಿ ಹುಚ್ಚಪ್ಪನವರು ಹೇಳುವಂತೆ: 'ಶಿವಶರಣರು ವ್ಯವಸ್ಥೆಗೊಳಿಸಿದ ಗುರು ಲಿಂಗ ಜಂಗಮ ಮಾನವ ಸೇವೆಗೆ ತನು ಮನ ಧನವನ್ನು ಸವೆಸುವುದೇ ದಾಸೋಹ. ಇದು ಶಿವಯೋಗಾಚರಣೆಯಲ್ಲಿ ಪ್ರಧಾನ ಅಂಶವಾಗಿದೆ. ಶುಚಿ ನಡೆ, ಶುಚಿ ನುಡಿ, ಶುಚಿ ತನು, ಶುಚಿ ಮನ, ಶುಚಿ ಭಾವದಿಂದ ಮಾನವ ಸೇವೆಯಲ್ಲಿ ನಿರತರಾಗಿರಬೇಕು. ಭಕ್ತನೇ ಬೇರೆ ಶಿವಯೋಗಿಯೇ ಬೇರೆಯಲ್ಲ. ಶಿವಯೋಗಾಚರಣೆಯಲ್ಲಿರುವ ಭಕ್ತನೇ ಶಿವಯೋಗಿ. ಭಕ್ತ ಗುರು ವಿರಕ್ತ ಜಂಗಮ ತಮ್ಮ ಇಷ್ಟಲಿಂಗದ ಕರುಣೆಯಿಂದ ಗಳಿಸಿದ ಧನ, ಧಾನ್ಯ, ವಿದ್ಯೆ, ಬುದ್ಧಿ, ಕ್ರಿಯೆ, ಜ್ಞಾನ, ಅನುಭಾವ ಇತ್ಯಾದಿ ತಮ್ಮೆಲ್ಲ ಗಳಿಕೆಗಳನ್ನು, ಸಾಧನೆಗಳ ಫಲವನ್ನು ಶಿವಾರ್ಪಣ ಬುದ್ಧಿಯಿಂದ ದಾಸೋಹಕ್ಕೆ (ಮಾನವ ಸೇವೆಗೆ) ಸವೆಸಬೇಕು. ಕೇವಲ ಅನ್ನ ಹಾಕುವುದಷ್ಟೇ ದಾಸೋಹವಲ್ಲ. ಹೀಗೆ ಶರಣರಲ್ಲಿ ದಾಸೋಹಕ್ಕೆ ವಿಶಿಷ್ಟವಾದಂತಹ ಮಹತ್ವವಿದೆ.'

ಸಿಕ್ಖ್ ಧರ್ಮದಲ್ಲೂ ದಾಸೋಹಕ್ಕೆ 'ವಂದ್ ಚಖನ' ಹಾಗೂ 'ಸೇವೆ' ಅನ್ನುತ್ತಾರೆ.

'ವಂದ್ ಚಖನ' ಅಂದರೆ 'ಕೂಡಿ ತಿನ್ನು' ಎಂದೇ ಅರ್ಥ. ತಾನು ಗಳಿಸಿದ್ದನ್ನು ಸಮಾಜಕ್ಕೆ ನೀಡಬೇಕೆಂಬುದೇ ಇದರ ಉದ್ದೇಶ. 'ವಂದ್ ಚಖನ'ದ ಇನ್ನೊಂದು ವ್ಯಾವಹಾರಿಕ ಅರ್ಥ 'ಲಂಗೂರ್' ಎಂದು. ಒಮ್ಮೆ ಗುರುಗೋವಿಂದ ಸಿಂಹರು ಮೊಗಲ್‌ರೊಡನೆ ಯುದ್ಧ ಮಾಡುತ್ತಿದ್ದಾಗ ಅವರ ಒಬ್ಬ ಅನುಯಾಯಿಯಾದ ಕನ್ಹಯ್ಯ ಎಂಬುವವನು ಗಾಯಗೊಂಡ ಸಿಕ್ಖರ ಮತ್ತು ಮೊಗಲ್ ಸೈನಿಕರಲ್ಲಿ ಯಾವ ಭೇದಭಾವ ಮಾಡದೆ ಎಲ್ಲರಿಗೂ ನೀರು ಕೊಡುತ್ತಿರುತ್ತಾನೆ. ಹೀಗೇಕೆ ಮಾಡುತ್ತಿರುವೆ ಎಂದು

ಕೇಳಿದಾಗ ಆತ 'ಇಲ್ಲಿ ನನಗೆ ಯಾರೂ ಮಿತ್ರ ಅಥವಾ ಶತ್ರುವಿನಂತೆ ಕಾಣುತ್ತಿಲ್ಲ. ಎಲ್ಲೆಲ್ಲೂ ನಾನು ತಮ್ಮನ್ನೇ ಕಾಣುತ್ತಿದ್ದೇನೆ' ಎಂದ. ಅಷ್ಟರವುಟ್ಟಿಗೆ ಆತ ದಾಸೋಹದಲ್ಲಿ ನಿರತನಾಗಿದ್ದ. ನಾನಕರು ಕರ್ತಾರಪುರದಲ್ಲಿ ಸ್ಥಾಪಿಸಿದ ಆಶ್ರಮದಲ್ಲಿ ತಮ್ಮ ದುಡಿಮೆಯಲ್ಲಿ ಆಶ್ರಮಕ್ಕೆ ಬಂದ ಜನರಿಗೆ ಉಚಿತ ಭೋಜನದ ವ್ಯವಸ್ಥೆ ಮಾಡುವುದನ್ನು ಜಾರಿಗೆ ತಂದರು. ಅದು ಇಂದಿಗೂ ನಡೆದುಕೊಂಡು ಬಂದಿದೆ. ಗುರುದ್ವಾರಗಳಲ್ಲಿ ಯಾವುದೇ ಭೇದಭಾವವಿಲ್ಲದೆ ಸರ್ವರಿಗೂ ಉಚಿತ ದಾಸೋಹ ಪದ್ಧತಿ ಇದೆ. ಸಿಕ್ಖ್ ಧರ್ಮಾನುಯಾಯಿಗಳು ದಾಸೋಹದ ಪದ್ಧತಿಯನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಸಿಕ್ಖರಲ್ಲಿ ದಾಸೋಹ ಒಂದು ಧಾರ್ಮಿಕ ಅಂಗವಾಗಿರುವಂತೆ, ಸೇವೆಯ ಅಂಗವಾಗಿದೆ. ಅಲ್ಲಿನ ಭಕ್ತರು ಕಸ ಗುಡಿಸುವುದು, ಪಾತ್ರೆ ಬೆಳಗುವುದು ಮುಂತಾದ ಕಾರ್ಯಗಳಲ್ಲಿ ಲೀನರಾಗಿರುತ್ತಾರೆ. ಇಲ್ಲಿ ಬಡವ ಶ್ರೀಮಂತ ಎಂಬ ಭೇದವಿಲ್ಲ.

**೧೨. ಗೃಹಸ್ಥ ಜೀವನ:** ಶರಣರು ಮತ್ತು ಸಿಕ್ಖರು ಗೃಹಸ್ಥಾಶ್ರಮವನ್ನು ನಿರಾಕರಿಸಿರಲಿಲ್ಲ. ಬಸವಣ್ಣ ಮತ್ತು ಗುರುನಾನಕ್ ಹೆಣ್ಣಿನ ಬಗೆಗೆ ಗೌರವ ಭಾವನೆಯನ್ನು ಹೊಂದಿದ್ದರು. ಗೃಹಸ್ಥಾಶ್ರಮವನ್ನು ಇಬ್ಬರೂ ಸ್ವೀಕರಿಸಿದ್ದರು. ಬಸವಣ್ಣ ಗಂಗಾಂಬಿಕೆ ಮತ್ತು ನೀಲಾಂಬಿಕೆ ಎಂಬುವರನ್ನು ವಿವಾಹವಾಗಿದ್ದರು. ಈ ಇಬ್ಬರೂ ಬಸವಣ್ಣನವರ ಎರಡು ಕಣ್ಣುಗಳಾಗಿದ್ದರು, ಅವರ ಸುಖ ಸಂಸಾರದ ಸಂಗಾತಿಗಳಾಗಿದ್ದರು. ಗಂಗಾಂಬಿಕೆ ತನ್ನ ಪತಿಯ ಕಾಯಕದಲ್ಲಿ ತನ್ನ ಪತಿಯ ಇಂಬಾಗಿ ಇದ್ದುಕೊಂಡು ಅತಿಥಿ ಸತ್ಕಾರ ಕಾರ್ಯದಲ್ಲಿ ಆಸ್ಥೆಯನ್ನು ತೋರಿದರೆ, ನೀಲಾಂಬಿಕೆ 'ಮಹಾಮನೆ'ಯಲ್ಲಿ ನಿತ್ಯ ನಡೆಯುತ್ತಿದ್ದ ಪ್ರಸಾದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಬಸವಣ್ಣನವರ ಬದುಕು ಸಮಾಜಸೇವೆಯಲ್ಲಿ ನಿರತವಾಗಿದ್ದರೆ ಈ ಇಬ್ಬರೂ ಪತ್ನಿಯರು ಮನೆಯನ್ನು 'ಮಹಾಮನೆ'ಯಾಗಿಸಿದರು. ಈ ಇಬ್ಬರೂ ಪತ್ನಿಯರು ಕವಿ ಹೃದಯದವರಾಗಿದ್ದರು. ಇಬ್ಬರೂ ವಚನಕಾರ್ತಿಯರಾಗಿದ್ದರು. ಇವರು ತಮ್ಮ ವಚನಗಳಲ್ಲಿ ಭಕ್ತಿ ಮತ್ತು ಸಾಮಾಜಿಕ ಕಳಕಳಿಯನ್ನು ತೋರಿದ್ದಾರೆ. ಬಸವಣ್ಣನವರಿಗೆ ಒಬ್ಬ ಮಗನೂ ಇದ್ದ.

ಬಸವಣ್ಣನವರಂತೆ ಗುರುನಾನಕರೂ ಗೃಹಸ್ಥರಾಗಿದ್ದರು. ಇವರ ಪತ್ನಿಯ ಹೆಸರು 'ಸುಲಖನಿ.' ಈಕೆ ಗಂಡನನ್ನು ತುಂಬಾ ಪ್ರೀತಿಸುತ್ತಿದ್ದರು. ಅವರ ಸೇವೆ ಆರೈಕೆಯಲ್ಲಿ ಅಪಾರ ನಿಷ್ಠೆ ತೋರುತ್ತಿದ್ದರು. ನಾನಕ್ ಸಹ ಈಕೆಯನ್ನು ತುಂಬ ಇಷ್ಟಪಡುತ್ತಿದ್ದರು. ನಾಲ್ಕಾರು ವರ್ಷ ಸಮರಸವಾಗಿ ಬಾಳಿದರು. ಇವರಿಗೆ ಇಬ್ಬರು ಗುಂಡುಮಕ್ಕಳು- ಒಬ್ಬ ಶ್ರೀಚಂದ, ಇನ್ನೊಬ್ಬ ಲಕ್ಷ್ಮೀಚಂದ. ಕ್ರಮೇಣ ನಾನಕರ ಮನಸ್ಸು ಸಂಸಾರದಿಂದ ವಿಮುಖವಾಗಿ ಅಧ್ಯಾತ್ಮದತ್ತ ಹೊರಳಿತು. ತಂದೆ-ತಾಯಿ ಹೆಂಡತಿ ಮಕ್ಕಳನ್ನು ಬಿಟ್ಟು



ದೇಶಾಟನೆ ಹೊರಟರು. ರಾಗದಿಂದ ವಿರಾಗದತ್ತ ಅವರ ಮನಸ್ಸು ಹರಿದಿದ್ದರಿಂದ ಸುಲಖನಿ ಒಂಟಿಯಾಗಿದ್ದುಕೊಂಡು ಮಕ್ಕಳನ್ನು ಪೋಷಿಸುತ್ತಿದ್ದರು. ನಾನಕ್ ತಮ್ಮ ದೀರ್ಘ ದೇಶಾಟನೆಯನ್ನು ಮುಗಿಸಿಕೊಂಡು ಊರಿಗೆ ಬಂದಾಗ ಈಕೆ ತನ್ನ ಅಳಲನ್ನು ತೋಡಿಕೊಂಡಳು. ಆಗ ನಾನಕರು ನಿನಗೆ 'ಪರಮಾತ್ಮನೇ ದಾರಿ ತೋರುತ್ತಾನೆ' ಎಂದು ಹೇಳಿ ಮುಂದೆ ಸಾಗಿದರು. ಹೀಗೆ ಬಸವಣ್ಣನವರ ಸಾಂಸಾರಿಕ ಬದುಕು ಸುಖಮಯವಾಗಿದ್ದರೆ, ನಾನಕರ ಸಾಂಸಾರಿಕ ಬದುಕು ಅಲ್ಪಕಾಲದ್ದಾಗಿತ್ತು.

**೧೩. ಅನುಭವ ಮಂಟಪ:** ಶರಣರಲ್ಲಿ ಅನುಭವ ಮಂಟಪಕ್ಕೆ ವಿಶೇಷವಾದ ಸ್ಥಾನವಿದೆ. ಅನುಭವ ಮಂಟಪವೆಂದರೆ ಶರಣ-ಶರಣೆಯರು ಒಟ್ಟಿಗೆ ಕುಳಿತು ತಮ್ಮ ತಮ್ಮ ಚಿಂತನೆಗಳನ್ನು ಮಂಡಿಸಿ ವಿಚಾರ ವಿನಿಮಯ ಮಾಡಿಕೊಳ್ಳುವ ವೇದಿಕೆ. ಇಲ್ಲಿಗೆ ಕೇವಲ ಕರ್ನಾಟಕದವರಷ್ಟೇ ಅಲ್ಲ ಹೊರ ರಾಜ್ಯದವರೂ ಬರುತ್ತಿದ್ದರು. ಕಾಶ್ಮೀರದಿಂದ ರಾಜ ಮಹದೇವ ಮತ್ತು ಆತನ ಪತ್ನಿ, ಗುಜರಾತಿನಿಂದ ಆದಯ್ಯ, ಕಳಿಂಗದಿಂದ ಮರುಳ ಶಂಕರದೇವ ಮುಂತಾದವರು ಬಂದು ಇಲ್ಲಿ ಸೇರಿದ್ದರು. ಅಂತೆಯೇ ಕರ್ನಾಟಕದ ವಿಭಿನ್ನ ಭಾಗಗಳಿಂದ ಶರಣರು ಮತ್ತು ಶರಣೆಯರು ಬರುತ್ತಿದ್ದರು. ಇಲ್ಲಿ ವಿಭಿನ್ನ ಕಾಯಕಗಳನ್ನು ಮಾಡುವ ಎಲ್ಲ ಜಾತಿಗಳ ಜನರು ಸೇರುತ್ತಿದ್ದರು, ಸೇರಿ ಚರ್ಚೆಗಳನ್ನು ಮಾಡುತ್ತಿದ್ದರು. ಈ ಅನುಭವ ಮಂಟಪದ ಅಧ್ಯಕ್ಷರು ಅಲ್ಲಮಪ್ರಭುಗಳು. ಈ ಚರ್ಚಾಗೋಷ್ಠಿಯನ್ನು ಇಂದಿನ ಸಂಸತ್ತು ಮತ್ತು ಶಾಸನಸಭೆಗೆ ಹೋಲಿಸಬಹುದು. ಈ ಅನುಭವ ಮಂಟಪದಲ್ಲಿ ಬಸವಾದಿ ಶರಣರು ಯಾವೊಂದು ತಾರತಮ್ಯಭಾವವಿಲ್ಲದೆ ಎಲ್ಲರೊಂದಿಗೂ ಮೇಳೈಸಿಕೊಂಡು ಚರ್ಚಿಸುತ್ತಿದ್ದರು. ಅನುಭವ ಮಂಟಪ ವೈಚಾರಿಕ ಕ್ರಾಂತಿಗೆ ಅಡಿಪಾಯದಂತಿತ್ತು.

ಸಿಕ್ಖ್ ಧರ್ಮದಲ್ಲೂ ಅನುಭವ ಮಂಟಪವೆಂದು ಪ್ರತ್ಯೇಕ ವೇದಿಕೆ ಇಲ್ಲದಿದ್ದರೂ ನಾನಕರು ಸುತ್ತಾಡಿದ ಕಡೆಯಲ್ಲೆಲ್ಲ ಹಿಂದೂಗಳ, ಮುಸಲ್ಮಾನರ ಅನೇಕ ಜಿಜ್ಞಾಸೆಗಳಿಗೆ ಉತ್ತರ ಕೊಡುತ್ತ ಹೋಗುತ್ತಿದ್ದರು. ದೈವ, ಸಮಾಜ, ಜಾತಿ ಮುಂತಾದ ಸಮಸ್ಯೆಗಳನ್ನು ಕುರಿತು ನಾನಕರು ತಮ್ಮ ವಿಚಾರಗಳನ್ನು ಬಿತ್ತುತ್ತ ಹೋಗುತ್ತಿದ್ದರು. ಹೀಗಾಗಿ ಅವರಿಗೆ ಇಡೀ ಸಮಾಜವೇ ಅನುಭವ ಮಂಟಪವಾಗಿತ್ತು.

**೧೪. ಗುರು:** ವೀರಶೈವ ಧರ್ಮದಲ್ಲಿ ಗುರುವಿಗೆ ಇನ್ನಿಲ್ಲದ ಸ್ಥಾನವಿದೆ. ಗುರು ಅಜ್ಞಾನದಲ್ಲಿರುವ ಭಕ್ತನನ್ನು ಸುಜ್ಞಾನದೆಡೆಗೆ ಕೊಂಡೊಯ್ಯುವ ಮಹಾಶಕ್ತಿ. ವೀರಶೈವರ ಅಷ್ಟಾವರಣದಲ್ಲೂ ಗುರುವಿಗೆ ಮೊದಲ ಸ್ಥಾನ. ಶಿವಪಥವನರಿಯಲು ಗುರುಪಥವೆ ಮೊದಲು ಅರಿಯಬೇಕು. ಬಸವಣ್ಣ ಮತ್ತಿತರ ಶರಣರು ಗುರುವನ್ನು ಮನಸಾರೆ ಪೂಜಿಸಿದ್ದಾರೆ.

ಸಿಕ್ಖ್ ಧರ್ಮದಲ್ಲಿ ಗುರುವಿಗೆ ಅತ್ಯಂತ ಪೂಜನೀಯವಾದ ಸ್ಥಾನವನ್ನು ಕೊಟ್ಟಿದ್ದಾರೆ. 'ಗುರು ಗ್ರಂಥ ಸಾಹೇಬ್' ಗ್ರಂಥವನ್ನು 'ಶಬ್ದಗುರು' ಎಂದು ಭಾವಿಸಲಾಗಿದೆ. ಗುರುನಾನಕರ ಪ್ರಕಾರ:

> ಅಮ್ರಿತು ನೀರು ಗಿಯಾನಿ ಮನ್ ಮಜನು ಅಠಸಠಿ ತೀರಥ್ ಸಂಗಿ ಗಹೈ |
> ಗುರು ಉಪದೇಸಿ ಜವಾಹರ್ ಮಾಣಕ್ ಸೇವೆ ಸಿಖು ಸೊ ಖೋಜಿ ಲಹೈ | ೧ |
> ಗುರು ಸಮಾನಿ ತೀರಥು ನಹಿ ಕೋಇ |
> ಸರು ಸಂತೋಖು ತಾಸು ಗುರು ಹೋಇ || ರಹಾಉ ||
> ಗುರು ದರೀಆವು ಸದಾ ಜಲು ನಿರಮಲು ಮಿಲಿಆ ದುರಮತಿ ಮೈಲು ಹರೈ ||
> ಸತಿಗುರಿ ಪಾಇಐ ಪೂರಾ ನಾವಣು ಪಸೂ ಪರೇತಹು ದೇವ್ ಕರೈ || ೨ ||

ಅಂದರೆ ಗುರುವಿನ ಸಮಾನ ಯಾವುದೇ ತೀರ್ಥವಿಲ್ಲ. ಗುರು ಸಂತೋಷದ ಸರೋವರ. ಜ್ಞಾನದ ಮೂಲಕ ಅಮೃತರೂಪಿ ಜಲ ಸಿಗುತ್ತದೆ. ಶಿಷ್ಯನ ಮನಸ್ಸು ಅದರಲ್ಲಿ ಮಿಂದು ೬೮ ತೀರ್ಥಗಳನ್ನು ಗ್ರಹಿಸುತ್ತದೆ. ಗುರುವಿನ ಉಪದೇಶದಲ್ಲಿ ಅನೇಕ ಅಮೂಲ್ಯ ರತ್ನ ವಜ್ರ ವೈಢೂರ್ಯಗಳಿವೆ. ಯಾವನೇ ಒಬ್ಬ ಶಿಷ್ಯ ಅವನ್ನು ಹುಡುಕಬಹುದು. ಗುರು ನಿರ್ಮಲ ಜಲದ ನದಿಯಿದ್ದಂತೆ. ಯಾರೇ ನದಿಯಲ್ಲಿ ಮಿಂದರೂ ಅವನ ದುರ್ಮತಿ ಹೊರಟು ಹೋಗುತ್ತದೆ. ನಿಜವಾದ ಗುರು ಸಿಕ್ಕರೆ ನಮ್ಮ ತೀರ್ಥಸ್ನಾನವಾಗುವುದಿರಲಿ ಪಶು, ಪ್ರೇತಗಳಿಗೂ ದೈವತ್ವ ಲಭ್ಯವಾಗುತ್ತದೆ.

ಹೀಗೆ ನಾನಕರು ಮತ್ತು ಇತರೆ ಸಿಕ್ಖ್ ಗುರುಗಳು ಗುರುಮಹಿಮೆಯನ್ನು ತಮ್ಮ ವಚನಗಳಲ್ಲಿ ಹಾಡಿದ್ದಾರೆ.

೧೫. **ಕವಿಶ್ರೇಷ್ಠರು:** ಬಸವಣ್ಣನವರು ವಚನಗಳನ್ನು ಗುರುನಾನಕ್ ತಮ್ಮ ಬಾನಿಗಳನ್ನು ಬರೆಯಬೇಕೆಂದು ಬರೆಯಲಿಲ್ಲ, ಕಾವ್ಯ ಬರೆಯುವುದು ಅವರ ಲಕ್ಷ್ಯವಾಗಿರಲೂ ಇಲ್ಲ. ಹಾಗೆ ನೋಡಿದರೆ ಅವರ ಬದುಕೇ ಕಾವ್ಯವಾಗಿತ್ತು. ಇಬ್ಬರೂ ಹುಟ್ಟು ಕವಿಗಳಾಗಿದ್ದರು, ಶ್ರೇಷ್ಠ ಕವಿಗಳಾಗಿದ್ದರು. ಇವರ ಒಂದೊಂದು ಮಾತೂ ಕಾವ್ಯವಾಯಿತು, ಮಂತ್ರವಾಯಿತು. ಕವಿಯಲ್ಲಿರಬೇಕಾದ ಕಲ್ಪನಾ ಚಾತುರ್ಯ, ಮೌಲಿಕ ಚಿಂತನೆ, ಸುತ್ತಲ ಪರಿಸರಕ್ಕೆ ಸ್ಪಂದಿಸುವ ಸಹೃದಯತೆಯೇ ಮುಂತಾದ ವಿಶಿಷ್ಟ ಗುಣಗಳು ಬಸವಣ್ಣ ಮತ್ತು ನಾನಕರಲ್ಲಿ ಸಮಾನವಾಗಿವೆ. ಬಸವಣ್ಣನವರು ಬರೆದದ್ದು ಸರಳ ಕನ್ನಡದಲ್ಲಿ. ಅವರ ಮತ್ತು ಅವರ ಸಮಕಾಲೀನ ಶರಣ ಶರಣೆಯರ ಅಭಿವ್ಯಕ್ತಿಯ ಮಾಧ್ಯಮ ವಚನವಾಗಿತ್ತು. ಈ ವಚನಗಳು ಪದ್ಯಗಂಧಿ ಗದ್ಯಗಳಾಗಿವೆ. ನಾನಕರು ಬರೆದದ್ದು ಸರಳವಾದ ಪಂಜಾಬಿಯಲ್ಲಿ. ಇಲ್ಲಿ ಪಂಜಾಬಿಯಲ್ಲದೆ ಉರ್ದು, ಅರೇಬಿಕ್ ಮುಂತಾದ ಭಾಷೆಗಳ ಮಿಶ್ರಣವೂ ಇದೆ. ಇಬ್ಬರಲ್ಲೂ ಕಾವ್ಯದ ಎಲ್ಲ ಲಕ್ಷಣಗಳು ಇವೆ. ಇಬ್ಬರೂ ಮಹಾಕಾವ್ಯವನ್ನು ಬರೆಯಲಿಲ್ಲ. ಬರೆಯುವಂಥ ಪ್ರತಿಭೆಯಿದ್ದರೂ



ಬರೆಯುವಷ್ಟು ವ್ಯವಧಾನ ಅವರಿಗಿರಲಿಲ್ಲ. ಏಕೆಂದರೆ ಇಬ್ಬರೂ ಸಮಾಜದ ಮಧ್ಯೆ, ಜನರ ಮಧ್ಯೆ ಇದ್ದು ಇವರ ದುಃಖ ದುಮ್ಮಾನಗಳಿಗೆ ಸ್ಪಂದಿಸುವುದು ಇವರ ಧ್ಯೇಯವಾಗಿತ್ತು. ಬಸವಣ್ಣ ವಚನಗಳನ್ನು, ನಾನಕ್ ಬಾನಿಗಳನ್ನು ಬರೆದರು. ಇಬ್ಬರ ರಚನೆಗಳು ಹಾಡಲು ಬರುತ್ತವೆ. ರಾಗ ಲಯ ತಾಳಗಳಲ್ಲಿ ಇಬ್ಬರ ವಚನಗಳೂ ಎಂಥವರನ್ನೂ ಮಂತ್ರಮುಗ್ಧಗೊಳಿಸುತ್ತವೆ. ಶರಣರ ಮತ್ತು ಸಿಕ್ಖರ ಅಮೃತವಾಣಿಗಳು ಜನರ ಮನಸ್ಸನ್ನು ಕಲಕುವಂತೆ ಅವರನ್ನು ವಿಚಾರವಂತರನ್ನಾಗಿಯೂ ಮಾಡುತ್ತವೆ.

೧೬. ಶರಣರು ತಮ್ಮ ವಚನಗಳ ಕೊನೆಯಲ್ಲಿ ತಮಗೆ ಪ್ರಿಯವಾದ ದೈವವನ್ನೊ ಅಥವಾ ವ್ಯಕ್ತಿಯನ್ನೋ ಅಥವಾ ತಮ್ಮ ಹೆಸರನ್ನೊ ಅಂಕಿತನಾಮವನ್ನಾಗಿ ಉಪಯೋಗಿಸಿದ್ದಾರೆ. ಉದಾಹರಣೆಗೆ ಕೂಡಲಸಂಗಮದೇವ, ಗುಹೇಶ್ವರ, ಚೆನ್ನಮಲ್ಲಿಕಾರ್ಜುನ, ಅಂಬಿಗರ ಚೌಡಯ್ಯ ಇತ್ಯಾದಿ.

ಸಿಕ್ಖ್ ಗುರುಗಳು ಸಹ ತಮ್ಮ ವಚನಗಳ ಕೊನೆಯಲ್ಲಿ ಅಂಕಿತನಾಮಗಳನ್ನು ಉಪಯೋಗಿಸಿದ್ದಾರೆ. ಆದರೆ ಇಲ್ಲಿ ಯಾವ ದೈವದ ಉಲ್ಲೇಖವಿಲ್ಲ. ಗುರು ನಾನಕರು ತಮ್ಮ ವಚನಗಳ ಅಂತ್ಯದಲ್ಲಿ 'ನಾನಕ್' ಅಂಕಿತವನ್ನು ಬಳಸಿದ್ದಾರೆ. ಉಳಿದ ಗುರುಗಳು ತಮ್ಮ ಹೆಸರುಗಳನ್ನು ಅಂಕಿತನಾಮಗಳನ್ನಾಗಿ ಬಳಸದೆ ಆದಿಗುರು ನಾನಕರ ಹೆಸರನ್ನು ಅಂಕಿತನಾಮವನ್ನಾಗಿ ಬಳಸಿದ್ದಾರೆ. ಬಸವಣ್ಣ ಮತ್ತು ಗುರುನಾನಕರ ಬದುಕಿನ ಮತ್ತು ಸಾಧನೆಯ ನಾನಾ ಆಯಾಮಗಳನ್ನು ತೌಲನಿಕವಾಗಿ ನೋಡುವ ಪ್ರಯತ್ನ ಮಾಡಿದೆ. ಬಸವಣ್ಣ ಮತ್ತು ನಾನಕರು ಬೇರೆ ಬೇರೆ ಪ್ರದೇಶ ಮತ್ತು ಭಾಷೆಯವರಾದರೂ ಅವರ ಚಿಂತನೆಯಲ್ಲಿನ ಸಮಾನತೆ ಬೆರಗುಗೊಳಿಸುವಂತಿದೆ. ಇವರ ಚಿಂತನೆಗಳು ಸಮಾಂತರವಾಗಿವೆ.

## ಸಮಾರೋಪ

ವೀರಶೈವ ಧರ್ಮ ಮತ್ತು ಸಿಕ್ಖ್ ಧರ್ಮ ಭಾರತದ ಮಣ್ಣಿನಲ್ಲಿ ಅರಳಿರುವ ಧರ್ಮ ಕುಸುಮಗಳು. ವೀರಶೈವ ಧರ್ಮ ಹನ್ನೆರಡನೆ ಶತಮಾನದಲ್ಲಿ ನೂರಾರು ಶರಣರ ಮತ್ತು ಶರಣೆಯರ ಚಿಂತನೆಗಳಿಂದ ಘಮಘಮಿಸುತ್ತಿದ್ದರೆ, ಸಿಕ್ಖ್ ಧರ್ಮ ಹದಿನಾರನೆಯ ಶತಮಾನದಲ್ಲಿ ಹುಟ್ಟಿ ಮನುಕುಲದ ಏಳಿಗೆಗೆ ಮಿಡಿದ, ತುಡಿದ ಧರ್ಮವಾಗಿದೆ. ಎರಡೂ ಧರ್ಮಗಳು ದೇವರು, ಧರ್ಮ, ಸಮಾಜ, ಲೌಕಿಕ, ಪಾರಲೌಕಿಕ ಸಂಗತಿಗಳನ್ನು ನಿರ್ಮಲ ಹೃದಯದಿಂದ ಚರ್ಚಿಸಿವೆ. ಈ ಎರಡೂ ವಿಶ್ವಧರ್ಮಗಳು ವಿಶ್ವಧರ್ಮಕ್ಕೆ ಕೆಳಕಂಡ ಗುಣಗಳಿರಬೇಕೆಂದು ವಿದ್ವಾಂಸರು ಹೇಳುತ್ತಾರೆ:

೧. ವಿಶ್ವಧರ್ಮ ನೀತಿ ಪ್ರಧಾನವಾಗಿರಬೇಕು.

೨. ವಿಶ್ವಧರ್ಮ ವೈಚಾರಿಕವಾಗಿರಬೇಕು.

೩. ವಿಶ್ವಧರ್ಮ ಅನುಭವಗಳನ್ನು ಆಧರಿಸಿರಬೇಕು.

೪. ವಿಶ್ವಧರ್ಮದಲ್ಲಿ ಅಹಂಕಾರಕ್ಕೆ ಯಾವುದೇ ಸ್ಥಾನವಿಲ್ಲ. ಸ್ವ ನಿರಾಕರಣೆ ಇಲ್ಲಿನ ಪ್ರಮುಖ ಧ್ವನಿಯಾಗಿದೆ.

೫. ವಿಶ್ವಧರ್ಮದಲ್ಲಿ ನಾಸ್ತಿಕತೆ ಇರುವುದಿಲ್ಲ. ಇಲ್ಲಿ ಸತ್ಯವೇ ದೇವರು.

೬. ವಿಶ್ವಧರ್ಮದಲ್ಲಿ ಏಕದೇವೋಪಾಸನೆಗೆ ಮಹತ್ವವಿದೆ.

೭. ವಿಶ್ವಧರ್ಮ ಕರ್ಮಕಾಂಡ ಮತ್ತು ಪೌರೋಹಿತ್ಯವನ್ನು ನಿರಾಕರಿಸುತ್ತದೆ.

೮. ವಿಶ್ವಧರ್ಮ ಪ್ರವಾದಿ ಧರ್ಮವಾಗಿರುತ್ತದೆ. ಏಕೆಂದರೆ ಒಬ್ಬರಲ್ಲ ಒಬ್ಬ ಮಹಾನ್ ವ್ಯಕ್ತಿಯಿಂದ ಪ್ರವರ್ತಿತವಾಗಿರುತ್ತದೆ ಮತ್ತು ಸಂಚಾಲಿತವಾಗಿರುತ್ತದೆ.

೯. ವಿಶ್ವಧರ್ಮದ ಪ್ರತಿಪಾದನೆಗಳು ಸಾಹಿತ್ಯಕ ಸೌಂದರ್ಯದಿಂದ ಕಂಗೊಳಿಸುತ್ತವೆ.

ಈ ಎಲ್ಲ ಗುಣಗಳು ವೀರಶೈವ ಧರ್ಮದಲ್ಲಿ ಮತ್ತು ಸಿಕ್ಖ್ ಧರ್ಮದಲ್ಲಿ ಮತ್ತು ಅವರ ಪ್ರತಿಪಾದಕರಲ್ಲಿ ಕಾಣುತ್ತವೆ. ಈ ದೃಷ್ಟಿಯಿಂದ ಈ ಎರಡೂ ಧರ್ಮಗಳು ವಿಶ್ವ ಧರ್ಮಗಳು. ಎರಡೂ ಧರ್ಮಗಳು ಮಾನವ ಕಲ್ಯಾಣದ ಪಕ್ಷಪಾತಿಗಳು, ಆಧ್ಯಾತ್ಮಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿರುವುದರಿಂದಾಗಿ ಇಂದಿಗೂ ಈ ಧರ್ಮಗಳು ಜೀವಂತವೂ ಪ್ರಾಸಂಗಿಕವೂ ಆಗಿವೆ. □

ಭಕ್ತರೆ ಸಮರ್ಥರು, ಅಸಮರ್ಥರೆಂದೆನಲುಂಟೆ?
ಚನ್ನನೆತ್ತ, ಚೋಳನೆತ್ತ ?
ಚನ್ನನೊಡನುಂಡ ಶಿವನು, ಅಹಾ, ಅಯ್ಯಾ,
ಚೆನ್ನ ಚೋಳನ ಮನೆಯ ಕಂಪಣಿಗನಯ್ಯಾ !
ಕೂಡಲಸಂಗಮದೇವ, ಭಕ್ತಿಲಂಪಟನಯ್ಯಾ !

**ಬಸವಣ್ಣ**

# ವಚನ-ವೈಭವ

## ಸಂಗೀತ-ನೃತ್ಯ-ರೂಪಕ

ಪರಿಕಲ್ಪನೆ: **ಕರ್ನಾಟಕ ಕಲಾಶ್ರೀ**
**ವಿದ್ವಾನ್ ವಿ. ನಂಜುಂಡಸ್ವಾಮಿ**

**ಭಕ್ತಿಭಂಡಾರಿ ಬಸವಣ್ಣನವರ ಕಾಲದ ಅನುಭವಮಂಟಪ**

(ಇದು 12ನೇ ಶತಮಾನದಲ್ಲಿ ಮೂಡಿಬಂದಿರುವ ವಚನಗಳನ್ನು ಆಧರಿಸಿದ ದೃಶ್ಯಕಾವ್ಯ ನೃತ್ಯ ಸಂಯೋಜನೆ: **ವಿದುಷಿ ಲಲಿತಾರಾವ್**)

ಆರಂಭದಲ್ಲಿ, ಸಂಗೀತ-ನೃತ್ಯ ನಾಟಕದ ಕಥಾವಸ್ತುವಿನ ಹಂದರವನ್ನು ವಚನಸಾಹಿತ್ಯದ ಆಯ್ದ 6 ವಚನಗಳನ್ನು ವೀರಶೈವ ಧರ್ಮದ "ಷಟ್ಸ್ಥಲ" ಪರಿಕಲ್ಪನೆಯಲ್ಲಿ ಹೆಣೆಯಲಾಗಿದೆ. ಅನುಭಾವಿ ಶರಣರಾದ ಹಿರಿಯರಾದ ಅಲ್ಲಮಪ್ರಭುವಿನ 1 ವಚನದಿಂದ ಆರಂಭಿಸಿ, ಬಸವಣ್ಣನವರ 3 ವಚನಗಳು, ಅಕ್ಕಮಹಾದೇವಿಯ 2 ವಚನಗಳನ್ನು ಆರಿಸಿ, ಸಂಯೋಜಿಸಿ, ಷಟ್ಸ್ಥಲದ ಆರೂ ತತ್ವಗಳಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ – ಇವುಗಳ ಅಂತರಾರ್ಥವನ್ನು ಪ್ರತಿಪಾದಿಸುವ ರೀತಿಯಲ್ಲಿ ನೃತ್ಯರೂಪಕವನ್ನು, 6 ವಚನಗಳಿಗೂ ಪ್ರತ್ಯೇಕ ತಾಳಗಳಿಗೆ ಅಳವಡಿಸಿ, ಸಂಗೀತ ಸಂಯೋಜಿಸಿ ಪ್ರಸ್ತುತಪಡಿಸಲಾಗುತ್ತಿದೆ.

ವಚನವೇದ–ವೇದದಷ್ಟೇ ಅಗಾಧ, ಅಪಾರ, ಆಳವಾದದ್ದು. ಈ ರೂಪಕದ ಮುಖ್ಯ ಉದ್ದೇಶ ವಚನಸಾಹಿತ್ಯವನ್ನು ದೃಶ್ಯ ಹಾಗೂ ಶ್ರವ್ಯಕಾವ್ಯ ಮಾಧ್ಯಮದಲ್ಲಿ ನಿರೂಪಿಸಿ, ಒಂದು ನವೀನ ರೀತಿಯಲ್ಲಿ ಅನುಭವಮಂಟಪದ ದೃಶ್ಯವನ್ನು ಸಾದರಪಡಿಸುವ ಕಿರುಪ್ರಯತ್ನ. 1 ಗಂಟೆ ಅವಧಿಗೆ ಸೀಮಿತಗೊಳಿಸಬೇಕಾದ್ದರಿಂದ ಕೆಲವು ಯುಕ್ತ ಬದಲಾವಣೆಗಳನ್ನು ಮಾಡಲಾಗಿದೆ. ಇದೊಂದು ಸ್ವಕಪೋಲಕಲ್ಪಿತ ಕಿರು ಪ್ರಯತ್ನ. ದಯವಿಟ್ಟು ಕಲಾಭಿಮಾನಿಗಳು ನಮ್ಮೆಲ್ಲರ ಸದುದ್ದೇಶವನ್ನು ಗಮನಿಸಬೇಕು. ಅನುಭವ ಮಂಟಪದಲ್ಲಿ ಕೆಲವು ಪಾತ್ರಗಳನ್ನು ಮಾತ್ರ ಪ್ರಾತಿನಿಧಿಕವಾಗಿ ಬಿಂಬಿಸಲಾಗಿದೆ.

**ಪಾತ್ರಗಳು**

1. ಅಲ್ಲಮಪ್ರಭು: (ಅನುಭವಮಂಟಪದ ಅಧ್ಯಕ್ಷರು)
2. ಬಸವಣ್ಣನವರು: (ಅನುಭವಮಂಟಪದ ಮುಖ್ಯ ಸಂಚಾಲಕರು)

3. ಅಕ್ಕಮಹಾದೇವಿ: (ಅನುಭವಮಂಟಪದ ಶ್ರೇಷ್ಠ ಶರಣೆ)

4. ಮುಕ್ತಾಯಕ್ಕ: ಶರಣೆ-ಅನುಭವ ಮಂಟಪದಲ್ಲಿ ಉಪಸ್ಥಿತಿ ಮಾತ್ರ

**ವಿಶೇಷ ಸೂಚನೆಗಳು**

ಜೇಡರ ದಾಸಿಮಯ್ಯ ವಚನಸಾಹಿತ್ಯದ ಆದ್ಯಪ್ರವರ್ತಕನಾದ್ದರಿಂದ ಒಮ್ಮೆ ಅವನ ಪ್ರವೇಶ, ನಿರ್ಗಮನ (ನಿರೂಪಣೆ ಮೂಲಕ) ಅಭಿನಯವಿಲ್ಲ. ಅದೇ ರೀತಿ ಮುಕ್ತಾಯಕ್ಕಳ ಉಪಸ್ಥಿತಿ. ಅನುಭವ ಮಂಟಪದಲ್ಲಿ ಅನುಭವ ಮಂಟಪದ ಬೇಕಾದಷ್ಟು ವಚನಕಾರರನ್ನು ವೇಳೆ, ಪಾತ್ರಗಳ ಸಂಖ್ಯೆ, ಪ್ರಸಾದನ ಇತ್ಯಾದಿ ಕಾರಣಗಳಿಂದ ಕೈಬಿಡಲಾಗಿದೆ.

| ಕಾರ್ಯಕ್ರಮ ವಿವರ ಅವಧಿ ಅಂದಾಜು | ಬೇಕಾಗುವ ವೇಳೆ | ನಿಮಿಷಗಳಲ್ಲಿ ಒಟ್ಟು ಅವಧಿ |
|---|---|---|
| ಆಯ್ದ ವಚನದ ಅಭಿನಯ | 6 ವಚನ x 6 ನಿಮಿಷ | 36 |
| ಆರಂಭದಲ್ಲಿ ಕಥಾವಸ್ತು ನಿರೂಪಣೆ | 5 ನಿಮಿಷ | 5 |
| ಒಂದೊಂದು ವಚನದ ಹಿನ್ನೆಲೆ, ಭಾವಾರ್ಥ | 6 ವಚನ x 3 ನಿಮಿಷ | 18 |
| ಭರತವಾಕ್ಯ | | 10 |
| ಸ್ವಾಗತ, ವಂದನೆ, ಶೃತಿ ಇತ್ಯಾದಿ | 15 ನಿಮಿಷ | 15 ನಿಮಿಷ |
| ಸಭಾ ಕಾರ್ಯಕ್ರಮ - ಸನ್ಮಾನ-ಮುಖ್ಯ ಅತಿಥಿ ಭಾಷಣ | | 30 |
| ಬಾಕಿ ಸಿದ್ಧತೆ | 114 | 114 |
| ಸಮಯ | +6 | +6 |
| ಗರಿಷ್ಠ | 120 | 120 |

'ವಚನ ವೈಭವ' ನೃತ್ಯ- ನಾಟಕಕ್ಕೆ ಒಟ್ಟು ವೇಳೆ ಎಲ್ಲಾ ಸೇರಿ-ಗರಿಷ್ಠ 2 ಗಂಟೆಗಳು

**ಮುನ್ನುಡಿ/ಹಿನ್ನೆಲೆ**

ವಚನಗಳೆಂದರೆ "ಮಾತು" ಎಂದು ಒಂದು ಅರ್ಥವಾದರೆ, ಮತ್ತೊಂದು ಅರ್ಥ ಹೀಗಿದೆ: ಗಹನವಾದ ವಿಚಾರಗಳನ್ನು ಸುಂದರ, ಸರಳ, ವಾಗಾಡಂಬರವಿಲ್ಲದೆ, ಸಹಜ ಶೈಲಿಯಲ್ಲಿ, ಅನೇಕ ನಾಣ್ಣುಡಿಗಳನ್ನು ಒಳಗೊಂಡು ಹೃದಯಂಗಮವಾಗಿ ತಿಳಿಸುವ "ಅನುಭವಾಮೃತ"ದ ಆಡುಮಾತುಗಳೇ ವಚನಗಳೆನ್ನಿಸಿಕೊಂಡಿವೆ. ಇವು 12ನೇ ಶತಮಾನದಲ್ಲಿ ರೂಪುಗೊಂಡು ಸಾಮಾಜಿಕ, ಧಾರ್ಮಿಕ ಗುಣಗಳಿಗೆ ಕನ್ನಡಿ ಹಿಡಿಯುವಂತಿವೆ. ಈ ವಚನಸಾಹಿತ್ಯ, ಬಹುಶಃ ಇನ್ನಾವ ಭಾಷೆಗಳಲ್ಲೂ ಕಾಣಲಾಗದ ವಿಶಿಷ್ಟ ಸಾಹಿತ್ಯಪ್ರಕಾರವಾಗಿದೆ. ಇವುಗಳಲ್ಲಿ "ಗೇಯಗುಣ"ಗಳು ಇರುವುದರಿಂದಲೇ



ಹಾಡಲು ಒದಗಿ ಬರುತ್ತದೆ. ನೃತ್ಯಕ್ಕೂ ಅಳವಡಿಸಲು ಸಾಧ್ಯ. ಅದರಲ್ಲೂ ಬಸವಣ್ಣನವರ ವಚನಗಳಲ್ಲಿ "ಗೇಯಗುಣ" ಎದ್ದು ಕಾಣುವುದರಿಂದ ಅವುಗಳನ್ನು "ಗೀತಗಳು" ಎಂದೇ ಕರೆಯಬಹುದು. ಅವರು ಶಿವತತ್ವಗೀತೆಗಳನ್ನ ವಚನ ನಾಮಾಂಕಿತದಲ್ಲಿ ರಚಿಸಿದ್ದಾರೆ.

ಈ ವಚನಗಳೆಲ್ಲಾ ಅಂದು ಪ್ರಚಾರದಲ್ಲಿದ್ದ "ಬತ್ತೀಸ" ಅಂದರೆ 32 ರಾಗಗಳಲ್ಲಿ ಹಾಡಲ್ಪಡುತ್ತಿದ್ದವು ಎಂಬುದು ಸತ್ಯ. ಇಲ್ಲಿ ಸಾಹಿತ್ಯ ಪ್ರಧಾನ ಸಂಗೀತ ಗೌಣವಾಗಿರುತ್ತಿತ್ತು. ತಾಳಭಾಗಕ್ಕೆ ನಿರ್ಧಿಷ್ಟ ನಿಯಮವಿರಲಿಲ್ಲ. ಕೇವಲ ಘಾತ ಅಥವಾ ಏಟುಗಳ ಮೇಲೆ ವಚನವನ್ನು ಸಂಗೀತದ ಮೂಲಕ ಹಾಡುತ್ತಿದ್ದರು. ಭಕ್ತಿ, ಆಧ್ಯಾತ್ಮಿಕ ರಸಭಾವಗಳ ಉದ್ರೇಕ ಹೆಚ್ಚಾದಾಗ, ಸಾಹಿತ್ಯದ ಅಕ್ಷರಗಳು ಸಂಗೀತಕ್ಕೆ ಹೊಂದಿಕೊಂಡು ಮೂಡಿಬರುತ್ತದೆ. ವಚನಗಳನ್ನು ಸಾಹಿತ್ಯದ ಅರ್ಥ ಕೆಡದಂತೆ, ಸಂಗೀತ ಅಳವಡಿಸಿ, ಯಾವ ತಾಳಕ್ಕಾದರೂ ಹೊಂದಿಸಿ, ಸಮರ್ಥ ರೀತಿಯಲ್ಲಿ ನಿರೂಪಿಸಲು ಸಾಧ್ಯ. ವಚನಗಳನ್ನು ಯಾವ ಸಂಗೀತ ಶೈಲಿಗಾದರೂ ಅಳವಡಿಸಬಹುದು. ತತ್ವಪದ, ಜಾನಪದ ಶೈಲಿ, ಭಕ್ತಿಸಂಗೀತ ಶೈಲಿ, ಭಾವಗೀತೆಗಳ ಶೈಲಿ ಕರ್ನಾಟಕ ಸಂಗೀತ ಪದ್ಧತಿ, ಹಿಂದೂಸ್ಥಾನೀ ಸಂಗೀತ ಪದ್ಧತಿ ಶೈಲಿ ಇತ್ಯಾದಿಗಳಿಗೆ ಅಳವಡಿಸಿ ಹಾಡಬಹುದು. ಇನ್ನೊಂದು ಪ್ರಮುಖ ಅಂಶ ಗಮನಿಸಬೇಕು. ಹೇಗೆ, ತ್ಯಾಗರಾಜರು, ಪುರಂದರದಾಸರು, ಕನಕದಾಸರು, ಶ್ಯಾಮಾ ಶಾಸ್ತ್ರಿಗಳು ದೀಕ್ಷಿತರು ತಮ್ಮ ಕೃತಿಗಳ ಕಡೆಯಲ್ಲಿ ತಮ್ಮ ತಮ್ಮ ಇಷ್ಟದೈವದ ಮುದ್ರಿಕೆ ಇಟ್ಟಿದ್ದಾರೋ ಅದೇ ರೀತಿ, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು—ಇವರೂ ಕೂಡ ತಮ್ಮ ತಮ್ಮ ವಚನಗಳ ಕಡೆಯಲ್ಲಿ ಕೂಡಲಸಂಗಮ, ಚೆನ್ನಮಲ್ಲಿಕಾರ್ಜುನ, ಗುಹೇಶ್ವರ ಎಂದು ತಮ್ಮ ಇಷ್ಟದೈವಗಳ ಮುದ್ರಿಕೆ ಇಟ್ಟಿದ್ದಾರೆ. ಇದೂ ಸಹ ಗೇಯಗುಣಕ್ಕೆ ಅನುಗುಣವಾಗಿದೆ.

12ನೇ ಶತಮಾನದ ಸಮಾಜದಲ್ಲಿ ಮನೆಮಾಡಿದ್ದ, ಮೂಢನಂಬಿಕೆ ಕಂದಾಚಾರದ ಸಂಪ್ರದಾಯಗಳ ವಿರುದ್ಧ ಜನರನ್ನು ಎಚ್ಚರಿಸಲು ಕಲ್ಯಾಣದ ಶರಣರು ಆಯ್ದುಕೊಂಡ ಹಾದಿಯೇ ಈ "ವಚನಗಳು" ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು—ಹೀಗೆ ಶರಣರ ದೊಡ್ಡ ಸಮೂಹವೇ, ಸಮಾಜದಲ್ಲಿ ನೆಲೆಗಟ್ಟಿದ್ದ ಜಾತಿವ್ಯವಸ್ಥೆ ವಿರುದ್ಧ ಕ್ರಾಂತಿಯ ಕಹಳೆ ಊದಿದ್ದು, ತೀವ್ರ ಪ್ರತಿರೋಧದ ನಡುವೆಯೂ ಯಶಸ್ವಿಯಾಗಿದ್ದು ಈಗ ಇತಿಹಾಸ. ಬಸವಣ್ಣನವರು, ದೇವರ ಅಸ್ತಿತ್ವವನ್ನು ಒಪ್ಪಿ, ದೈವಸಾಕ್ಷಾತ್ಕಾರಕ್ಕಾಗಿ ಜ್ಞಾನ, ಭಕ್ತಿ, ೈರಾಗ್ಯದ ಮಾರ್ಗಗಳನ್ನು ತಮ್ಮದೇ ಆದ, ವೈಚಾರಿಕ ನೆಲೆಗಟ್ಟಿನಲ್ಲಿ ತಮ್ಮ ವಚನಗಳಲ್ಲಿ ಪ್ರತಿಪಾದಿಸಿದ್ದಾರೆ. ಅಂದಿನ ಜನಸಾಮಾನ್ಯರಲ್ಲಿ ಬೇರೂರಿದ್ದ "ಬದುಕಿನ ಎಲ್ಲಾ ಅವಸ್ಥೆಗಳಿಗೂ ವಿಧಿ ಅಥವಾ ಕರ್ಮವೇ ಕಾರಣ" ಎಂಬ ಭಾವನೆಯನ್ನು...ಖಂಡಿಸಿ, ಅವರಲ್ಲಿದ್ದ ಜಡತ್ವವನ್ನು ದೂರಮಾಡಿದ ಮಹಾನ್ ಮಾನವತಾವಾದಿ ವಿಶ್ವಗುರು ಬಸವಣ್ಣನವರು. ಇವರ ಹಾದಿಯನ್ನು ಅನುಸರಿಸಿ,

ಅಲ್ಲಮಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಿದ್ಧರಾಮ, ಜೇಡರ ದಾಸಿಮಯ್ಯ ಮುಂತಾದ ಅನುಭಾವಿ ಶರಣರು ಒಂದೆಡೆ ಸೇರಿ "ನವಸಮಾಜ" ನಿರ್ಮಿಸುವ ಕಾರ್ಯಕ್ಕೆ ಕೈಗೂಡಿಸಿದರು.

ವಚನಸಾಹಿತ್ಯ ಅಚ್ಚ ಕನ್ನಡ ಸಂಸ್ಕೃತಿ ಬಿಂಬಿಸುವ ವಟವೃಕ್ಷ. ಬಸವಣ್ಣನವರು ವಚನಸಾಹಿತ್ಯದ ಅತ್ಯುತ್ತಮ ಪ್ರತಿನಿಧಿ. "ಕೂಡಲಸಂಗಮದೇವ" ಅಂಕಿತದ ಸಾವಿರಕ್ಕೂ ಹೆಚ್ಚು ಈತನ ವಚನಗಳು ಸಿಕ್ಕಿವೆ. 25 ಜನ ವಚನಕಾರ್ತಿಯರಲ್ಲದೆ ಅನೇಕ ಶ್ರೇಷ್ಠ ವಚನಕಾರರಿದ್ದಾರೆ. ಶಿವಶರಣರು ಅನುಭವ ಮಂಟಪದ ಮೂಲಕ ಸಂಘಟಿತರಾಗಿ, ವಚನಗಳಲ್ಲಿ ತಮ್ಮ ಧರ್ಮದ ಅನುಭಾವೀ ತತ್ವವನ್ನು ಪ್ರತಿಪಾದಿಸುವುದಲ್ಲದೆ, ಸಮಾಜದ ಕುಂದುಕೊರತೆಗಳನ್ನು ಖಂಡಿಸಿ, ಸದಾಚಾರದ ಬದುಕಿನ ಹಾದಿಯನ್ನು ತೋರಿಸಿದ್ದಾರೆ. ವಚನಸಾಹಿತ್ಯ, ದಾಸಸಾಹಿತ್ಯದ "ಉಗಾಭೋಗ" ಹೋಲುತ್ತದೆ. ಪುರಂದರದಾಸರ ಮೇಲೆ ಬಸವಣ್ಣನವರ ವಚನಸಾಹಿತ್ಯ ಪ್ರಭಾವ ಬೀರಿದೆ. ಅಲ್ಲಮಪ್ರಭು ಬಸವಣ್ಣನವರಿಗಿಂತ ಹಿರಿಯರು, ಶರಣಶ್ರೇಷ್ಠರು.

1993ರಲ್ಲಿ ಪ್ರಕಟವಾದ ಸಮಗ್ರ ವಚನ ಸಂಪುಟದ ಪ್ರಕಾರ 12ನೇ ಶತಮಾನದಿಂದ 19ನೇ ಶತಮಾನದವರೆಗಿನ ವಚನಕಾರರ ಸಂಖ್ಯೆ ಸುಮಾರು 250, ಇಪ್ಪತ್ತು ಸಾವಿರ ವಚನಗಳು. ಕನ್ನಡ ಸಾಹಿತ್ಯ ಲೋಕಕ್ಕೆ ಲಭಿಸಿರುವುದು ಪುಣ್ಯವೇ ಸರಿ.

**ವೀರಶೈವ ಧರ್ಮದ ಮುಖ್ಯ ಅಂಶಗಳು**

**ಪಂಚಾಚಾರಗಳು**

| | | | | | |
|---|---|---|---|---|---|
| 1. | ಲಿಂಗಾಚಾರ, | ಶಿವಾಚಾರ, | ಸದಾಚಾರ, | ಭೃತ್ಯಾಚಾರ, | ಗಣಾಚಾರ |
| | 1 | 2 | 3 | 4 | 5 |

**ಅಷ್ಟಾವರಣಗಳು**

| | | | | | | | | |
|---|---|---|---|---|---|---|---|---|
| 2. | ಗುರು, | ಲಿಂಗ, | ಜಂಗಮ, | ಪಾದೋದಕ, | ಪ್ರಸಾದ, | ಭಸ್ಮ, | ರುದ್ರಾಕ್ಷಿ, | ಮಂತ್ರ |
| | 1 | 2 | 3 | 4 | 5 | 6 | 7 | 8 |

**ಷಟ್ಸ್ಥಲ**

| | | | | | | |
|---|---|---|---|---|---|---|
| 3. | ಭಕ್ತ, | ಮಹೇಶ, | ಪ್ರಸಾದಿ, | ಪ್ರಾಣಲಿಂಗಿ, | ಶರಣ, | ಐಕ್ಯ |
| | 1 | 2 | 3 | 4 | 5 | 6 |

ಇದರಲ್ಲಿ, ಷಟ್ಸ್ಥಲವನ್ನು ಆಯ್ದುಕೊಂಡು ಅದರಲ್ಲಿರುವ ಆರೂ ಅಂಶಗಳನ್ನೂ ಸಾಂಕೇತಿಕವಾಗಿ ಪ್ರತಿಪಾದಿಸುವ ಆರು ವಚನಗಳಿಗೆ ಸಂಗೀತ ಅಳವಡಿಸಿ ನೃತ್ಯ ದೃಶ್ಯ ಕಾವ್ಯದ ಅನುಭವ ಮಂಟಪದ ಮೂಲಕ ಪ್ರಸ್ತುತಪಡಿಸಲಾಗುತ್ತಿದೆ.



ಷಟ್ಸ್ಥಲದ ಪ್ರಥಮ ಹಂತ "ಭಕ್ತಿಮಾರ್ಗ." ಈಗ ಮೊದಲನೆಯದಾಗಿ ನೃತ್ಯಾಭಿನಯದಲ್ಲಿ ಮೂಡಿಬರುವ ಅಲ್ಲಮಪ್ರಭುವಿನ ವಚನ ಸುಂದರ ಕಾವ್ಯದಂತಿದೆ. ಈ ವಚನದಲ್ಲಿ ತನಗೂ, ಆ ಭಗವಂತನಿಗೂ ಇರುವ ಆಕಸ್ಮಿಕ ಹಾಗೂ ಅಗಾಧವಾದ "ಭಕ್ತಿ ಬಾಂಧವ್ಯ" ದ ಬಗ್ಗೆ ಸೂಚಿಸಿದ್ದಾರೆ. ಇದು ಒಂದು ಬೆಡಗಿನ ವಚನ. ಒಗಟಿದ್ದ ಹಾಗೆ. ಮಾವಿನ ಮರಕ್ಕೂ ಕೋಗಿಲೆಗೂ ಹಾಗೂ ಬೆಟ್ಟದ ನೆಲ್ಲಿಕಾಯಿಗೂ ಸಮುದ್ರದ ಉಪ್ಪಿಗೂ ಯಾವ ಆಂತರಿಕ ಸಂಬಂಧ ಇಲ್ಲ. ಆದರೆ ಇಲ್ಲಿ ವಚನದ ಅಂತರಾರ್ಥವನ್ನು ವಿಶ್ಲೇಷಿಸಿದಾಗ ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಅವಿನಾಭಾವ ಸಂಬಂಧ ಇದೆ ಎಂದು ಅರಿವಾಗುತ್ತದೆ. ಒಟ್ಟಾಗಿ ಸೇರುವ ಎರಡು ವಸ್ತುಗಳ ಸಂಬಂಧ ಆಕಸ್ಮಿಕ ಮಾತ್ರ ಎಂದು ಸೂಚಿಸಲಾಗಿದೆ. ಈ ಎರಡೂ ಸೇರುವುದು ಆಶ್ಚರ್ಯ ಎನ್ನುವುದಕ್ಕೆ ಕಾರಣ. ಎರಡೂ ವಸ್ತುಗಳ ಗುಣಸ್ಥಾನಗಳ ತಾರತಮ್ಯ, ಮಾಮರ-ಕೋಗಿಲೆ ಸಂಬಂಧ ಬಹು ಆತ್ಮೀಯವಾದರೂ ಒಂದು ಸ್ಥಿರ (ಮಾಮರ) ಮತ್ತೊಂದು ಕೋಗಿಲೆ (ಚಲನಶೀಲ ವಾದದ್ದು) ಒಂದು ಇನ್ನೊಂದಕ್ಕೆ ಆಶ್ರಯ ನೀಡುವಂತಹುದು.

ಬೆಟ್ಟದ ನೆಲ್ಲಿ-ಸಮುದ್ರದ ಉಪ್ಪು ಸಂಬಂಧದ ಬಗ್ಗೆ ನೋಡಿದಾಗ ತಿಳಿದುಬರುವ ಅಂಶ ಹೀಗಿದೆ: ಒಂದರೊಡನೆ ಮತ್ತೊಂದು ಬೆರೆತು, ಒಂದರ ರುಚಿಗೆ ಮತ್ತೊಂದು ಕಾರಣವಾಗುವಂತಹದು. ಒಂದು ಮರವೊಂದರ ಸಣ್ಣ ಭಾಗವಾದರೆ ಮತ್ತೊಂದು ಅಪಾರವೆನಿಸಿದ ಸಮುದ್ರ ತತ್ವ. ಈ ಎರಡರ ಉದಾಹರಣೆಯಂತೆಯೇ ತನ್ನ (ಅಲ್ಲಮನ) ಮತ್ತು ಗುಹೇಶ್ವರನ ಸಂಬಂಧ, ಈಗ ಸ್ಥಿರದಂತೆ ಕಂಡುಬಂದರೂ, ತಮ್ಮಿಬ್ಬರ ಸತ್ವದಲ್ಲಿ ಬಹಳ ಅಂತರವಿದೆ ಎಂದು ಭಕ್ತಿಯಿಂದ ನಿರೂಪಿಸಿದ್ದಾರೆ. ಜೀವಾತ್ಮ-ಪರಮಾತ್ಮರ ಸಂಬಂಧ ಮೇಲುನೋಟಕ್ಕೆ ಬೇರೆಯಾಗಿ ಕಂಡರೂ ಒಂದು ರೀತಿ ಆಂತರಿಕ ಸಂಬಂಧವಿದೆ ಎಂದು ಪ್ರತಿಪಾದಿಸುತ್ತಾರೆ. ಆ ಪರಮಾತ್ಮನಿಂದ ಸಿಡಿದುಬಂದ ಜೀವಾತ್ಮ, ಸಾಧನೆ ಯಿಂದ ಭಕ್ತಿಮಾರ್ಗದಲ್ಲಿ ಮೇಲೇರಿ ಮತ್ತೆ ಪರಮಾತ್ಮನಲ್ಲಿ "ಎರಡೂ ಒಂದೇ" ಆಗಿರುವಂತೆ ಆಗುವುದೇ "ಜೀವನದ ಗುರಿ" ಆಗಬೇಕು. ದ್ವೈತ-ಅದ್ವೈತಗಳಿಗಿರುವ ಅಂತರದ ಪರಿಕಲ್ಪನೆಯನ್ನು ಈ ವಚನದಲ್ಲಿ ಕಾಣಬಹುದು. ಪ್ರಭುದೇವರ ಬೆಡಗಿನ ವಚನಗಳಲ್ಲಿ ಕಾಣುವ ಭಾವನಾ ವಿಲಾಸ, ಅಡಕವಾದ ಸಾಂಕೇತಿಕ ಮಾತುಗಳಲ್ಲಿ, ಹೇಳುವ ನಿಗೂಢ ತತ್ವಪ್ರತಿಪಾದನೆ, ಮಾತುಗಳಿಗೆ ಆತನು ಕೊಡುವ ಅರ್ಥಪೂರ್ಣ ವಾದ ಧ್ವನಿಶಕ್ತಿಯನ್ನು ಈ ವಚನದಲ್ಲಿ ಗಮನಿಸಿ-ಆನಂದಿಸಿ, ಭಕ್ತಿಭಾವ ಪರವಶರಾಗೋಣ.

**ಅಲ್ಲಮಪ್ರಭುಗಳ ಬೆಡಗಿನ ವಚನ**

ರಾಗ: ಹಂಸಧ್ವನಿ

ಎತ್ತಣ ಮಾಮರ? ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ?
ಬೆಟ್ಟದಾ ನೆಲ್ಲಿಕಾಯಿ-ಸಮುದ್ರದೊಳಗಣ ಉಪ್ಪು

ಏತ್ತಣಿಂದೆತ್ತ ಸಂಬಂಧವಯ್ಯಾ?
ಗುಹೇಶ್ವರ ಲಿಂಗಕ್ಕೆಯೂ, ಎನಗೆಯೂ
ಎತ್ತಣಿಂದೆತ್ತ-ಸಂಬಂಧವಯ್ಯಾ?

* * *

ಬಸವಣ್ಣನವರ ಈ ವಚನದಲ್ಲಿ ಷಟ್ಸ್ಥಲದ ಎರಡನೇ ಹಂತ "ಮಹೇಶ"ವನ್ನು ಕಾಣಬಹುದು. ಕೂಡಲಸಂಗಮದೇವನ ನಾಮ ನಾಲಿಗೆಯಲ್ಲಿ ನಲಿದಾಗ ದಿವ್ಯವಾದ ಆನಂದ ಉಂಟಾಗುವುದು. ಭಕ್ತಿ ನಿರ್ಭರತೆಯ ತನ್ಮಯತೆಯನ್ನು ಈ ವಚನದಲ್ಲಿ ಬಸವಣ್ಣನವರು ಬಹು ಸುಂದರವಾಗಿ ನಿರೂಪಿಸಿದ್ದಾರೆ. ಮಾತಿನಲ್ಲಿ ನಿಮ್ಮ ನಾಮಾಮೃತ ತುಂಬಿದೆ ಎನ್ನುತ್ತಾರೆ. ಕೂಡಲಸಂಗಮದೇವನ ನಾಮ ಅಮೃತಕ್ಕೆ ಸಮಾನ ಎಂದಿದ್ದಾರೆ. ಕಣ್ಣಿನಲ್ಲಿ ಆತನ ಮಂಗಳಮೂರುತಿ, ಅಂದರೆ ಇಷ್ಟಲಿಂಗದ ವಿಶ್ವರೂಪವೇ ತುಂಬಿದೆ. ಕಿವಿಯಲ್ಲಿ, ಆತನ ಕೀರ್ತಿಯೊಂದೇ ತಾನೇತಾನಾಗಿ ಆವರಿಸಿದೆ. ಮನಸ್ಸಿನಲ್ಲಿ ಆತನ ಸ್ಮರಣೆ ಸದಾ ಸನ್ನಿಹಿತವಾಗಿದೆ. ಅದರಲ್ಲಿಯೇ ಮನಸ್ಸು ನಿಮಗ್ನವಾಗಿದೆ. ಹೀಗೆ ಇಂದ್ರಿಯಗಳೆಲ್ಲಾ ಶಿವಮಯವಾಗಿವೆ. ಅವರು ಲಿಂಗಕಾಯರಾಗಿ, ಲಿಂಗದಲ್ಲಿಯೇ ಲೀನರಾಗಿದ್ದಾರೆ.

"ನಿಮ್ಮ ಚರಣಕಮಲದೊಳಗಾನು ತುಂಬಿ" ಎಂಬ ಮಾತು ಲಘುಶ್ಲೇಷೆಯಿಂದ ಕೂಡಿ ಧ್ವನಿ ಸಮನ್ವಿತವಾಗಿದೆ" ನಿಮ್ಮ ಪಾದಕಮಲದಲ್ಲಿ ಜೇನನ್ನು ಉಂಡ ದುಂಬಿಯಾಗಿದ್ದೇನೆ. ಅಂತೆಯೇ ಇಷ್ಟಲಿಂಗಸ್ವರೂಪವಾದ ನಿಮ್ಮ ವಿಶ್ವರೂಪದಲ್ಲಿ ನಾನು ತುಂಬಿಹೋಗಿದ್ದೇನೆ, ಲೀನನಾಗಿದ್ದೇನೆ, ನಿಮ್ಮ ಒಳ ಹೊರಗುಗಳನ್ನು ವ್ಯಾಪಿಸಿದ್ದೇನೆ"– ಎನ್ನುವ ಅರ್ಥಗಳು ಇಲ್ಲಿ ಧ್ವನಿಸುತ್ತವೆ. ಅತಿ ಸರಳವಾದ, ನೇರವಾದ ಮಾತುಗಳಿಂದ ಆಕರ್ಷಕವಾಗಿ ಮೂಡಿರುವ ಈ ವಚನ ಮಾತಿಗೆ ಮೀರಿದ ತನ್ಮಯತೆಯ ಅನುಭವವನ್ನು, ನಾದರೂಪಿಯಾಗಿಯೂ ನೃತ್ಯರೂಪವಾಗಿಯೂ ಪ್ರತಿಫಲಿಸುವ ಶಕ್ತಿಯನ್ನು ಪಡೆದಿದೆ. ಆದುದರಿಂದಲೇ ಇಂತಹ ವಚನ ಹಾಡಿದಾಗ, ಭಾವಾಭಿನಯದಲ್ಲಿ ಮೂಡಿಬಂದಾಗ – ಇವುಗಳ ಆಂತರಿಕ ಶಕ್ತಿ ನೇರವಾಗಿ ಮನಸ್ಸನ್ನು ಮುಟ್ಟುತ್ತದೆ. ಅಂತರಂಗದ ಕದವನ್ನು ತಟ್ಟುತ್ತದೆ. ಈಗ ಪ್ರಸ್ತುತಪಡಿಸುವ ವಚನದಲ್ಲಿ ನಮ್ಮ ಮನಸ್ಸಿನ ಆಳದಲ್ಲಿರುವ ಭಕ್ತಿಯನ್ನು "ತೋಡಿ" ಷಟ್ಸ್ಥಲದ "ಮಹೇಶ"ನನ್ನು ತೋಡಿರಾಗದಲ್ಲಿ ಕಾಣುವ ಪ್ರಯತ್ನದಲ್ಲಿ ತೊಡಗೋಣ.

**ಬಸವಣ್ಣನವರ ವಚನ**

ರಾಗ: ತೋಡಿ

ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ
ನಯನದಲ್ಲಿ ನಿಮ್ಮ ಮೂರುತಿ ತುಂಬಿ



ಮನದಲ್ಲಿ ನಿಮ್ಮ ನೆನಹು ತುಂಬಿ
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ
ಕೂಡಲಸಂಗಮದೇವಾ
ನಿಮ್ಮ ಚರಣಕಮಲದೊಳಗಾನು ತುಂಬಿ

ಅಕ್ಕಮಹಾದೇವಿಯದು ಸದ್ಭಾವ, ಶಿವಮಯ ದೃಷ್ಟಿ, ಸಾಧಕನಿಗೆ ಈ ದೃಷ್ಟಿಯು ಸದ್ಭಾವಯೋಗದಿಂದ ಪ್ರಾಪ್ತವಾಗುತ್ತದೆ. ಆಗ ಸಾಧಕನು ಸಮಸ್ತ ಜಗತ್ತಿನಲ್ಲಿ ಪರಮಾತ್ಮನನ್ನೇ ಕಾಣುತ್ತಾನೆ. ಅವನಿಗೆ ತಾನಿರುವ ಭುಮಿಯೇ ಸ್ವರ್ಗವಾಗಿಬಿಡುತ್ತದೆ. ಅಕ್ಕನ ಜೀವನ ಪಾರಮಾರ್ಥ ಸಾಧನೆಯ ಒಂದು ಮಹಾಸಾಗರ. ಆಕೆ ಶ್ರೇಷ್ಠ ಶರಣೆ. 22 ವರ್ಷ ವಯಸ್ಸಿನಲ್ಲಿಯೇ ಅಸಾಧ್ಯವಾದುದನ್ನು ಸಾಧ್ಯವಾಗಿಸಿದ ಅದ್ಭುತ ಶಕ್ತಿ ಹೊಂದಿದವಳು. ಈಕೆ, ಈ ವಚನದಲ್ಲಿ ಧ್ವನಿಸಿರುವ ಆಧ್ಯಾತ್ಮಿಕ ನಿಲುವು ಅರ್ಥಗರ್ಭಿತ "ಜೀವನದಿಂದ ಪಲಾಯನವಾದ ಬೇಡ" ಎಂದಿದ್ದಾಳೆ. ಜೀವನದ ಹಾದಿಯಲ್ಲಿ ಕಷ್ಟಸುಖ ಇದ್ದದ್ದೇ ಎಂಬುದನ್ನು ಚೆನ್ನಾಗಿ ಅರಿತಿದ್ದವಳು. "ಜೀವನ ಹೇಗೆ ಸಾಗುತ್ತದೋ ಹಾಗೆಯೇ ಸ್ವೀಕರಿಸಿ" ಎಂಬುದು. ಆಕೆಯ ಆದರ್ಶ ಪ್ರಕೃತಿಯ ಮುಂದೆ ಮನುಷ್ಯ "ಅಣುವಿನಲ್ಲಿ ಅಣು" ಎನ್ನುವ ಸಂಕೇತ ಕೂಡ ಈ ವಚನದಲ್ಲಿದೆ. ಜೀವನವನ್ನು ಎದುರಿಸಲೇ ಬೇಕು. "ಈಸಬೇಕು ಇದ್ದು ಜಯಿಸಬೇಕು" ಎಂಬ ಛಲ ಸದಾ ಜಾಗೃತವಾಗಿರಬೇಕು. ಪ್ರಕೃತಿ-ದೇವ ಈ ಪರೀಕ್ಷೆಯಲ್ಲಿ, ಭಕ್ತ ಜಯಗಳಿಸಬೇಕಾದರೆ, ಅದಕ್ಕೆ ಸಿದ್ಧನಿರಬೇಕು. ಜೀವನದ ಎಲ್ಲಾ ರೀತಿಯ ಉಪಮಾನಗಳನ್ನು ಅಕ್ಕ ಈ ವಚನದಲ್ಲಿ ನಿರೂಪಿಸಿದ್ದಾಳೆ. "ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆ ಒಂದಿರಲಿ" ಎಂಬಂತೆ, ಮನಸ್ಸನ್ನು ಸಮಾಧಾನದಿಂದ ಇಟ್ಟುಕೊಂಡು ಅನುಭವಿಸುವುದು ಒಂದು ರೀತಿ. "ಸುಖದುಃಖೇ ಸಮೇಕೃತ್ವಾ" ಎಂಬ ಸೂತ್ರದಂತೆ ಶಾಂತಚಿತ್ತ ಹೊಂದಿದ್ದರೆ ಜೀವನದ ಹಾದಿ ಸುಲಭ ಎಂದು ಲೌಕಿಕ ಉದಾಹರಣೆಗಳ ಮೂಲಕ ಸೂಚಿಸಿರುವುದು ಗಮನಾರ್ಹ.

ಷಟ್ಸ್ಥಲದ ಮೂರನೇ ತತ್ವ "ಪ್ರಸಾದಿ"ಗೆ ಈ ವಚನವು ಸಂಕೇತರೂಪವಾಗಿದೆ. ಭಕ್ತನಲ್ಲಿ ಇರಬೇಕಾದ ನಿಲುವು, ಚಿತ್ತಶುದ್ಧಿ, ದೃಢಸಂಕಲ್ಪದ ಪ್ರತಿರೂಪವನ್ನು ನೃತ್ಯಾಭಿನಯದಲ್ಲಿ ನೋಡೋಣ. ಅನುಭಾವಿ ಶರಣೆ ಅಕ್ಕನ ಅಂತರಂಗವನ್ನು ದರ್ಶಿಸೋಣ. ಅಭೇರಿ ರಾಗ, ತಾಳದಲ್ಲಿ ದರ್ಶನ ಮಾಡಿ ಜೀವನದ ಜಯಭೇರಿ ಪಡೆಯೋಣ.

**ಅಕ್ಕಮಹಾದೇವಿಯ ವಚನ**

ರಾಗ: ಅಭೇರಿ 'ಪ್ರಸಾದಿ' ರೂಪ

ಬೆಟ್ಟದಾಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯ?
ಸಮುದ್ರದ ತಡಿಯಲ್ಲಿ ಮನೆಯ ಮಾಡಿ ನೊರೆ ತೆರೆಗಳಿಗಂಜಿದೊಡೆಂತಯ್ಯಾ

ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯಾ?
"ಚೆನ್ನಮಲ್ಲಿಕಾರ್ಜುನದೇವ" ಕೇಳಯ್ಯಾ
ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿ ನಿಂದನೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

ಅಕ್ಕಮಹಾದೇವಿಯ ವಚನಗಳು ದ್ರಾಕ್ಷಾಪಾಕವಿದ್ದಂತೆ. ಈಕೆಯ ವಚನಗಳಲ್ಲಿ ಸಾಮಾಜಿಕ, ಆರ್ಥಿಕ, ಕಾಯಕ, ನೀತಿದಾಯಕ, ಅನುಭಾವಿಕ, ವೈರಾಗ್ಯಭಾವಿಕ, ಧಾರ್ಮಿಕ ಇತ್ಯಾದಿ ಎಲ್ಲಾ ರೀತಿಯ ವೈವಿಧ್ಯಮಯ, ಅರ್ಥಪೂರ್ಣ ಭಾವಗಳನ್ನು ಕಾಣಬಹುದು. ಆಕೆ ತನ್ನ ವಚನಗಳನ್ನು "ಚೆನ್ನಮಲ್ಲಿಕಾರ್ಜುನನಿಗೆ" ಅಂಕಿತಗೊಳಿಸಿದ್ದಾಳೆ. ಅಕ್ಕಮಹಾದೇವಿ ಶ್ರೇಷ್ಠ ಶರಣೆ ಅಷ್ಟೇ ಅಲ್ಲ, ಮಹಾವಿಚಾರವಂತೆ, ಕಾಯಕ ತಪಸ್ವಿ, ಕವಿಯಿತ್ರಿ, ವಿರಾಗಿಣಿ. ಈಗ ಪ್ರಸ್ತುತಪಡಿಸಲಾಗುವ ವಚನ ಒಂದು ಒಳ್ಳೆಯ ಭಾವಗೀತೆಯಂತಿದೆ. ಆಕೆ ಎಂತಹ ಮಹಾನ್ ಸಾಧಕಿ, ಅನುಭಾವಿ ಶರಣೆ ಎಂಬುದನ್ನು ವಚನದ ಸಾಲುಗಳು ಪ್ರತಿಬಿಂಬಿಸುತ್ತವೆ. ವಚನದ ಅಂತರಾರ್ಥ ಕಂಡಾಗ ಎಳೆಎಳೆಯಾಗಿ ಭಕ್ತಿಯ ಮಜಲುಗಳನ್ನು ಸೂಕ್ಷ್ಮವಾಗಿ ಪ್ರತಿಪಾದಿಸಲಾಗಿದೆ ಎಂಬುದನ್ನು ಗಮನಿಸಬಹುದು. ಭಾವಶುದ್ಧಿಯಿಂದ, ತ್ರಿಕರಣಶುದ್ಧಿಯಿಂದ ಭಕ್ತಿಯ ಮೆಟ್ಟಿಲುಗಳನ್ನು ಏರಿದರೆ "ಭಕ್ತಿಸಾಧನೆ" ಸಾಧ್ಯ ಎಂಬುದು ನಿತ್ಯಸತ್ಯ. ಅಭಿಷೇಕ, ಪುಷ್ಪ, ಧೂಪ, ದೀಪ ಇತ್ಯಾದಿ ಎಲ್ಲಾ ಬಾಹ್ಯಪೂಜೆಗಳೂ "ಅಂತರಂಗದ ಭಕ್ತಿ" ಇಲ್ಲದಿದ್ದರೆ "ವ್ಯರ್ಥ" ಎನಿಸಿಬಿಡುತ್ತದೆ. ಅಕ್ಕಮಹಾದೇವಿ ಆತ್ಮವಿಶ್ವಾಸದಿಂದ, ವಿನಯದಿಂದ ಚನ್ನಮಲ್ಲಿಕಾರ್ಜುನನಲ್ಲಿ ತನ್ನ ಅಂತರಂಗಭಕ್ತಿ ಎಷ್ಟು ಪರಿಶುದ್ಧವಾಗಿದೆ ಎಂಬುದನ್ನು ನಿವೇದಿಸಿದ್ದಾಳೆ ಈ ವಚನದಲ್ಲಿ. "ಅಂತರಂಗ ಬಹಿರಂಗಗಳೆರಡೂ ಶುದ್ಧವಿದ್ದಲ್ಲಿ ಮಾತ್ರ ಸಾಧನೆ ಸಾಧ್ಯ" ಎಂಬುದು ಆಕೆಯ ನಿಲುವು.

ಷಟ್ಸ್ಥಲದ ನಾಲ್ಕನೆಯ ಹಂತ "ಪ್ರಾಣಲಿಂಗಿ" ತತ್ವವನ್ನು ಈ ವಚನದ ಸಾಲುಗಳಲ್ಲಿ ಪ್ರತಿಪಾದಿಸಲಾಗಿದೆ.

ಅಕ್ಕಮಹಾದೇವಿಯ ವಚನಗಳು ಎಲ್ಲಾ ಸಮಕಾಲೀನ ಶರಣರ ವಚನಗಳಿಗಿಂತ ಶ್ರೇಷ್ಠ ಎನ್ನಲಾಗಿದೆ. ಅದು ಹೇಗೆ? ಎಂಬುದನ್ನು ಬಸವಣ್ಣನವರ ಈ ವಚನದಲ್ಲಿ ನೋಡಿ:

ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ
ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ಒಂದು ವಚನ, ನಿರ್ವಚನ ಕಾಣಾ ಸಿದ್ಧರಾಮಯ್ಯ!



ಈ ವಚನದ ನೃತ್ಯ ದೃಶ್ಯ ಕಾವ್ಯದ ಮೂಲಕ ಅಕ್ಕನ ಭಕ್ತಿಯ ಪರಿ ಎಂತಹುದು ಎಂಬುದನ್ನು ದರ್ಶಿಸೋಣ. ಸಾಧನೆಯ ಪಥದ ಪರಿಣಾಮಕಾರೀ ಅಂಶಗಳನ್ನು ಈ ವಚನದಲ್ಲಿ ಕಂಡು ಅನುಭಾವಿಗಳಾಗೋಣ.

**ಅಕ್ಕಮಹಾದೇವಿ ವಚನ**

ರಾಗ: ಬೇಹಾಗ್ ‘ಪ್ರಾಣಲಿಂಗಿ’ ತತ್ವ

ತನುಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು
ಮನಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು
ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯಾ ನೀನು
ಹೃದಯಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯಾ ನೀನು
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ?
ಚೆನ್ನಮಲ್ಲಿಕಾರ್ಜುನಯ್ಯಾ!

***

ಈಗ ಮುಂದೆ ಪ್ರಸ್ತುತಪಡಿಸುವ ವಚನದಲ್ಲಿ ಬಸವಣ್ಣನವರು ಭಕ್ತಿಮಾರ್ಗದ ಶ್ರೇಷ್ಠತೆಯನ್ನು ಎತ್ತಿ ಹಿಡಿದಿದ್ದಾರೆ. ಭಗವಂತನಲ್ಲಿ ಉತ್ಕಟಪ್ರೇಮದೊಂದಿಗೆ ತನ್ನಲ್ಲಿರುವ ಎಲ್ಲಾ ಉದಾತ್ತ ಭಾವನೆಗಳನ್ನು ನಿಸ್ವಾರ್ಥಭಾವದಿಂದ ಸ್ಥಿರಗೊಳಿಸುವುದೇ "ಭಕ್ತಿ". ನವವಿಧ ಭಕ್ತಿಗಳಾದ ಶ್ರವಣ, ಕೀರ್ತನೆ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ–ಇವುಗಳಲ್ಲಿ ಸಾಧಕ ತನ್ನ ಸ್ವಭಾವಕ್ಕೆ ಒಗ್ಗುವ ಮಾರ್ಗ ಅನುಸರಿಸಿ, ಮುಂದುವರಿಸಿದಲ್ಲಿ ಶರಣಾಗತನಾಗಿ ಕೂಡಲಸಂಗನಲ್ಲಿ ಐಕ್ಯನಾಗಬಹುದು ಎಂದು ಸೂಚಿಸಿದ್ದಾರೆ. ನಾದ, ವೇದಗಳು ಭಕ್ತಿಯ ಮೂಲವಾದರೂ, ಆಂತರಿಕ ಶ್ರದ್ಧೆ ಇದ್ದಲ್ಲಿ ಮಾತ್ರ ಭಕ್ತಿಪ್ರಿಯನಾಗಿ ಶಿವ ಒಲಿಯುತ್ತಾನೆ ಎಂದು ತಿಳಿಸಿದ್ದಾರೆ. ಪ್ರಾಪಂಚಿಕ ಆಸೆಗಳನ್ನು ತೊರೆದು, ಎಲ್ಲದರಲ್ಲಿ-ಎಲ್ಲರಲ್ಲಿ ದೈವೀಭಾವವನ್ನು ಕಂಡಾಗ ಮಾತ್ರ ಭಗವಂತ ಭಕ್ತನಿಗೆ ಕಾಣಸಿಗುತ್ತಾನೆ ಎಂಬುದು ಈ ವಚನದ ಅಂತರಾರ್ಥ ನಾದ-ಬಿಂದು-ಕಲೆಗಳಲ್ಲೂ ಮನವನ್ನು ತನ್ಮಯಗೊಳಿಸುವುದು ಏಕಾಗ್ರತೆಯೇ. ನಾದವೆಂದರೆ ಧ್ವನಿ ಆಹತ-ಅನಾಹತದ ನಾದಗಳಲ್ಲಿ ಒಂದನ್ನು ಬಳಸಿ, ಅದರಲ್ಲೇ ಲೀನವಾಗುವುದು ಏಕತಾನತೆ ಇದರಲ್ಲಿ ಧ್ಯೇಯವಸ್ತುವಿನಲ್ಲಿ ಮನಸ್ಸು ಕೇಂದ್ರೀಕರಣವಾಗಿರುತ್ತದೆ. ಅದರಿಂದ ಮನಸ್ಸಿಗೆ ಅದ್ಭುತಶಕ್ತಿ ಪ್ರಾಪ್ತವಾಗುತ್ತದೆ. "ಸಾಧಕನಿಗೆ, ಸತ್ಯವಸ್ತುವ ಬಿಟ್ಟು ಬೇರೇನೂ

ಕಾಣಲಿಲ್ಲ" ಎಂದಮೇಲೆ ಅದೇ ಏಕಾಗ್ರತ್ಛೆ ಇದರಿಂದಲೇ "ನಾನಾರೆಂಬ" "ಅರಿವಿನ" ದರ್ಶನ ಉಂಟಾಗುವುದು. ಇಂತಹ ಜ್ಞಾನದ ಸ್ವರೂಪ ನೃತ್ಯ ಅಭಿನಯದ ಮೂಲಕ ಮೂಡಿಬಂದಾಗ ಆಗುವ "ಸಚ್ಚಿದಾನಂದ"ವನ್ನು "ಹಂಸಾನಂದಿ" ರಾಗದಲ್ಲಿ ಶರಣಾಗಿ ಐಕ್ಯರಾಗಿ, (ಹಂಸಾನಂದ) ಆನಂದ ಪಡೆಯೋಣ, ಪುನೀತರಾಗೋಣ.

**ಬಸವಣ್ಣನವರ ವಚನ**

ರಾಗ: ಹಂಸಾನಂದಿ ‘ಶರಣ’ ತತ್ವ

ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲ
ವೇದಪ್ರಿಯ ಶಿವನೆಂಬರು ವೇದಪ್ರಿಯ ಶಿವನಲ್ಲ
ನಾದವನು ಮಾಡಿದ ರಾವಣಂಗೆ ಅರೆ ಆಯುಷ್ಯ
ವೇದವನು ಓದಿದ ಬ್ರಹ್ಮನ ಶಿರ ಹೋಯ್ತು
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ
ಭಕ್ತಿಪ್ರಿಯನು ನಮ್ಮ ಕೂಡಲಸಂಗಮದೇವ

"ದೇಹೋ ದೇವಾಲಯ ಪ್ರೋಕ್ತೋ" ಎಂಬ ಉಕ್ತಿಯ ಪ್ರತಿರೂಪದಂತಿದೆ ಬಸವಣ್ಣನವರ ಈ ವಚನ. ಶ್ರೀಮಂತ ವ್ಯಕ್ತಿ ಶಿವಾಲಯ ನಿರ್ಮಿಸಿದರೆ, ನಾನು (ಬಸವಣ್ಣ) ಬಡವ, ಶಿವಾಲಯ ಕಟ್ಟಲಾರೆ ಎಂದು ಆರ್ತರಾಗಿ ಬಿನ್ನವಿಸುತ್ತಾರೆ. ನಾನು ಹೃದಯ ಶ್ರೀಮಂತ, ನನಗೆ ಆ ದೇವಾಲಯದ ಆವಶ್ಯಕತೆ ಇಲ್ಲ. ದೇವಾಲಯದಲ್ಲಿ ಏನಿರಬೇಕೋ ಅದಕ್ಕಿಂತ ಹೆಚ್ಚು ಭಕ್ತಿ ನನ್ನಲ್ಲಿದೆ ಎಂದು ಹೇಳುವ ಪರಿ "ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರ ಹೊನ್ನ ಕಲಶ" ಈ ರೀತಿಯ ದೇಹ ಇದು ಜಂಗಮ, ಶಕ್ತಿಯುತವಾಗಿ ನಡೆಯಬಲ್ಲದು. ಆದರೆ ಕಲ್ಲುಗಾರೆಗಳಿಂದ ನಿರ್ಮಾಣವಾದ ಭವ್ಯ ದೇವಾಲಯ "ಸ್ಥಾವರ". ಅದು ಯಾವತ್ತಾದರೂ ಅಳಿಯುವಂತಾದ್ದು. ಹಾಗೆಯೇ, ಈ ದೇಹವು ಒಂದು ದಿನ ಭೂಮಿಗೆ ಒರಗುತ್ತದೆ. ಆದರೆ, "ಒಳಗಿರುವ ಪ್ರಾಣಚೈತನ್ಯ" ಅದಕ್ಕೆ ಸಾವಿಲ್ಲ, ಅದು ಶಾಶ್ವತ ಎಂದು ಹೋಲಿಸುವುದರ ಮೂಲಕ ಪ್ರಾಣ-ಆತ್ಮಕ್ಕೆ ಸಾವಿಲ್ಲ, ಎಂಬ ಆಧ್ಯಾತ್ಮಿಕ ಸತ್ಯವನ್ನು ಹೃದಯಂಗಮವಾಗಿ, ಬಸವಣ್ಣನವರು ಈ ವಚನದಲ್ಲಿ ತಿಳಿಸಿರುವುದು ನಿಜಕ್ಕೂ ಅರಿವಿನ ಹಾದಿಗೆ ಸೋಪಾನದಂತಿದೆ.

ಷಟ್ಸ್ಥಲದ ಕೊನೆಯ (6ನೆಯ) ಹಂತದಲ್ಲಿ ಸಾಧಕ/ಉಪಾಸಕ ಭಗವಂತನಲ್ಲಿ ಇಷ್ಟಲಿಂಗರೂಪದೊಡನೆ "ಐಕ್ಯ" ಹೊಂದುವುದು. ಇಲ್ಲಿ ಬರುವ ಆತ್ಮನಿವೇದನೆ (ಐಕ್ಯ)ಯ ಸ್ವರೂಪ ಬಹಳ ಮನಮುಟ್ಟುವಂತಹುದು. ಇದನ್ನು ಸಂಗೀತ-ನೃತ್ಯ-ಭಾವಾಭಿನಯದಲ್ಲಿ ನೋಡಿ ಆನಂದದಿಂದ ಭಗವಂತನಲ್ಲಿ ಐಕ್ಯರಾಗೋಣ.

ನಾವು ಈ ನೃತ್ಯರೂಪಕ/ನಾಟಕದಲ್ಲಿ ಪ್ರದರ್ಶಿಸಿರುವ ಪ್ರಾಮಾಣಿಕ ಪ್ರಯತ್ನದಲ್ಲಿ "ಷಟ್ಸ್ಥಲ"ದ ಕಲ್ಪನೆಯನ್ನು "ಕಥಾವಸ್ತು"ವನ್ನಾಗಿಸಿಕೊಳ್ಳಲಾಗಿದೆ. ತಮ್ಮಂತಹ



ಸುಸಂಸ್ಕೃತ ಶ್ರೋತೃಗಳು–ಒಂದು ರೀತಿ ಅನುಭಾವಿಗಳೆಂದೇ ಭಾವಿಸಿ, ತಮ್ಮಲ್ಲೇ "ಐಕ್ಯ"ವಾಗುವ ಕಲ್ಪನೆ ಇದಾಗಿದೆ. ಸಮಗ್ರ ವಚನಸಾಹಿತ್ಯವನ್ನು ಅವಲೋಕಿಸಿದರೆ ಅವರವರ ಭಾವಕ್ಕೆ- ಅವರವರ ಭಕುತಿಗೆ" ಎಂಬಂತೆ ಈ ನೃತ್ಯರೂಪಕ ಸ್ವಕಪೋಲಕಲ್ಪಿತ ಈ ನೃತ್ಯರೂಪಕ, ದೃಶ್ಯಕಾವ್ಯವಾಗಿ ಮೂಡಿಬರುವಂತೆ, ಶಿವಶಕ್ತಿಯರ ಸುಮಧುರ ಸಮ್ಮಿಲನವನ್ನು ಹೊರಸೂಸುವ ದಿಸೆಯಲ್ಲಿ ಸಂಗೀತ ರಾಗಗಳು ಮತ್ತು ಸಾಹಿತ್ಯವನ್ನು ಸರಳೀಕೃತ ಮಾಡಿ, ಜನಪ್ರಿಯ ರಾಗಗಳನ್ನು ಅಳವಡಿಸಿ, ಜನಪ್ರಿಯ ವಚನಗಳ ಸಾಹಿತ್ಯಾರ್ಥವನ್ನು ಈ ಪ್ರಥಮ ಪ್ರಯತ್ನದಲ್ಲಿ ಪ್ರಸ್ತುತಪಡಿಸಲಾಗಿದೆ. ತಮ್ಮಿಂದ ಉತ್ತಮ ಸಲಹೆ, ಸೂಚನೆಗಳು ಬಂದರೆ, ಅಗತ್ಯ ಬದಲಾವಣೆಗಳಿಗೆ ನಾವು ಸದಾ ಸಿದ್ಧ.

ಹೃದಯ ಬೃಂದಾವನದಲ್ಲಿ ಸಮಗ್ರ ವಚನ ಸಾಹಿತ್ಯದ ಪ್ರತಿನಿಧಿಸುವ ಷಟ್ಸ್ಥಲದ ಆರನೇ ತತ್ವ"ಐಕ್ಯ"ದ ಈ ಕಲ್ಪನೆಗೆ "ಬೃಂದಾವನ" ರಾಗವನ್ನೇ ಆರಿಸಿ "ಐಕ್ಯ" ಮಂತ್ರ ಅನುರಣಿಸಲಿ ಎಂದು ಆಶಿಸುತ್ತೇವೆ. ಈ "ಐಕ್ಯ" ಮಂತ್ರ ಇಡೀ ಪ್ರಪಂಚಕ್ಕೆ ಅತ್ಯಗತ್ಯ- ಹೌದು ತಾನೇ?

ಈ ಆಧ್ಯಾತ್ಮಿಕ ಅರಿವಿನಿಂದ "ವಚನ ವೈಭವ" ಸಂಗೀತ-ನೃತ್ಯರೂಪಕ ಅನುಭವ ಮಂಟಪ, ದೃಶ್ಯ ಕಾವ್ಯಕ್ಕೆ ಮಂಗಳವಾಗಲಿದೆ.

**ಬಸವಣ್ಣನವರ ವಚನ**

ರಾಗ: ಬೃಂದಾವನ

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ... ಬಡವನಯ್ಯಾ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರವೇ ಹೊನ್ನ ಕಲಶವಯ್ಯಾ
ಕೂಡಲಸಂಗಮದೇವಾ ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ

□

# ವಾರ್ತಾವಿಹಾರ

**ಯೋಗದಿಂದ ದೇಹದ ಮತ್ತು ಮನಸ್ಸಿನ ಸ್ವಾಸ್ಥ್ಯ**

ಮನುಷ್ಯನಿಗೆ ಮಾನಸಿಕ ಮತ್ತು ಶಾರೀರಿಕ ಸ್ವಾಸ್ಥ್ಯ ಮುಖ್ಯ ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ದಿನಾಂಕ 6.10.2013ರಂದು ಮೈಸೂರಿನ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ದಸರಾ ಮಹೋತ್ಸವದ ಅಂಗವಾಗಿ ಯೋಗ ದಸರಾ ಉಪ ಸಮಿತಿ ಆಯೋಜಿಸಿದ್ದ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಪರಮಪೂಜ್ಯರು ಮಾತನಾಡಿದರು.

ಮನಸ್ಸು ಸ್ವಾಸ್ಥ್ಯ ಇರಬೇಕಿದ್ದರೆ ಶರೀರ ಸ್ವಾಸ್ಥ್ಯವಿರಬೇಕು. ಶರೀರ ಸ್ವಾಸ್ಥ್ಯ ವಿರಬೇಕಿದ್ದರೆ ಮನಸ್ಸು ಸ್ವಾಸ್ಥ್ಯವಿರಬೇಕು. ಒಂದಕ್ಕೊಂದು ಪೂರಕವಾಗಿರುವುದರಿಂದ ಎರಡೂ ಸ್ವಾಸ್ಥ್ಯದಲ್ಲಿರಬೇಕು. ಭಾರತೀಯ ಯೋಗ ಪದ್ಧತಿ ಉಳಿದೆಲ್ಲಾ ಯೋಗ ಪದ್ಧತಿಯ ಮಾತೃವಿನಂತೆ ಇದೆ. ಶಾಶ್ವತ ಶಾಂತಿ ಮತ್ತು ಮಾನಸಿಕ ನೆಮ್ಮದಿಯನ್ನು ತಂದುಕೊಡುವ ಶಕ್ತಿ ಭಾರತೀಯ ಯೋಗಕ್ಕೆ ಇದೆ ಎಂದು ಹೇಳಿದರು.

ಯೋಗಕ್ಕೆ ಇದೊಂದು ಸಾಂಕೇತಿಕ ಕಾರ್ಯಕ್ರಮ. ಧರ್ಮಸ್ಥಳದ ಉಜಿರೆಯಲ್ಲಿ ಯೋಗಕ್ಕೆ ಬಹಳ ಪ್ರಾಮುಖ್ಯತೆ ನೀಡಲಾಗಿದೆ. ಸಹನೆ ಮತ್ತು ಶಾಂತಿ ನೀಡುವ ಯೋಗದ ಮೂಲಕ ಎಲ್ಲರಿಗೂ ಸಹನೆ ಮತ್ತು ಶಾಂತಿ ಲಭ್ಯವಾಗಲಿ ಎಂದರು.

ನಗರದ ವಿವಿಧ ಯೋಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು, ಸಾರ್ವಜನಿಕರು ಮತ್ತು ವಿದೇಶೀಯರೂ ಸೇರಿದಂತೆ ಸುಮಾರು 500 ಮಂದಿ ಈ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಪ್ರೊ. ಭಾಷ್ಯಂ ಸ್ವಾಮೀಜಿ, ಶ್ರೀ ವಚನಾನಂದ ಸ್ವಾಮೀಜಿ, ಶಾಸಕ ಶ್ರೀ ಎಂ.ಕೆ. ಸೋಮಶೇಖರ್, ಮೇಯರ್ ಶ್ರೀಮತಿ ಎನ್.ಎಂ. ರಾಜೇಶ್ವರಿ ಮುಂತಾದ ವರು ಭಾಗವಹಿಸಿದ್ದರು.

**ನೈರ್ಮಲ್ಯ ಸವಾಲಿನ ಕೆಲಸ**

ಈಗಿನ ಸನ್ನಿವೇಶದಲ್ಲಿ ನಮ್ಮ ಸುತ್ತಮುತ್ತಲಿನ ಪರಿಸರದ ನೈರ್ಮಲ್ಯವನ್ನು ಕಾಪಾಡುವುದು ಸವಾಲಿನ ಕೆಲಸವಾಗಿದೆ. ಹೀಗಾಗಿ ನಗರದ ಸ್ವಚ್ಛತೆ ಕಾಪಾಡುವ



ಹೊಣೆಗಾರಿಕೆಯನ್ನು ಪ್ರತಿಯೊಬ್ಬ ನಾಗರಿಕನೂ ಹೊರಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಹೇಳಿದರು.

ದಿನಾಂಕ 7.10.2013 ರಂದು ದಸರಾ ವ್ಯವಸ್ಥೆ ಮತ್ತು ಸ್ವಚ್ಛತಾ ಉಪ ಸಮಿತಿ ವತಿಯಿಂದ ಮೈಸೂರು ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಏರ್ಪಡಿಸಿದ್ದ ಸ್ವಚ್ಛತಾ ಜಾಥಾವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸ್ವಚ್ಛತೆಯ ನಿರ್ವಹಣೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ. ಈ ನಿಟ್ಟಿನಲ್ಲಿ ಕಾಲೇಜು ಯುವಕ ಯುವತಿಯರೂ ಕೂಡ ಸ್ವಚ್ಛತೆ ಕಾಪಾಡುವ ಜೊತೆಗೆ, ಸಮಾಜದ ಪ್ರತಿಯೊಬ್ಬರೂ ಪರಿಸರ ರಕ್ಷಣೆ ಹಾಗೂ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಕೈ ಜೋಡಿಸಬೇಕೆಂದು ಕರೆ ನೀಡಿದರು.

ನಾಡಹಬ್ಬ ದಸರೆಯ ಸಂದರ್ಭದಲ್ಲಿ ಶುಚಿತ್ವಕ್ಕೆ ಆದ್ಯತೆ ನೀಡಬೇಕೆಂಬ ಉದ್ದೇಶದಿಂದ ನಗರದಲ್ಲಿ ಸೋಮವಾರ ವಿವಿಧ ಧರ್ಮಗುರುಗಳಿಂದ ಶುಚಿತ್ವ ಜಾಗೃತಿ ಸಂಗಮ ರ್‍ಯಾಲಿಯನ್ನು ಏರ್ಪಡಿಸಲಾಗಿತ್ತು. ಸ್ವಚ್ಛತಾ ಜಾಥಾದಲ್ಲಿ ವಿವಿಧ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಹಾಗೂ ನಾಗರಿಕರು, ಮೈಸೂರಿನ ಜನತೆಗೆ ಸ್ವಚ್ಛತೆ ಕಾಪಾಡುವ ಕುರಿತು ಜಾಗೃತಿ ಮೂಡಿಸಿದರು.

ವಿವಿಧ ಕಾಲೇಜುಗಳಿಂದ ಆಗಮಿಸಿದ್ದ ನೂರಾರು ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಜಾಥಾದಲ್ಲಿ ಭಾಗವಹಿಸಿದ್ದರು. ಇವರೊಂದಿಗೆ ವಿವಿಧ ಧರ್ಮಗುರುಗಳು ಹಾಗೂ ಮಠಾಧೀಶರು ಕೂಡಾ ಪಾಲ್ಗೊಂಡು ಪರಿಸರವನ್ನು ಶುಚಿಯಾಗಿಡಿ ಎಂದು ಕರೆ ನೀಡಿದರು. ಬಿಳಿಯ ಬಣ್ಣದ ಟೀ ಶರ್ಟ್‌ಗಳನ್ನು ಧರಿಸಿದ್ದ ವಿದ್ಯಾರ್ಥಿಗಳು ಕೈಯಲ್ಲಿ ವಿವಿಧ ಘೋಷಣೆಗಳ ಫಲಕಗಳು ಹಾಗೂ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಜನಸಾಮಾನ್ಯರು ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಸಾರ್ವಜನಿಕರ ಗಮನ ಸೆಳೆದರು.

ಈ ಸಂದರ್ಭದಲ್ಲಿ ಆದಿಚುಂಚನಗಿರಿ ಮಠದ ಪೂಜ್ಯ ಶ್ರೀ ಸೋಮನಾಥ ಸ್ವಾಮೀಜಿ, ಶಿವಯೋಗಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಕ್ರೈಸ್ತ ಧರ್ಮಗುರು ರೆವರೆಂಡ್ ಥಾಮಸ್ ಆಂಟನಿ ವಾಜಪಿಳ್ಳೈ, ಬೌದ್ಧಭಿಕ್ಷು ಶ್ರೀ ಮನೋರಕ್ಷಿತ ಭಂತೇಜಿ, ಮಹಾಪೌರರಾದ ಶ್ರೀಮತಿ ಎನ್.ಎಂ. ರಾಜೇಶ್ವರಿ, ಉಪ ಮಹಾಪೌರರಾದ ಶ್ರೀ ವಿ. ಶೈಲೇಂದ್ರ, ಪಾಲಿಕೆ ಆಯುಕ್ತ ಶ್ರೀ ಪಿ.ಜಿ. ರಮೇಶ್ ಮುಂತಾದವರು ಭಾಗವಹಿಸಿದ್ದರು.

**ಭವ್ಯ ಸಂಸ್ಕೃತಿಯ ವಾರಸುದಾರರ ಅಗತ್ಯ**

ಸಂಸ್ಕೃತಿ ಚಿಂತನ ಎಂಬುದು ನಿರಂತರ ಪ್ರಕ್ರಿಯೆ. ಲೋಕ ಕಲ್ಯಾಣಕ್ಕಾಗಿ ಹುಟ್ಟಿದ ಹಾಗೂ ವಿಕಸಿಸಿದ ಈ ಸಂಸ್ಕೃತಿಯ ರಕ್ಷಣೆಗಾಗಿ ಜವಾಬ್ದಾರಿಯುತ ವಾರಸುದಾರರನ್ನು

ರೂಪಿಸಿ ಪ್ರಸಾರಪಡಿಸಲು ಸಜ್ಜುಗೊಳಿಸುವ ಹೊಣೆ ಇಂದಿನ ಯುವ ಸಾಧಕರ ಮೇಲೆ ಇದೆ ಎಂದು ಪರಮಪೂಜ್ಯ ಜಗದ್ಗುರು ಅಭಿಪ್ರಾಯ ವ್ಯಕ್ತಪಡಿಸಿದರು.

ದಿನಾಂಕ 16.10.2013 ರಂದು ಬೆಂಗಳೂರಿನ ಭಾರತೀಯ ಸಾಂಸ್ಕೃತಿಕ ಪರಿಷತ್ತಿನ ವತಿಯಿಂದ ಬೆಳಗಾವಿಯ ಶಿವಬಸವ ನಗರದಲ್ಲಿರುವ ನಾಗನೂರು ರುದ್ರಾಕ್ಷಿಮಠದ ಸಹಯೋಗದಲ್ಲಿ ಮಠಾಧಿಪತಿಗಳು ಹಾಗೂ ಸಾಧಕರಿಗಾಗಿ ಹಮ್ಮಿಕೊಂಡಿದ್ದ ಮೂರು ದಿನಗಳ ಚಿಂತನ ಶಿಬಿರದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ನ್ಯಾಯಮೂರ್ತಿ ಸುಭಾಷ ಬಿ. ಆಡಿ ಉದ್ಘಾಟಿಸಿ, ಭಾರತೀಯ ಸಂಸ್ಕೃತಿ ಅಪರೂಪದಲ್ಲಿ ಅಪರೂಪದ್ದು, ಹಿರಿಯರ ಬಗೆಗಿನ ಗೌರವವನ್ನು ನಿರಂತರವಾಗಿ ಇಟ್ಟುಕೊಂಡು ಬಂದಿರುವ ಭಾರತೀಯರು ಪ್ರಪಂಚಕ್ಕೆ ಆದರ್ಶಪ್ರಾಯರಾಗಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಬಿಜಾಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿ ಮಾತನಾಡಿ, ಜೀವನವನ್ನು ನೋಡುವ ದೃಷ್ಟಿ ಸುಂದರವಾಗಿರಬೇಕೆಂದರು. ಜಗದಗಲ ಮುಗಿಲಗಲ ವ್ಯಾಪಿಸಿದ ಭಾರತದ ಸಂಸ್ಕೃತಿ ಕ್ರಿಯಾತ್ಮಕ, ಭಾವನಾತ್ಮಕ ಹಾಗೂ ವೈಚಾರಿಕ ದೃಷ್ಟಿಯಿಂದ ಅಮೂಲ್ಯ ಕೊಡುಗೆ ಕೊಟ್ಟಿದೆ. ಪ್ರಪಂಚಕ್ಕೆ ಶೂನ್ಯ ಕೊಡುಗೆ ನೀಡಿದ, ಅಣುಶಾಸ್ತ್ರದ ಪರಿಕಲ್ಪನೆಯನ್ನು ಮೊದಲಿಗೆ ಕೊಟ್ಟ ವಿಜ್ಞಾನಿಗಳು ಭಾರತೀಯರು ಎಂಬುದು ಹೆಮ್ಮೆಯ ಸಂಗತಿ. ವಸುದೈವ ಕುಟುಂಬಕಂ ಎಂಬ ಅನನ್ಯ ನುಡಿ ನೀಡಿದ ನಮ್ಮ ಅನುಭಾವಿಗಳು ತತ್ವಜ್ಞಾನಿಗಳು ವೈಚಾರಿಕ ಜಗತ್ತನ್ನು ಶ್ರೀಮಂತಗೊಳಿಸಿದವರು. ನಮ್ಮ ಭಾವಲೋಕವನ್ನು ಭವ್ಯಗೊಳಿಸಿದ ಬಸವಾದಿ ಶಿವಶರಣರು ಸಮಾಜದ ಒಳಿತಿಗಾಗಿ ಕಾಯಕ ಮತ್ತು ದಾಸೋಹದಂತಹ ಮೌಲ್ಯಗಳನ್ನು ಪರಿಚಯಿಸಿ ಪರಿಸರವನ್ನು ಹಸನುಗೊಳಿಸಿದರು ಎಂದು ಹೇಳಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿ ಸ್ವಾಗತಿಸಿದ ನಾಗನೂರು ರುದ್ರಾಕ್ಷಿಮಠದ ಡಾ. ಸಿದ್ಧರಾಮ ಸ್ವಾಮಿಗಳು ಹತ್ತು ವರ್ಷಗಳಿಂದ ದೇಶದ ಬೇರೆ ಬೇರೆ ಭಾಗಗಳಲ್ಲಿ ನಡೆದುಕೊಂಡು ಬಂದಿರುವ ಸಂಸ್ಕೃತಿ ಚಿಂತನ ಶಿಬಿರವು ಬೆಳಗಾವಿಯಲ್ಲಿ ನಡೆಯುತ್ತಿರುವುದು ಇಲ್ಲಿನ ಸಾಧಕರಿಗೆ ಒಂದು ಸದವಕಾಶವಾಗಿದೆ ಎಂದರು.

ಡಾ. ರಾಧಾಕೃಷ್ಣನ್ ಅವರ ತರುವಾಯ ನಾಡು ಕಂಡ ಶ್ರೇಷ್ಠ ತತ್ವಜ್ಞಾನಿ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು. ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಸಮರ್ಥ ಮಾರ್ಗದರ್ಶನದಲ್ಲಿ ಜರುಗುತ್ತಿರುವ ಈ ಶಿಬಿರ ನಮ್ಮ ಸಾಧಕರಿಗೆ ಸಂಸ್ಕೃತಿ ಚಿಂತನ ನಡೆಸುವ ನಿಟ್ಟಿನಲ್ಲಿ ಮಹಾಮಾರ್ಗ ನಿರ್ಮಿಸಲೆಂದು ಹಾರೈಸಿದರು. ನಿವೃತ್ತ ಪ್ರಾಚಾರ್ಯ ಶ್ರೀ ಬಸವರಾಜ ಜಗಜಂಪಿ ಆಶಯ ನುಡಿಗಳನ್ನಾಡಿದರು.



**ಬ್ಯಾಂಕಿನ ಸೌಲಭ್ಯಗಳು ನಿರಂತರವಾಗಿ ವಿಸ್ತರಿಸಲಿ**

ಇಂಡಿಯನ್ ಓವರ್‌ಸಿಸ್ ಬ್ಯಾಂಕ್ ವತಿಯಿಂದ ಮೈಸೂರು ನಗರದ ವಿನೋಬಾ ರಸ್ತೆಯಲ್ಲಿ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಯೊಂದನ್ನು ತೆರೆಯಲಾಯಿತು. ಕಚೇರಿಯನ್ನು ಪರಮಪೂಜ್ಯ ಜಗದ್ಗುರುಗಳು ದಿನಾಂಕ 20.10.2013 ರಂದು ಉದ್ಘಾಟಿಸಿದರು.

ನಂತರ ಮಾತನಾಡಿದ ಪರಮಪೂಜ್ಯರು, ರೈತರು, ಗ್ರಾಮೀಣ ಪ್ರದೇಶದ ಜನರು ಸೇರಿದಂತೆ ಇನ್ನಿತರೆ ವರ್ಗದವರಿಗೂ ಸೇವಾ ಸೌಲಭ್ಯಗಳನ್ನು ವಿಸ್ತರಿಸುವ ಕೆಲಸಗಳು ಆಗಬೇಕು. ಬ್ಯಾಂಕಿನ ಸೇವಾ ಸೌಲಭ್ಯಗಳು ಗ್ರಾಮೀಣ ಭಾಗದ ಜನರಿಗೆ ತಲುಪುವುದರಿಂದ ಉತ್ತಮ ಯಶಸ್ಸನ್ನು ಕಾಣುತ್ತಾರೆ. ಗ್ರಾಮದ ಅಭಿವೃದ್ಧಿ ಸಹ ಆಗುತ್ತದೆ. ಆ ಹಿನ್ನೆಲೆಯಲ್ಲಿ ನಿರಂತರವಾಗಿ ಬ್ಯಾಂಕಿನ ಸೌಲಭ್ಯಗಳು ವಿಸ್ತರಿಸಲಿ ಎಂದು ಸಲಹೆ ನೀಡಿದರು.

ಇದೇ ವೇಳೆ ರೈತರಿಗಾಗಿ ಐದು ಕೋಟಿ ರೂ.ವರೆಗಿನ ಕೃಷಿ ಸಾಲವನ್ನು ವಿತರಿಸಲಾಯಿತು. ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಶ್ರೀ ವೀರೇಂದ್ರ ಹೆಗ್ಗಡೆಯವರು, ಐಓಬಿ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ಡಾ. ಎಂ. ನರೇಂದ್ರ, ಹಿರಿಯ ಪ್ರಾದೇಶಿಕ ವ್ಯವಸ್ಥಾಪಕ ಶ್ರೀ ಎಸ್. ನರಸಿಂಹನ್, ಬೆಂಗಳೂರು ನ್ಯಾಷನಲ್ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಶ್ರೀ ಸಿ.ಎಸ್. ವಸಂತಕುಮಾರ್ ಉಪಸ್ಥಿತರಿದ್ದರು.

**ಭಾವೈಕ್ಯತೆ ಭಾರತೀಯತೆಯ ದೊಡ್ಡ ಶಕ್ತಿ**

ಅನೇಕಗಳಲ್ಲಿ ಒಂದಾಗಿ ಬಾಳುವುದೇ ಭಾರತೀಯತೆಯ ದೊಡ್ಡ ಶಕ್ತಿ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ದಿನಾಂಕ 21.1.2013 ರಂದು ಬೆಂಗಳೂರಿನ ಶ್ರೀ ಶಿವರಾತ್ರೀಶ್ವರ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಮೃದ್ಧ ಸಾಹಿತ್ಯ ಪ್ರಕಾಶನ ಹೊರತಂದಿರುವ ಆರ್‌ಎಸ್‌ಎಸ್‌ನ ಹಿರಿಯ ಕಾರ್ಯಕರ್ತ ದಿವಂಗತ ಮೋಹನ್‌ಕುಮಾರ್ ಅವರ ಜೀವನ-ಹೋರಾಟ ಕುರಿತಾದ ಕೃತಿ 'ಅದ್ವಿತೀಯ' ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಪೂಜ್ಯರು ಮಾತನಾಡಿದರು.

ಅನೇಕ ಧರ್ಮ, ಜಾತಿ, ಸಂಸ್ಕೃತಿ, ಆಚರಣೆಗಳು ನಮ್ಮಲ್ಲಿವೆ. ಈ ಅನೇಕಗಳ ನಡುವೆಯೇ ನಾವೆಲ್ಲಾ ಒಂದಾಗಿ ಬಾಳುತ್ತಿರುವುದೇ ನಮ್ಮ ದೊಡ್ಡ ಶಕ್ತಿಯಾಗಿದೆ. ಈ ರೀತಿ ಸಮಾಜ ಮತ್ತು ಧರ್ಮವನ್ನು ಒಟ್ಟಾಗಿಸುವ ಚುಂಬಕ ಶಕ್ತಿಯನ್ನು ಶ್ರೀ ಮೋಹನ್ ಕುಮಾರ್ ತಮ್ಮ ವ್ಯಕ್ತಿತ್ವದಲ್ಲಿ ರೂಢಿಸಿಕೊಂಡಿದ್ದವರು ಎಂದು ಶ್ಲಾಘಿಸಿದರು.

ಎಲ್ಲಿಯವರೆಗೆ ದೇಶ ಸಾಂಸ್ಕೃತಿಕವಾಗಿ ಸಂಪನ್ನವಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಸದೃಢರಾಗಲು ಸಾಧ್ಯವಿಲ್ಲ. ದೇಶದ ಸಂಸ್ಕೃತಿ ರಕ್ಷಣೆಗೆ ತೊಡಗಿಸಿಕೊಂಡ ಸರಳ

ವ್ಯಕ್ತಿತ್ವದ ಶ್ರೀ ಮೋಹನ್‌ಕುಮಾರ್ ಯುವಕರಿಗೆ ಮಾದರಿಯಾಗಿದ್ದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ ಮಾತನಾಡಿ, ಆದರ್ಶ-ತ್ಯಾಗದ ಬಗ್ಗೆ ಮಾತನಾಡುವುದು ಸುಲಭ, ಜೀವಿಸುವುದು ಕಷ್ಟ. ಬೆಂಗಳೂರಿನಲ್ಲಿ ಹೆಸರು ಹೇಳದ ಹೊರತು ಹುಡುಗ-ಹುಡುಗಿಯರ ನಡುವೆ ವ್ಯತ್ಯಾಸವೇ ಗೊತ್ತಾಗದಷ್ಟು ಕಾಲ ಬದಲಾಗಿದೆ. ಇಂತಹ ಬೆಂಗಳೂರಿನಲ್ಲಿ ನಮ್ಮ ಸಂಸ್ಕೃತಿ ಬಗ್ಗೆ ಯುವಕರಲ್ಲಿ ಅಭಿರುಚಿ, ಆಸಕ್ತಿ ಬೆಳೆಸಿ ಅವರನ್ನು ಅಪಾರವಾಗಿ ಸಂಘಟಿಸಿದ್ದವರು ಶ್ರೀ ಮೋಹನ್‌ಕುಮಾರ್ ಎಂದರು. ಲೇಖಕ ಶ್ರೀ ಸುರೇಶ್‌ಮೂನ ಮಾತನಾಡಿ, ಶ್ರೀ ಮೋಹನ್ ಕುಮಾರ್ ನಿಜವಾದ ಅರ್ಥದಲ್ಲಿ ಬೆಂಗಳೂರನ್ನು ಕಟ್ಟಿದವರು ಎಂದು ಹೇಳಿದರು.

**ಜನ್ಮಭೂಮಿಗೆ ಕೊಡುಗೆ ನೀಡುವುದನ್ನು ಮರೆಯಬಾರದು**

ಇಂದಿನ ಶಿಕ್ಷಣ ವಿದ್ಯಾರ್ಥಿಗಳನ್ನು ತಯಾರಿಸುತ್ತಿದೆ. ಆದರೆ ಅವರಿಗೆ ಬೇಕಾದ ಜ್ಞಾನ ನೀಡಲು ವಿಫಲವಾಗುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳು ಅಭಿಪ್ರಾಯಪಟ್ಟರು.

ದಿನಾಂಕ 21.10.2013ರಂದು ಬೆಂಗಳೂರಿನ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘದಿಂದ ಬಸವೇಶ್ವರ ಕಾಲೇಜು ಕೆಇಬಿ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಸುವರ್ಣ ಮಹೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಐಷಾರಾಮಿ ಜೀವನದ ಕನಸು ಹೊತ್ತು ಪಾಶ್ಚಿಮಾತ್ಯ ರಾಷ್ಟ್ರದತ್ತ ಹೋಗುವವರು ಹುಟ್ಟಿದ ದೇಶಕ್ಕೆ ಕೊಡುಗೆ ನೀಡುವುದನ್ನು ಮರೆಯಬಾರದು. ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘ ಶಿಕ್ಷಣ ಕ್ಷೇತ್ರದಲ್ಲೂ ತೊಡಗಿಕೊಂಡು ವಿದ್ಯಾರ್ಜನೆ ಮಾಡುತ್ತಿರುವುದು ಉತ್ತಮ ವಿಚಾರ ಎಂದರು. ಬಸವಣ್ಣನವರು ತಮ್ಮ ವಚನಗಳ ಮೂಲಕ ಈ ದೇಶದ ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿದರು. ಸಮುದಾಯವನ್ನು ಸಂಘಟಿಸಿ ಜಾತಿ ಮತಗಳ ಎಲ್ಲೆ ಮೀರಿ ವಿಶ್ವಮಾನವ ಪ್ರಜ್ಞೆಯನ್ನು ಜಗತ್ತಿಗೆ ನೀಡಿದರು. ತಮ್ಮ ವಚನಗಳಿಂದ ಬಸವಾದಿ ಪ್ರಥಮರು ಶಾಶ್ವತರಾದರು ಎಂದು ಹೇಳಿದರು.

ಸ್ಮರಣ ಸಂಚಿಕೆಯನ್ನು ಸಹಕಾರ ಸಚಿವ ಶ್ರೀ ಎಚ್.ಎಸ್. ಮಹದೇವಪ್ರಸಾದ್ ಬಿಡುಗಡೆ ಮಾಡಿದರು. ಶಾಸಕ ಶ್ರೀ ಎಸ್. ಸುರೇಶ್‌ಕುಮಾರ್ ರಜತ ನಾಣ್ಯ ಬಿಡುಗಡೆಗೊಳಿಸಿದರು. ಸಮಾರಂಭದಲ್ಲಿ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘದ ಅಧ್ಯಕ್ಷ ಶ್ರೀ ಎಸ್.ಎಸ್. ದೊಡ್ಡಣ್ಣನವರ, ಶಾಸಕ ಶ್ರೀ ಅಶೋಕ ಖೇಣಿ ಮುಂತಾದವರು ಉಪಸ್ಥಿತರಿದ್ದರು.

□



ಕೇಂದ್ರ ಸಚಿವ ಶ್ರೀ ಆಸ್ಕರ್ ಫರ್ನಾಂಡಿಸ್ ಮತ್ತು ಶ್ರೀಮತಿ ಆಸ್ಕರ್ ಫರ್ನಾಂಡಿಸ್ ರವರು ಮೈಸೂರು ಶ್ರೀಮಠಕ್ಕೆ ಭೇಟಿ ನೀಡಿ ಶ್ರೀಗಳವರ ಆಶೀರ್ವಾದ ಪಡೆದರು. ಚಿತ್ರದಲ್ಲಿ ಸಂಸದರಾದ ಶ್ರೀ ಆರ್. ಧ್ರುವನಾರಾಯಣ್, ಶ್ರೀ ಅಡಗೂರು ವಿಶ್ವನಾಥ್ ಮತ್ತು ಶಾಸಕ ಶ್ರೀ ಎಂ.ಕೆ. ಸೋಮಶೇಖರ್ ಅವರುಗಳಿದ್ದಾರೆ



ಮೈಸೂರಿನಲ್ಲಿ ದಸರಾ ಮಹೋತ್ಸವ ಸಂದರ್ಭದಲ್ಲಿ ಯೋಗ ದಸರಾ ಉದ್ಘಾಟನೆ: ಚಿತ್ರದಲ್ಲಿ ಶ್ರೀ ಕೆ.ಆರ್. ಮೋಹನ್‌ಕುಮಾರ್, ಶ್ರೀ ಭಾಷ್ಯಂ ಸ್ವಾಮೀಜಿ, ಪರಮಪೂಜ್ಯ ಜಗದ್ಗುರುಗಳು, ಶ್ರೀ ವಚನಾನಂದ ಸ್ವಾಮೀಜಿ, ಶಾಸಕ ಶ್ರೀ ಎಂ.ಕೆ. ಸೋಮಶೇಖರ್ ಮುಂತಾದವರು.




ಮುಖ್ಯಪ್ರಾಣ ಸಾಂಸ್ಕೃತಿಕ ಅಕಾಡೆಮಿ ವತಿಯಿಂದ ಡಾ. ಅನಸೂಯ ಅವರ 'ಭುವನದ ಬೆಳಕು ವಾಲ್ಮೀಕಿ ಮಹರ್ಷಿ' ಕೃತಿ ಬಿಡುಗಡೆ : ಚಿತ್ರದಲ್ಲಿ ಶ್ರೀ ಪಿಂಟು, ಪರಮಪೂಜ್ಯ ಜಗದ್ಗುರುಗಳು, ಡಾ. ದೇಜಗೌ, ಡಾ. ಸಿ.ಪಿ.ಕೆ. ಡಾ. ಕೆ. ಅನಂತರಾಮು, ಶಾಸಕರಾದ ಶ್ರೀ ವಾಸು ಮತ್ತು  ಶ್ರೀ ಚಂದ್ರಶೇಖರ್




ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಆರನೆಯ ಪದವೀಧರ ದಿನಾಚರಣೆ ಸಮಾರಂಭದಲ್ಲಿ ಶೈಕ್ಷಣಿಕ ಡೀನ್ ಪ್ರೊ. ಎಂ.ಬಿ. ಮಲ್ಲಿಕಾರ್ಜುನ ಪಂಡಿತ್, ಪ್ರಾಂಶುಪಾಲರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ ನಿರ್ದೇಶಕರಾದ ಪ್ರೊ. ಎ.ಎನ್. ರಾಯ್ ಮತ್ತು ಶ್ರೀಮತಿ ರಾಯ್, ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಶ್ರೀ ಬಿ.ಎನ್. ಬೆಟ್‌ಕೆರೂರ್, ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಟಿ.ಡಿ. ಸುಬ್ಬಣ್ಣ ಹಾಗೂ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ. ಎಸ್. ಕುಮಾರ್